# ಕಿಯಾಮು ರಮದಾನ್ ಮತ್ತು ಇಅ್ತಿಕಾಫ್

ಕಿಯಾಮು ರಮದಾನ್ ಮತ್ತು ಇಅ್ತಿಕಾಫ್

بسم الله الرحمن الرحيم

**ಪರಮ ದಯಾಮಯನೂ ಕರುಣಾಮಯಿಯೂ**
**ಆದ ಅಲ್ಲಾಹುವಿನ ನಾಮದಿಂದ**

الشيخ العلامة محمد ناصرالدين الألباني رحمه الله تعالى

ಅಶ್ಶೈಖ್ ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ(رحمه الله)

# قِيَامُ رَمَضَان

فَضله وَكَيفيَّة أدائِه وَمَشرُوعيَّة الجَمَاعَة فيه

وَمَعَهُ بَحْثٌ قَيِّمٌ عَنِ الاعْتِكاف

# ಕಿಯಾಮು ರಮದಾನ್

ಅದರ ಶ್ರೇಷ್ಠತೆ, ಅದನ್ನು ನಿರ್ವಹಿಸಬೇಕಾದ ರೂಪ ಮತ್ತು ಶರೀಅತ್
ಪ್ರಕಾರ ಅದನ್ನು ಜಮಾಅತ್ ಆಗಿ ನಿರ್ವಹಿಸುವುದು

ಮತ್ತು

# ಇಅ್‌ತಿಕಾಫ್

ಎಂಬ ವಿಷಯದಲ್ಲಿರುವ ಅಮೂಲ್ಯ ಸಂಶೋಧನೆ

ಅನುವಾದ:

ಮುಹಮ್ಮದ್ ಹಂಝ಼ಾ ಪುತ್ತೂರು

ಪ್ರಕಾಶಕರು:

ಮನ್‌ಹಜ್ ಅಲ್‌ಅಂಬಿಯಾ ಕಾಲ್ & ಗೈಡೆನ್ಸ್ ಸೆಂಟರ್

ಮಂಗಳೂರು

ALL RIGHTS RESERVED © جميع الحقوق محفوظة

no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

First Edition: : May 2013

Title : Qiyam Ramadan Mattu I'tikaf
Author : As Shaykh Muhammad Nasiruddin Al Albany
Translation: Muhammad Hamza Puttur
Printers : Pixel Printers & Designers, Mangalore
Copies : 2000
Price : 40.00

Typesetting & DTP :

IMAGE PUBLICATIONS
PUTTUR - 574 201
*imageputtur@hotmail.com*

---

PUBLISHERS:

Manhaj-Al-Ambiya
Call & Guidance Centre
Mangalore - 575 001
*email: al.ambiya@gmail.com*
*dawathu-salafiyya@hotmail.com*

# ಒಳಪುಟಗಳಲ್ಲಿ....


ಎರಡನೆ ಮುದ್ರಣದ ಪ್ರಸ್ತಾವನೆ 9

ಮೊದಲನೆ ಮುದ್ರಣದ ಪ್ರಸ್ತಾವನೆ 10

ಕಿಯಾಮು ರಮದಾನ್ 25

- ರಮದಾನ್ ತಿಂಗಳ ರಾತ್ರಿಗಳಲ್ಲಿ ನಮಾಝ್ ಮಾಡುವುದರ ಶ್ರೇಷ್ಠತೆಗಳು 25
- ಲೈಲತುಲ್ ಕದ್ರ್ ಮತ್ತು ಅದರ ನಿಶ್ಚಿತ ಸಮಯ 26
- ರಾತ್ರಿ ನಮಾಝನ್ನು ಜಮಾಅತ್ ಆಗಿ ನಿರ್ವಹಿಸುವುದು ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ 28
- ರಾತ್ರಿ ನಮಾಝನ್ನು ಜಮಾಅತ್ ಆಗಿ ನಿರ್ವಹಿಸುವುದನ್ನು ಪ್ರವಾದಿ(ﷺ)ರವರು ಮುಂದುವರಿಸದಿರಲು ಕಾರಣ 30
- ಕಿಯಾಮು ರಮದಾನನ್ನು ಮಹಿಳೆಯರು ಜಮಾಅತ್ ಆಗಿ ನಿರ್ವಹಿಸುವುದು ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ 31
- ರಾತ್ರಿ ನಮಾಝ್‌ನ ರಕ್‌ಅತ್‌ಗಳ ಸಂಖ್ಯೆ 32
- ರಾತ್ರಿ ನಮಾಝ್‌ನಲ್ಲಿ ಕುರ್‌ಆನ್ ಪಾರಾಯಣ 34
- ರಾತ್ರಿ ನಮಾಝಿನ ಸಮಯ 36
- ರಾತ್ರಿ ನಮಾಝನ್ನು ನಿರ್ವಹಿಸುವ ವಿವಿಧ ರೂಪಗಳು 39
- ವಿತ್ರ್‌ನ ಮೂರು ರಕ್‌ಅತ್‌ಗಳಲ್ಲಿ ಪಾರಾಯಣ 42
- ಕುನೂತ್‌ನ ದುಆ ಮತ್ತು ಅದರ ಸ್ಥಳ 42
- ವಿತ್ರ್‌ನ ಕೊನೆಯಲ್ಲಿ ಏನು ಹೇಳಬೇಕು 45
- ಇದರ ನಂತರದ ಎರಡು ರಕ್‌ಅತ್ 45

ಇಅ್‌ತಿಕಾಫ್ 47

ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ 47

ಅದರ ಶರತ್ತುಗಳು 49

ಇಅ್‌ತಿಕಾಫ್‌ನಲ್ಲಿರುವವನಿಗೆ ಏನೆಲ್ಲ ಅನುಮತಿಸಲಾಗಿದೆ? 51

ಮಹಿಳೆಗೆ ಇಅ್‌ತಿಕಾಫ್ ನಿರ್ವಹಿಸಲು ಮತ್ತು ಮಸೀದಿಯಲ್ಲಿ ಇಅ್‌ತಿಕಾಫ್‌ನಲ್ಲಿರುವ ತನ್ನ ಪತಿಯನ್ನು ಸಂದರ್ಶಿಸಲು ಅನುಮತಿಯಿದೆ 53

# كلـــمة النـــاشر

بسم الله الرحمن الرحيم

الحمد لله رب العالمين، والصلاة والسلام على أشرف الأنبياء والمرسلين، وآله وصحبه أجمعين، أما بعد:

كلنا مأمورون باتباع الكتاب والسنة النبوية الصحيحة والرجوع إليهما عند التنازع والاختلاف، وترك الأقوال المخالفة لهما. وهذا أيضا وصية الأئمة الأربعة وغيرهم من السلف الصالحين.

وبصدد مسألة صلاة التراويح وعدد ركعاتها، فقد صح عن النبي صلى الله عليه وآله وسلم أنه صلى إحدى عشرة ركعة. فعلينا التزام العدد الذي صح عنه صلى الله عليه وآله وسلم وعدم الزيادة عليه، لأنه لم يصح عنه أنه صلى أكثر من ذلك. هذا اختيار الشيخ المؤلف رحمه الله تعالى. وبالإضافة، فقد جمع الشيخ رحمه الله تعالى في هذه الرسالة فوائد كثيرة قل ما توجد في غيرها من الرسائل والكتب، وأضاف إليها بحثا قيما عن الاعتكاف.

فنسأل الله سبحانه وتعالى أن يجعلها في ميزان حسناته وأن ينفع بها المسلمين وأن يضاعف الأجر لمترجمها ولكل من سعى في نشرها وإيصالها إلى من يستفيد منها إنه سبحانه جواد كريم.

وصلى الله على نبينا محمد وآله وصحبه وسلم.

**الناشرون**

بِسْمِ اللَّهِ الرَّحْمَٰنِ الرَّحِيمِ

## مُقَدِّمَةُ الطَّبْعَةِ الثَّانِيَةِ

## ಎರಡನೆ ಮುದ್ರಣದ ಪ್ರಸ್ತಾವನೆ

ಸರ್ವ ಸ್ತುತಿಗಳು ಅಲ್ಲಾಹನಿಗೆ. ಸಂದೇಶವಾಹಕರ ಮೇಲೆ, ಅವರ ಸಹಾಬಾಗಳ ಮೇಲೆ ಮತ್ತು ಅವರ ಸುನ್ನತ್ತನ್ನು ಅನುಸರಿಸಿದವರ ಮೇಲೆ ಮತ್ತು ಅದಕ್ಕೆ ಬದ್ಧರಾಗಿರುವವರ ಮೇಲೆ ಸಲಾತ್ ಮತ್ತು ಸಲಾಮ್‌ಗಳು ಇರಲಿ.

ಮುಂದುವರಿದು ಹೇಳುವುದೇನೆಂದರೆ,

ಇದು **'ಕಿಯಾಮು ರಮದಾನ್'** ಎಂಬ ನನ್ನ ಪ್ರಬಂಧದ ಎರಡನೆ ಮುದ್ರಣವಾಗಿದೆ. ಇದರ ಮೊದಲನೆ ಮುದ್ರಣದ ಪ್ರತಿಗಳು ಮುಗಿದು ಹೋದ ಕಾರಣ ಮತ್ತು ಇದಕ್ಕಿರುವ ಬೇಡಿಕೆಯು ಹೆಚ್ಚಾದ ಕಾರಣ, ಈ ವರ್ಷದ (ಹಿ. 1406) ಅನುಗ್ರಹಪೂರ್ಣವಾದ (ರಮದಾನ್) ತಿಂಗಳು ಹತ್ತಿರವಾಗುತ್ತಿರುವ ಈ ಸುಸಂದರ್ಭದಲ್ಲಿ ನಾನಿದನ್ನು ಮಾನ್ಯ ಓದುಗರಿಗೆ ಸಮರ್ಪಿಸುತ್ತಿದ್ದೇನೆ. ನಾನು ಈ ಕೃತಿಯನ್ನು ಪುನರಾವಲೋಕನ ಮಾಡಿ, ಉತ್ತಮಗೊಳಿಸಿದ್ದೇನೆ. ಅನೇಕ ತಖ್ರೀಜ್‌ಗಳನ್ನು ಮತ್ತು ಹೊಸ ವಿಷಯಗಳನ್ನು ಸೇರಿಸಿದ್ದೇನೆ. ಅಲ್ಲಾಹು ಇಚ್ಛಿಸಿದರೆ ಓದುಗರು ಅದರಿಂದ ಹರ್ಷಪಡುವರು. ಅವುಗಳ ಪೈಕಿ ಪ್ರಮುಖವಾದುದು 'ಇಅ್ತಿಕಾಫ್'ನ ವಿಷಯದಲ್ಲಿರುವ ಸೇರ್ಪಡೆಗಳಾಗಿವೆ.

ಸರಿಯಾದುದಕ್ಕೆ ನನ್ನನ್ನು ಸೇರಿಸುವಂತೆ ಮತ್ತು ಸರಿಯಾದುದರಿಂದ ನನ್ನ ಗ್ರಹಣಶಕ್ತಿಯು ತಪ್ಪಿಹೋಗಿರುವ ಹಾಗೂ ನನ್ನ ಲೇಖನಿಯು ಜಾರಿಹೋಗಿರುವ ವಿಷಯಗಳಲ್ಲಿ ನನ್ನನ್ನು ಕ್ಷಮಿಸುವಂತೆ ಹಾಗೂ ಇದನ್ನು ಅವನ ಮುಖವನ್ನು ಮಾತ್ರ ಆಶಿಸುವ ಒಂದು ಕರ್ಮವನ್ನಾಗಿ ಮಾಡುವಂತೆ ನಾನು ಅಲ್ಲಾಹನೊಂದಿಗೆ ಬೇಡುತ್ತಿದ್ದೇನೆ. ಖಂಡಿತವಾಗಿಯೂ ಅವನು ಕ್ಷಮಿಸುವವನೂ ಗೌರವಾರ್ಹನೂ ಆಗಿದ್ದಾನೆ.

**ಅಮ್ಮಾನ್ (ಜೋರ್ಡಾನ್)**

**ಶಅ್‌ಬಾನ್ 7, 1406 ಹಿಜರಿ**

**ಇದನ್ನು ಬರೆದವರು**

**ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ**

بِسْمِ اللَّهِ الرَّحْمَٰنِ الرَّحِيمِ

## مُقَدِّمَةُ الطَّبْعَةِ الْأُولَى

## ಮೊದಲನೆ ಮುದ್ರಣದ ಪ್ರಸ್ತಾವನೆ

ಖಂಡಿತವಾಗಿಯೂ ಸ್ತುತಿಗಳೆಲ್ಲವೂ ಅಲ್ಲಾಹನಿಗೆ. ನಾವು ಅವನನ್ನು ಸ್ತುತಿಸುತ್ತೇವೆ, ಅವನೊಂದಿಗೆ ಸಹಾಯ ಯಾಚನೆ ಮಾಡುತ್ತೇವೆ ಮತ್ತು ಅವನೊಂದಿಗೆ ಪಾಪಮುಕ್ತಿಯನ್ನು ಬೇಡುತ್ತೇವೆ. ನಮ್ಮ ದೇಹಗಳ ಕೆಡುಕುಗಳಿಂದ ಮತ್ತು ನಮ್ಮ ಕರ್ಮಗಳ ಕೆಡುಕುಗಳಿಂದ ನಾವು ಅವನೊಂದಿಗೆ ರಕ್ಷಣೆಯನ್ನು ಬೇಡುತ್ತೇವೆ. ಅಲ್ಲಾಹು ಯಾರಿಗೆ ಮಾರ್ಗದರ್ಶನ ಮಾಡುತ್ತಾನೋ ಅವನನ್ನು ಪಥಭ್ರಷ್ಟಗೊಳಿಸುವವರಾರೂ ಇಲ್ಲ. ಅವನು ಯಾರನ್ನು ಪಥಭ್ರಷ್ಟಗೊಳಿಸುತ್ತಾನೋ ಅವನಿಗೆ ಮಾರ್ಗದರ್ಶನ ಮಾಡುವವರಾರೂ ಇಲ್ಲ. ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆಂದು ನಾನು ಸಾಕ್ಷಿ ವಹಿಸುತ್ತೇನೆ. ಮುಹಮ್ಮದ್(ﷺ)ರವರು ಅವನ ದಾಸರೂ ಸಂದೇಶವಾಹಕರೂ ಆಗಿದ್ದಾರೆಂದು ನಾನು ಸಾಕ್ಷಿ ವಹಿಸುತ್ತೇನೆ.

ಮುಂದುವರಿದು ಹೇಳುವುದೇನೆಂದರೆ,

ಇಬ್ನ್ ಮಸ್‌ಊದ್(رضي الله عنه)ರಿಂದ ಮೌಕೂಫ್ ಆದ ರೂಪದಲ್ಲಿ ಸಹೀಹಾಗಿ ವರದಿಯಾಗಿರುವ, ಆದರೆ ನಿಯಮ ಪ್ರಕಾರ ಪ್ರವಾದಿ(ﷺ)ರವರ ವರೆಗೆ ಮರ್ಫೂಅ್ ಆಗಿರುವ, (ಒಂದು ಹದೀಸಿನಲ್ಲಿ) ಅವರು (ಇಬ್ನ್ ಮಸ್‌ಊದ್) ಹೇಳುತ್ತಾರೆ:

كَيْفَ أَنْتُمْ إِذَا لَبِسَتْكُمْ فِتْنَةٌ يَهْرَمُ فِيهَا الْكَبِيرُ، وَيَرْبُو فِيهَا الصَّغِيرُ، وَيَتَّخِذُهَا النَّاسُ سُنَّةً، إِذَا تُرِكَ مِنْهَا شَيْءٌ قِيلَ: تُرِكَتِ السُّنَّةُ؟

قَالُوا: وَمَتَى هِيَ؟

قَالَ: إِذَا ذَهَبَتْ عُلَمَاؤُكُمْ، وَكَثُرَتْ قُرَّاؤُكُمْ، وَقَلَّتْ فُقَهَاؤُكُمْ، وَكَثُرَتْ أُمَرَاؤُكُمْ، وَقَلَّتْ أُمَنَاؤُكُمْ، وَالْتُمِسَتِ الدُّنْيَا بِعَمَلِ الْآخِرَةِ، وَتُفُقِّهَ لِغَيْرِ الدِّينِ.

**“ನಿಮ್ಮ ಪೈಕಿ ಹಿರಿಯರು ವೃದ್ಧರಾಗುವಂತಹ, ಕಿರಿಯರು ಬೆಳೆದವರಾಗುವಂತಹ, ಜನರು ಅದನ್ನೊಂದು ಸುನ್ನತ್ತನ್ನಾಗಿ ಸ್ವೀಕರಿಸುವಂತಹ ಮತ್ತು ಅದರಿಂದ ಏನನ್ನಾದರೂ ತಿರಸ್ಕರಿಸಲಾದರೆ ಸುನ್ನತ್ತನ್ನು ತಿರಸ್ಕರಿಸಲಾಯಿತೇ? ಎಂದು ಕೇಳಲಾಗುವಂತಹ ಒಂದು ಪರೀಕ್ಷೆಯು ನಿಮ್ಮನ್ನು ಬಾಧಿಸಿದರೆ ನಿಮ್ಮ ಸ್ಥಿತಿ ಹೇಗಿರಬಹುದು?”**

**ಅವರು (ಜನರು) ಕೇಳಿದರು: “ಅದು ಯಾವಾಗ ಸಂಭವಿಸುವುದು?”**

**ಅವರು (ಇಬ್ನ್ ಮಸ್‌ಊದ್) ಹೇಳಿದರು: “ನಿಮ್ಮ ಉಲಮಾಗಳು ಹೊರಟುಹೋದಾಗ (ಮರಣಹೊಂದಿದಾಗ), ನಿಮ್ಮ ಪಾರಾಯಣಗಾರರು ಹೆಚ್ಚಾದಾಗ, ನಿಮ್ಮ ಫುಕಹಾಗಳು (ಕರ್ಮಶಾಸ್ತ್ರ ವಿದ್ವಾಂಸರು) ಕಡಿಮೆಯಾದಾಗ, ನಿಮ್ಮ ನಾಯಕರು ಹೆಚ್ಚಾದಾಗ, ನಿಮ್ಮ ವಿಶ್ವಾಸಯೋಗ್ಯರು ಕಡಿಮೆಯಾದಾಗ, ಪರಲೋಕಕ್ಕಾಗಿರುವ ಅಮಲ್‌ನಿಂದ ಇಹಲೋಕವನ್ನು ಅರಸಲಾದಾಗ ಮತ್ತು ಧರ್ಮವಲ್ಲದ ಇತರ ವಿಷಯಗಳಿಗಾಗಿ ಪಾಂಡಿತ್ಯವನ್ನು ಪಡೆಯಲಾದಾಗ (ಅದು ಸಂಭವಿಸುತ್ತದೆ).”** [1]

ನಾನು ಹೇಳುತ್ತೇನೆ: ಈ ಹದೀಸ್ ಪ್ರವಾದಿ(ﷺ)ರವರ ಪ್ರವಾದಿತ್ವದ ಚಿಹ್ನೆಗಳಲ್ಲಿ ಮತ್ತು ಅವರ ಸಂದೇಶವಾಹಕತ್ವದ ಸತ್ಯತೆಯಲ್ಲಿ ಸೇರಿದ್ದಾಗಿದೆ. ಯಾಕೆಂದರೆ ಇದರಲ್ಲಿರುವ ಪ್ರತಿಯೊಂದು ಅಂಶವೂ ಪ್ರಸಕ್ತ ಕಾಲದಲ್ಲಿ ಸತ್ಯವಾಗಿ ಪರಿಣಮಿಸಿದೆ. ಬಿದ್‌ಅತ್‌ಗಳು ಹೆಚ್ಚಾಗಿರುವುದು, ಜನರು ಅವುಗಳಿಂದಾಗಿ ಪರೀಕ್ಷಿಸಲ್ಪಟ್ಟು ಅವುಗಳನ್ನು ಸುನ್ನತ್ತಾಗಿ ಸ್ವೀಕರಿಸಿರುವುದು ಮತ್ತು ಜನರು ಅವುಗಳನ್ನು ಅನುಸರಿಸಲಾಗುವಂತಹ ಒಂದು ಧರ್ಮವನ್ನಾಗಿ ಮಾಡಿಕೊಂಡಿರುವುದು ಹಾಗೂ ನೈಜ ಸುನ್ನತ್ತಿನ ಜನರು ಅವುಗಳನ್ನು ತಿರಸ್ಕರಿಸಿ ಪ್ರವಾದಿ(ﷺ)ರವರಿಂದ ದೃಢಪಟ್ಟಿರುವ ಸುನ್ನತ್ತಿನೆಡೆಗೆ ಚಲಿಸಿದಾಗ **‘ಸುನ್ನತ್ತನ್ನು ತಿರಸ್ಕರಿಸಲಾಗಿದೆ!’** ಎಂದು ಹೇಳಲಾಗುತ್ತಿರುವುದು ಇದಕ್ಕಿರುವ ಕೆಲವು ಉದಾಹರಣೆಗಳಾಗಿವೆ.

ನಾವು, ಶಾಮ್‌ನಲ್ಲಿರುವ ಸುನ್ನತ್ತಿನ ಜನರು, ಹನ್ನೊಂದು ರಕ್‌ಅತ್ ಆಗಿರುವ

---

**1** ಇದನ್ನು ಅದ್ದಾರಿಮೀ (1/64) ಒಂದು ಸಹೀಹ್ ಹಾಗೂ ಇನ್ನೊಂದು ಹಸನ್ ಆಗಿರುವ ಎರಡು ಸನದ್‌ಗಳ ಮೂಲಕ ಮತ್ತು ಅಲ್‌ಹಾಕಿಮ್ (4/514) ಹಾಗೂ ಮತ್ತಿತರರು ವರದಿ ಮಾಡಿದ್ದಾರೆ.

ತರಾವೀಹ್ ನಮಾಝ್ ಎಂಬ ಸುನ್ನತ್ತನ್ನು ಜೀವಂತಗೊಳಿಸಿದಾಗ ಮತ್ತು ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅದರಲ್ಲಿರುವ ಪ್ರಶಾಂತತೆ, ಭಕ್ತಿ ಮತ್ತು ಪ್ರವಾದಿ(ﷺ)ರಿಂದ ದೃಢಪಟ್ಟಿರುವ ವಿವಿಧ ದಿಕ್ರ್‌ಗಳು ಮೊದಲಾದವುಗಳನ್ನು ಜೋಪಾನವಾಗಿ ಪಾಲಿಸಿದಾಗ ಇದು (ಈ ಪರೀಕ್ಷೆಯು) ನಮಗೂ ಬಾಧಿಸಿತ್ತು. ತರಾವೀಹ್ ನಮಾಝನ್ನು ಇಪ್ಪತ್ತು ರಕ್‌ಅತ್ ಆಗಿ ನಿರ್ವಹಿಸುವ ಬಹುಸಂಖ್ಯಾತರು ಇವೆಲ್ಲವನ್ನು ತಿರಸ್ಕರಿಸಿದ್ದರೂ ಸಹ, 'ಸಲಾತು ತ್ತರಾವೀಹ್' ಎಂಬ ನಮ್ಮ ಪ್ರಬಂಧವನ್ನು ನಾವು ಪ್ರಕಟಿಸಿದಾಗ ಅವರ ರೋಷವು ಕುದಿಯತೊಡಗಿತು ಮತ್ತು ಅವರ ಕೋಪವು ಕಟ್ಟೆಯೊಡೆಯಿತು. ಇದಕ್ಕೆ ಕಾರಣ 'ತಸ್ದೀದುಲ್ ಇಸಾಬಃ ಇಲಾ ಮನ್ ಝಅಮ ನುಸ್ರತಲ್ ಖುಲಫಾಇ ರ್‍ರಾಶಿದೀನ ವಸ್ಸಹಾಬಃ' ಎಂಬ ನಮ್ಮ ಗ್ರಂಥದಲ್ಲಿರುವ ಪ್ರಬಂಧಗಳ ಪೈಕಿ ಎರಡನೆ ಪ್ರಬಂಧವಾಗಿರುವ ಈ ಕೃತಿಯಲ್ಲಿ ನಾವು ಈ ಕೆಳಗಿನ ವಿಷಯಗಳ ಬಗ್ಗೆ ದೃಢೀಕರಿಸಿದ್ದಾಗಿದೆ:

1. ಪ್ರವಾದಿ(ﷺ)ರವರು ಹನ್ನೊಂದು ರಕ್‌ಅತ್‌ಗಿಂತ ಹೆಚ್ಚು ತರಾವೀಹ್ ನಮಾಝ್ ಮಾಡಿಲ್ಲ.
2. ಸಹೀಹಾದ ಸುನ್ನತ್ತಿನ ಪ್ರಕಾರ ಉಮರ್(ರ)ರವರು ಉಬಯ್ಯ್ ಇಬ್ನ್ ಕಅ್‌ಬ್ ಮತ್ತು ತಮೀಮ್ ಅದ್ದಾರಿಯವರೊಂದಿಗೆ ತರಾವೀಹ್ ನಮಾಝ್ ಮಾಡಲು ಆದೇಶಿಸಿದ್ದು ಹನ್ನೊಂದು ರಕ್‌ಅತ್‌ಗಳನ್ನಾಗಿದೆ.
3. **'ಉಮರ್(ರ)ರವರ ಕಾಲದಲ್ಲಿ ಜನರು ರಮದಾನ್ ತಿಂಗಳಲ್ಲಿ ಇಪ್ಪತ್ತು ರಕ್‌ಅತ್ ನಮಾಝ್ ನಿರ್ವಹಿಸುತ್ತಿದ್ದರು'** ಎಂಬ ವರದಿಯು ಶಾದ್ದ್ (ವಿಶ್ವಾಸಯೋಗ್ಯರು ತಮಗಿಂತಲೂ ಹೆಚ್ಚು ವಿಶ್ವಾಸಯೋಗ್ಯರ ಹದೀಸಿಗೆ ವಿರುದ್ಧವಾಗಿ ವರದಿ ಮಾಡುವ ಹದೀಸ್) ಮತ್ತು ದಈಫ್ ಆಗಿದೆ. ಮಾತ್ರವಲ್ಲದೆ (ತರಾವೀಹ್ ನಮಾಝ್) ಹನ್ನೊಂದು ರಕ್‌ಅತ್ ಆಗಿದೆ ಮತ್ತು ಉಮರ್(ರ)ರವರು (ಹನ್ನೊಂದು ರಕ್‌ಅತ್ ನಿರ್ವಹಿಸಲು) ಆದೇಶ ನೀಡಿದ್ದಾರೆ ಎನ್ನುವ ವಿಶ್ವಾಸಯೋಗ್ಯರ ವರದಿಗೆ ಅದು ವಿರುದ್ಧವಾಗಿದೆ.
4. ಶಾದ್ದ್ ಆಗಿರುವ ವರದಿಯನ್ನು ಸಹೀಹ್ ಎಂದು ಪರಿಗಣಿಸಿದರೂ ಸಹ ಸಹೀಹ್ ಎಂದು ದೃಢಪಟ್ಟಿರುವ ವರದಿಗಳನ್ನು ಸ್ವೀಕರಿಸುವುದು ಹೆಚ್ಚು ಯೋಗ್ಯವಾಗಿದೆ. ಯಾಕೆಂದರೆ ಅವು (ರಕ್‌ಅತ್‌ಗಳ) ಸಂಖ್ಯೆಯಲ್ಲಿ ಸುನ್ನತ್ತಿನೊಂದಿಗೆ ಹೊಂದಾಣಿಕೆಯಾಗುತ್ತವೆ. ಮಾತ್ರವಲ್ಲದೆ, ಉಮರ್(ರ)ರವರು ಇಪ್ಪತ್ತು ರಕ್‌ಅತ್ ನಿರ್ವಹಿಸಬೇಕೆಂದು ಆದೇಶ ನೀಡಿದ್ದಾಗಿ ಅದರಲ್ಲಿಲ್ಲ. ಅದರಲ್ಲಿರುವುದು ಜನರು ಇಪ್ಪತ್ತು ರಕ್‌ಅತ್ ನಿರ್ವಹಿಸುತ್ತಿದ್ದರು ಎಂಬುದು ಮಾತ್ರವಾಗಿದೆ. ಇದು ಸಹೀಹಾದ ವರದಿಗಳಿಗೆ ವಿರುದ್ಧವಾಗಿದೆ. ಯಾಕೆಂದರೆ ಅವುಗಳಲ್ಲಿ (ಸಹೀಹಾದ ವರದಿಗಳಲ್ಲಿ) ಅವರು [ಉಮರ್(ರ)] ಹನ್ನೊಂದು ರಕ್‌ಅತ್ ನಿರ್ವಹಿಸಬೇಕೆಂದು ಆದೇಶ

ನೀಡಿದ್ದಾಗಿ ವರದಿಯಾಗಿದೆ.

5. ಅದನ್ನು (ಶಾದ್ದ್ ಆಗಿರುವ ವರದಿಯನ್ನು) ಸಹೀಹ್ ಎಂದು ಪರಿಗಣಿಸಿದರೂ ಸಹ, ಸುನ್ನತ್ತಿಗೆ ಹೊಂದಾಣಿಕೆಯಾಗಿರುವ ಸಹೀಹಾದ ವರದಿಗಳನ್ನು ತಿರಸ್ಕರಿಸಿ ಅದರ ಪ್ರಕಾರ ಅಮಲ್ ಮಾಡುವುದು ಅನಿವಾರ್ಯವಾಗುವುದಾಗಲಿ, ಅಥವಾ ಅದನ್ನು ತಿರಸ್ಕರಿಸಿ ಸುನ್ನತ್ತಿನ ಪ್ರಕಾರ ಅಮಲ್ ಮಾಡುವವನನ್ನು ಜಮಾಅತ್‌ನಿಂದ ಹೊರಹೋದವನೆಂದು ಪರಿಗಣಿಸುವುದಾಗಲಿ ಅನಿವಾರ್ಯವಾಗುವುದಿಲ್ಲ. ಬದಲಾಗಿ ಅದರಿಂದ ಆತ್ಯಂತಿಕವಾಗಿ ಸಿಗುವ ಪ್ರಯೋಜನವೇನೆಂದರೆ ಪ್ರವಾದಿ (ﷺ)ರವರು ನಿರ್ವಹಿಸಿರುವುದನ್ನು ಮತ್ತು ನಿರ್ವಹಿಸುತ್ತಾ ಬಂದಿರುವುದನ್ನು (ಅಂದರೆ ಹನ್ನೊಂದು ರಕ್‌ಅತ್) ನಿರ್ವಹಿಸುವುದು ಅತಿಶ್ರೇಷ್ಠವಾಗಿದೆ ಎಂಬುದು ಖಚಿತವಾಗಿ ದೃಢಪಟ್ಟಿರುವುದರ ಹೊರತಾಗಿಯೂ ಇಪ್ಪತ್ತು ರಕ್‌ಅತ್ ನಮಾಝ್ ನಿರ್ವಹಿಸುವುದಕ್ಕೆ ಅನುಮತಿಯಿದೆ ಎಂಬುದು ಮಾತ್ರವಾಗಿದೆ.
6. ಗೌರವಾನ್ವಿತ ಸಹಾಬಾಗಳ ಪೈಕಿ ಯಾರೂ ಇಪ್ಪತ್ತು ರಕ್‌ಅತ್ ನಿರ್ವಹಿಸಿದ್ದಾಗಿ ರುಜುವಾತುಪಟ್ಟಿಲ್ಲ ಎಂಬುದನ್ನು ಕೂಡ ನಾವು ಅದರಲ್ಲಿ ವಿವರಿಸಿದ್ದೇವೆ.
7. (ತರಾವೀಹ್ ನಮಾಝ್) ಇಪ್ಪತ್ತು ರಕ್‌ಅತ್ ಆಗಿದೆಯೆಂಬ ವಿಷಯದಲ್ಲಿ ಅವರು (ಸಹಾಬಾಗಳು) ಒಮ್ಮತಾಭಿಪ್ರಾಯ ಹೊಂದಿದ್ದಾರೆಂದು ವಾದಿಸುವವನ ವಾದವು ನಿರರ್ಥಕವಾಗಿದೆಯೆಂಬುದನ್ನೂ ನಾವು ಅದರಲ್ಲಿ ಸ್ಪಷ್ಟಪಡಿಸಿದ್ದೇವೆ.
8. ಸುನ್ನತ್ತಿನಲ್ಲಿ ದೃಢಪಟ್ಟ ಸಂಖ್ಯೆಗೆ (ಹನ್ನೊಂದು ರಕ್‌ಅತ್‌ಗೆ) ಬದ್ಧವಾಗಿರಬೇಕೆಂಬುದನ್ನು ಆವಶ್ಯಪಡುವ ಪುರಾವೆಯನ್ನು ಮತ್ತು ಉಲಮಾಗಳ ಪೈಕಿ ಕೆಲವರು ಇದಕ್ಕಿಂತ (ಹನ್ನೊಂದಕ್ಕಿಂತ) ಹೆಚ್ಚು ನಿರ್ವಹಿಸುವುದನ್ನು ವಿರೋಧಿಸಿರುವುದನ್ನು ಹಾಗೂ ಒಂದೇ ಗ್ರಂಥದಲ್ಲಿ ಒಟ್ಟಾಗಿ ಕಾಣಲಾಗದ ಅನೇಕ ಪ್ರಯೋಜನಗಳನ್ನು ನಾವು ಅದರಲ್ಲಿ ವಿವರಿಸಿದ್ದೇವೆ.

ಇವೆಲ್ಲವನ್ನೂ ನಾವು ಸಹೀಹಾದ ಸುನ್ನತ್ತಿನಲ್ಲಿ ಸ್ಪಷ್ಟವಾಗಿರುವ ಪುರಾವೆಗಳ ಮೂಲಕ ಮತ್ತು ಅವಲಂಬನಾರ್ಹವಾದ ಆಸಾರ್‌ಗಳ ಮೂಲಕ ವಿವರಿಸಿದ್ದೇವೆ. ಮುಕಲ್ಲಿದ್‌ಗಳಾದ (ಅಂಧಾನುಕರಣೆ ಮಾಡುವ) ಶೈಖ್‌ಗಳ ಒಂದು ಗುಂಪಿಗೆ –ಅವರಲ್ಲಿ ಕೆಲವರು ತಮ್ಮ ಭಾಷಣಗಳಲ್ಲಿ, ಕೆಲವರು ತಮ್ಮ ತರಗತಿಗಳಲ್ಲಿ ಮತ್ತು ಕೆಲವರು ಮೇಲೆ ವಿವರಿಸಿದ ನಮ್ಮ ಪ್ರಬಂಧಕ್ಕೆ ಉತ್ತರವಾಗಿ[2] ಬರೆದ ಪ್ರಬಂಧಗಳಲ್ಲಿ– ನಮ್ಮ ಮೇಲೆ ಹಿಂಸಾತ್ಮಕ ದಾಳಿ ಮಾಡಲು ಇದು ಕಾರಣವಾಗಿದೆ. ಆದರೆ ಅವೆಲ್ಲವೂ ಪ್ರಯೋಜನಕಾರಿಯಾದ

**2** ನಾನು ಅರಿತಿರುವ ಪ್ರಕಾರ ಇವುಗಳಲ್ಲಿ ಕಟ್ಟಕಡೆಯದು ಮುಹಮ್ಮದ್ ಅಲೀ ಅಸ್ಸಾಬೂನೀ ಎಂಬವರು ತಮ್ಮ 'ಅಲ್‌ಹದ್ಯು ನ್ನಬವಿಯ್ಯು ಸ್ಸಹೀಹು ಫೀ ಸಲಾತಿ ತ್ತರಾವೀಹ್' ಎಂಬ ಹೆಸರಿನ ಪ್ರಬಂಧದಲ್ಲಿ ಬರೆದ ಉತ್ತರವಾಗಿದೆ. 'ಸಿಲ್ಸಿಲತುಲ್ ಅಹಾದೀಸಿ ಸ್ಸಹೀಹಃ' ಎಂಬ ನನ್ನ ಗ್ರಂಥದ ನಾಲ್ಕನೆ ಭಾಗದ ಪ್ರಸ್ತಾವನೆಯಲ್ಲಿ ನಾನು ಇದಕ್ಕೆ ಬರೆದ ಪ್ರತ್ಯುತ್ತರವನ್ನು ನೋಡಿರಿ.

ಜ್ಞಾನವನ್ನಾಗಲಿ, ಸೂಕ್ತವಾದ ಪುರಾವೆಯನ್ನಾಗಲಿ ಹೊಂದಿಲ್ಲ, ಬದಲಾಗಿ ಅವೆಲ್ಲವೂ ಸತ್ಯದ ವಿರುದ್ಧ ಮತ್ತು ಅದರ ಜನರ ವಿರುದ್ಧ ದಾಳಿ ಮಾಡುವವರ ಅಭ್ಯಾಸದಂತೆ ಕೇವಲ ದೂಷಣೆ ಮತ್ತು ಅವಹೇಳನಗಳನ್ನು ಹೊಂದಿವೆ. ಆದ್ದರಿಂದ ಅವರಿಗೆ ಉತ್ತರ ಕೊಡುವ ಅಥವಾ ಅವರ ಮಾತುಗಳಲ್ಲಿರುವ ಪ್ರಮಾದಗಳನ್ನು ತೋರಿಸುವ ಮೂಲಕ ನಮ್ಮ ಸಮಯವನ್ನು ಹಾಳು ಮಾಡುವುದರಲ್ಲಿ ದೊಡ್ಡ ಪ್ರಯೋಜನವಿರಬಹುದೆಂದು ನಮಗೆ ಅನ್ನಿಸುತ್ತಿಲ್ಲ. ಇದು ಯಾಕೆಂದರೆ ಅಂತಹ ಬಹುಸಂಖ್ಯಾತರಿಗಾಗಿ ಸಮಯವನ್ನು ವ್ಯಯಿಸುವಷ್ಟು ಆಯುಷ್ಯವು ದೀರ್ಘವಾಗಿಲ್ಲ ಎಂಬುದರಿಂದಾಗಿದೆ. ಅಲ್ಲಾಹು ಅವರೆಲ್ಲರಿಗೂ ಮಾರ್ಗದರ್ಶನ ಮಾಡಲಿ.

ಆದರೆ ಅವರ ಪೈಕಿ ಒಬ್ಬರ ಮೂಲಕ –ನನ್ನ ಪ್ರಕಾರ ಇವರು ಅವರ ಪೈಕಿ ಶ್ರೇಷ್ಠರು ಮತ್ತು ಹೆಚ್ಚು ಇಲ್ಮ್ ಇರುವವರಾಗಿದ್ದಾರೆ[3]– ಒಂದು ಉದಾಹರಣೆಯನ್ನು ನೀಡುವುದರಲ್ಲಿ ತೊಂದರೆಯಿರಲಾರದೆಂದು ನಾನು ಭಾವಿಸುತ್ತೇನೆ. ಆದರೆ ಇಲ್ಮ್‌ನೊಂದಿಗೆ ಇಖ್ಲಾಸ್ ಮತ್ತು ಉದಾತ್ತ ಸ್ವಭಾವವು ಜೊತೆಗೂಡದಿದ್ದರೆ ಅದನ್ನು (ಇಲ್ಮನ್ನು) ಹೊಂದಿರುವವನಿಗೆ ಅದರಿಂದ ಪ್ರಯೋಜನಕ್ಕಿಂತಲೂ ಹೆಚ್ಚು ಹಾನಿಯೇ ಉಂಟಾಗುತ್ತದೆ. ಪ್ರವಾದಿ(ﷺ)ರವರ ವಚನವು ಇದರೆಡೆಗೆ ಸೂಚನೆ ನೀಡುತ್ತದೆ:

«مَثَلُ الَّذِي يُعَلِّمُ النَّاسَ الْخَيْرَ وَيَنْسَى نَفْسَهُ، كَمَثَلِ السِّرَاجِ يُضِيءُ لِلنَّاسِ وَيُحْرِقُ نَفْسَهُ».

**“ಜನರಿಗೆ ಒಳಿತನ್ನು ಕಲಿಸಿ ಸ್ವತಃ ತನ್ನನ್ನು ಮರೆತುಬಿಡುವವನ ಉದಾಹರಣೆಯು ಜನರಿಗೆ ಬೆಳಕನ್ನು ನೀಡಿ ಸ್ವತಃ ತನ್ನನ್ನು ಉರಿಸಿಕೊಳ್ಳುವ ದೀಪದಂತೆಯಾಗಿದೆ.”**[4]

ನಾನು ಮೇಲೆ ಪ್ರಸ್ತಾಪಿಸಿದ ಈ ವ್ಯಕ್ತಿ (ಅಶ್ಶೈಖ್ ಅಲ್‌ಅನ್ಸಾರೀ) ‘ತಸ್‌ಹೀಹು ಹದೀಸಿ ಸಲಾತಿ ತ್ತರಾವೀಹಿ ಇಶ್ರೀನ ರಕ್‌ಅತನ್ ವರ್‍ರದ್ದು ಅಲಲ್ ಅಲ್ಬಾನೀ ಫೀ ತದ್‌ಈಫಿಹೀ’ (ತರಾವೀಹ್ ನಮಾಝ್ ಇಪ್ಪತ್ತು ರಕ್‌ಅತ್ ಆಗಿದೆ ಎಂಬ ಹದೀಸನ್ನು ಸಹೀಹ್‌ಗೊಳಿಸುವುದು ಮತ್ತು ಅದನ್ನು ದಈಫ್ ಎಂದು ಹೇಳಿದ ಅಲ್‌ಅಲ್ಬಾನಿಗೆ ಉತ್ತರ ನೀಡುವುದು) ಎಂಬ ಹೆಸರಲ್ಲಿ ಒಂದು ಪ್ರಬಂಧವನ್ನು ರಚಿಸಿದ್ದಾರೆ. ಇದರಲ್ಲಿ ಅವರು ತರ್ಕಗಳನ್ನು ತರ್ಕಗಳ ಮೂಲಕ ಮತ್ತು ಪುರಾವೆಗಳನ್ನು ಪುರಾವೆಗಳ

---

**3** ಇವರು ರಿಯಾದ್‌ನ ‘ದಾಇರತುಲ್ ಇಫ್ತಾಅ್’ನಲ್ಲಿ ಉದ್ಯೋಗಿಯಾಗಿರುವ ಅಶ್ಶೈಖ್ ಇಸ್ಮಾಈಲ್ ಅಲ್‌ಅನ್ಸಾರೀ ಎಂಬವರಾಗಿದ್ದಾರೆ.

**4** ಇದನ್ನು ಅತ್ತಬರಾನೀ, ಅದ್ದಿಯಾಅ್ ಅಲ್‌ಮಕ್ದಿಸೀ ‘ಅಲ್‌ಮುಖ್ತಾರಃ’ದಲ್ಲಿ ಜುಂದುಬ್‌ರಿಂದ ವರದಿ ಮಾಡಿದ್ದಾರೆ. ನೋಡಿ: ‘ಸಹೀಹು ತ್ತರ್ಗೀಬ್’ (1/56/127).

ಮೂಲಕ ಖಂಡಿಸುವುದರಲ್ಲಿ ಮತ್ತು ತನ್ನ ಅಭಿಪ್ರಾಯದಲ್ಲಿ ಸತ್ಯಸಂಧತೆಯನ್ನು ಪಾಲಿಸುವ ಹಾಗೂ ಸತ್ಯಕ್ಕೆ ವಿರುದ್ಧವಾಗಿ ಜನರನ್ನು ದಾರಿತಪ್ಪಿಸುವುದರಿಂದ ದೂರ ಸಾಗುವ ವಿಷಯದಲ್ಲಿ ಉಲಮಾಗಳ ಮಾರ್ಗದಿಂದ ಹೊರಹೋಗಿದ್ದಾರೆ. ಅವುಗಳ ಪೈಕಿ ಕೆಲವನ್ನು ನಮಗೆ ಸಾಧ್ಯವಾದಷ್ಟು ಸಂಕ್ಷಿಪ್ತವಾಗಿ ನಾವು ಈ ಪ್ರಸ್ತಾವನೆಯಲ್ಲಿ ವಿವರಿಸುತ್ತೇವೆ. ಆದ್ದರಿಂದ ನಾವು ಹೇಳುತ್ತೇವೆ:

1. ನಾವು ಮೇಲೆ ಪ್ರಸ್ತಾಪಿಸಿದ ಪ್ರಬಂಧದ ಶಿರೋನಾಮೆಯನ್ನು ಓದುವ ಎಲ್ಲರಿಗೂ ಮೊಟ್ಟಮೊದಲು ಹೊಳೆಯುವುದು ಅವರು (ಲೇಖಕರು) ಉದ್ದೇಶಿಸಿರುವುದು ವಿದ್ವಾಂಸರ ಒಮ್ಮತಾಭಿಪ್ರಾಯ ಪ್ರಕಾರ ದಈಫ್ ಎಂದು ದೃಢಪಟ್ಟಿರುವ ಇಪ್ಪತ್ತು ರಕ್‌ಅತ್‌ಗಳ ವಿಷಯದಲ್ಲಿರುವ ಮರ್ಫೂಅ್ ಹದೀಸಾಗಿರಬಹುದು ಎಂಬುದಾಗಿದೆ. ಆದರೆ ಅದರ ಮೊದಲ ಕೆಲವು ಪುಟಗಳನ್ನು ಓದಿದರೆ ಲೇಖಕರು ಉದ್ದೇಶಿಸುವುದು ಅದನಲ್ಲ, ಬದಲಾಗಿ ಯಝೀದ್ ಇಬ್ನ್ ಖಸೀಫಃ ಎಂಬವರ ಹಾದಿಯಿಂದ ಅಸ್ಸಾಇಬ್ ಇಬ್ನ್ ಯಝೀದ್‌ರಿಂದ ವರದಿಯಾದ

كَانُوا يَقُومُونَ عَلَى عَهْدِ عُمَرَ بْنِ الْخَطَّابِ فِي شَهْرِ رَمَضَانَ بِعِشْرِينَ رَكْعَةً.

**"ಅವರು (ಜನರು) ಉಮರ್ ಇಬ್ನುಲ್ ಖತ್ತಾಬ್(ﷺ)ರವರ ಕಾಲದಲ್ಲಿ ರಮದಾನ್ ತಿಂಗಳಲ್ಲಿ ಇಪ್ಪತ್ತು ರಕ್‌ಅತ್ ನಮಾಝ್ ಮಾಡುತ್ತಿದ್ದರು."**

ಎಂಬ ಅಸರನ್ನಾಗಿದೆಯೆಂದು ಓದುಗನಿಗೆ ಸ್ಪಷ್ಟವಾಗುವುದು. ಆ ಪ್ರಬಂಧದ ವಿಷಯವು ಮತ್ತು ಅದಕ್ಕೆ ನೀಡಲಾದ ಹೆಸರು ಸಂಪೂರ್ಣ ತದ್ವಿರುದ್ಧವಾಗಿದೆಯೆಂದು ಓದುಗರಿಗೆ ಇದರಿಂದ ಅರಿವಾಗಬಹುದು. ಇದು ನೇರವಾದ ವಿಧದಲ್ಲಿರುವ ಒಂದು ವಂಚನೆಯಾಗಿದೆ. ನಾವು ಅಲ್ಲಾಹನೊಂದಿಗೆ ಅದರಿಂದ ರಕ್ಷೆಯನ್ನು ಬೇಡುತ್ತೇವೆ.

2. ಮೇಲೆ ಪ್ರಸ್ತಾಪಿಸಲಾದ ಯಝೀದ್ ಇಬ್ನ್ ಖಸೀಫಃ ಎಂಬ ವರದಿಗಾರರನ್ನು ರಕ್ಷಿಸುವುದಕ್ಕಾಗಿ ಮತ್ತು ಅವರನ್ನು ವಿಶ್ವಾಸಯೋಗ್ಯರೆಂದು ರುಜುವಾತುಪಡಿಸುವುದಕ್ಕಾಗಿ ಲೇಖಕರು (ತಮ್ಮ ಪ್ರಬಂಧದಲ್ಲಿ) ಮೂರು ಪುಟಗಳನ್ನು (14–16) ವ್ಯಯಿಸಿರುವುದು ಇದಕ್ಕಿರುವ ಇನ್ನೊಂದು ಉದಾಹರಣೆಯಾಗಿದೆ. ಇದು ಇಮಾಮ್‌ಗಳಲ್ಲಿ ಅನೇಕ ಮಂದಿ ಇವರನ್ನು (ಯಝೀದ್‌ರನ್ನು) ವಿಶ್ವಾಸಯೋಗ್ಯರೆಂದು ಸಾರಿರುವುದನ್ನು ಕಾಣುವ ಓದುಗರನ್ನು, ನಾನು ಇವರನ್ನು ದಈಫ್ ಎನ್ನುವ ಮೂಲಕ ಅವರೆಲ್ಲರಿಗೂ (ಇಮಾಮರೆಲ್ಲರಿಗೂ) ವಿರುದ್ಧವಾಗಿ ಚಲಿಸಿದ್ದೇನೆಂದು ವಂಚಿಸುವುದಕ್ಕಾಗಿದೆ. ಆದರೆ ವಸ್ತುಸ್ಥಿತಿಯು ಹಾಗಲ್ಲ! ಯಾಕೆಂದರೆ [ಇವರನ್ನು (ಯಝೀದ್‌ರನ್ನು)

ವಿಶ್ವಾಸಯೋಗ್ಯರೆಂದು ಸಾರುವುದರಲ್ಲಿ] ಖಂಡಿತವಾಗಿಯೂ ನಾನು ಅವರನ್ನು (ಇಮಾಮ್‌ಗಳನ್ನು) ಅನುಸರಿಸಿದ್ದೇನೆ. ಅದನ್ನು ಮುಂದೆ ಇದರಲ್ಲೇ ನಿಮಗೆ ಕಾಣಬಹುದು.

3. ಮಾತ್ರವಲ್ಲದೆ, ಇದರಲ್ಲಿ ಅವರು ಸ್ಪಷ್ಟವಾದ ಮತ್ತು ಬಹಿರಂಗವಾದ ಸುಳ್ಳಿನ ಮೂಲಕ ಮತ್ತು ಸತ್ಯಕ್ಕೆ ವಿರುದ್ಧವಾಗಿ ಚಲಿಸುವ ಮೂಲಕ ಮೋಸ ಮತ್ತು ವಂಚನೆಯ ಎಲ್ಲ ಮೇರೆಗಳನ್ನೂ ಮೀರಿ ಹೀಗೆಂದಿದ್ದಾರೆ (ಪುಟ 15):

إِنَّ الْأَلْبَانِيَّ زَعَمَ تَضْعِيفَهُ.

**“ಅವರನ್ನು (ಯಝೀದ್‌ರನ್ನು) ದಈಫ್ ಎಂದು ಸಾರಲಾಗಿದೆಯೆಂದು ಅಲ್‌ಅಲ್ಬಾನೀ ವಾದಿಸಿದ್ದಾರೆ.”**

ಇದು ಅಪ್ಪಟ ಸುಳ್ಳು. ವಾಸ್ತವವಾಗಿ ನಾನು ನನ್ನ ಪ್ರಬಂಧದಲ್ಲಿ (ಪುಟ57) ಅವರನ್ನು ವಿಶ್ವಾಸಯೋಗ್ಯರೆಂದು ದೃಢೀಕರಿಸಿದ್ದೇನೆ. ನಾನು ಅವರ ಬಗ್ಗೆ ಆತ್ಯಂತಿಕವಾಗಿ ಹೇಳಿರುವುದು ಹೀಗಿದೆ:

إِنَّهُ قَدْ يَنْفَرِدُ بِمَا لَمْ يَرْوِهِ الثِّقَاتُ، فَمِثْلُهُ يُرَدُّ حَدِيثُهُ إِذَا خَالَفَ مَنْ هُوَ أَحْفَظُ مِنْهُ، وَيَكُونُ شَاذًّا كَمَا تَقَرَّرَ فِي عِلْمِ الْمُصْطَلَحِ، وَهَذَا الْأَثَرُ مِنْ هَذَا الْقَبِيلِ...

**“ವಿಶ್ವಾಸಯೋಗ್ಯರು ವರದಿ ಮಾಡದಂತಹ ಹದೀಸನ್ನು ಇವರು ಏಕಾಂಗಿಯಾಗಿ ವರದಿ ಮಾಡುವುದಿದೆ. ಇಂತಹವರು ಅವರಿಗಿಂತಲೂ ಹೆಚ್ಚು ವಿಶ್ವಾಸಯೋಗ್ಯರಾದ ವರದಿಗಾರರು ವರದಿ ಮಾಡುವ ಹದೀಸಿಗೆ ವಿರುದ್ಧವಾಗಿ ವರದಿ ಮಾಡಿದರೆ ಇವರ ಹದೀಸನ್ನು ತಿರಸ್ಕರಿಸಲಾಗುತ್ತದೆ. ಆಗ ಹದೀಸ್ ಪಾರಿಭಾಷಿಕ ಶಾಸ್ತ್ರದಲ್ಲಿ ಉಲ್ಲೇಖಿಸಲಾಗಿರುವ ಪ್ರಕಾರ ಇವರು ವರದಿ ಮಾಡುವ ಹದೀಸ್ ಶಾದ್ದ್ ಆಗುತ್ತದೆ. ಈ ಅಸರ್ ಈ ಗುಂಪಿನಲ್ಲಿ ಸೇರುತ್ತದೆ...”**

ಇಂತಹ ಮಾತುಗಳು ಉಲಮಾಗಳ ಪ್ರಕಾರ ವಿಶ್ವಾಸಯೋಗ್ಯತೆಯಲ್ಲಿರುವ ವಿಮರ್ಶೆಯೆಂದು ಪರಿಗಣಿಸಲಾಗುತ್ತದೆಯಾದರೂ ಆ ವ್ಯಕ್ತಿ ದಈಫ್ ಆಗಿದ್ದಾನೆ ಮತ್ತು ಆತನ ಹದೀಸ್‌ಗಳನ್ನು ಅನಿರ್ಬಂಧಿತವಾಗಿ ತಿರಸ್ಕರಿಸಬೇಕೆಂದು ಅದಕ್ಕೆ ಅರ್ಥವಿಲ್ಲ.

ಬದಲಾಗಿ ಅದು ಇದಕ್ಕೆ ತದ್ವಿರುದ್ಧವಾಗಿದೆ. ಇದರ ಅರ್ಥವು, ವಿರುದ್ಧವಾಗಿ ಬರುವ ಸಂದರ್ಭಗಳ ಹೊರತು ಆ ವ್ಯಕ್ತಿಯ ಹದೀಸ್‌ಗಳನ್ನು ಅನಿರ್ಬಂಧಿತವಾಗಿ ಸ್ವೀಕರಿಸಬೇಕು ಎಂಬುದಾಗಿದೆ. **‘ಈ ಅಸರ್ ಈ ಗುಂಪಿನಲ್ಲಿ ಸೇರುತ್ತದೆ’**ಯೆಂದು ಹೇಳುವ ಮೂಲಕ ಈ ಮೇಲಿನ ಮಾತುಗಳ ಕೊನೆಯಲ್ಲಿ ನಾನದನ್ನು ಸ್ಪಷ್ಟಪಡಿಸಿದ್ದೇನೆ.

ನಾನು ನನ್ನ ಪ್ರಬಂಧದಲ್ಲಿ ಸೂಚಿಸಿದ ನನ್ನ ಎಲ್ಲ ಮಾತುಗಳೂ ಇದರ ಸುತ್ತಲೇ ತಿರುಗುವಂತದ್ದಾಗಿವೆ. ಆದರೆ ವಿಮರ್ಶಕರು ಇವೆಲ್ಲವನ್ನೂ ಕಂಡೂ ಕಾಣದಂತೆ ನಟಿಸಿ ನಾನು ಹೇಳದಿರುವ ಮಾತುಗಳನ್ನು ನನ್ನ ಮೇಲೆ ಆರೋಪಿಸಿದ್ದಾರೆ. ಆದ್ದರಿಂದ ಅಲ್ಲಾಹು ತಆಲಾ ಅವರನ್ನು ವಿಚಾರಣೆ ಮಾಡುವನು!

4. ಮೇಲೆ ಪ್ರಸ್ತಾಪಿಸಲಾದ ಆ ಶೈಖ್ (ಅಲ್‌ಅನ್ಸಾರೀ) ಕೇವಲ ಉಪರಿಯುಕ್ತ ಸುಳ್ಳಾರೋಪಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಲ್ಲ. ಬದಲಾಗಿ ಇನ್ನೊಂದು ಸುಳ್ಳನ್ನು ನನ್ನ ಮೇಲೆ ಆರೋಪಿಸುತ್ತಾ ಅವರು ಹೇಳುತ್ತಾರೆ (ಪುಟ 22):

فَلَيْسَ مِنَ اللَّائِقِ لِمَنْ يَتْرُكُ رِوَايَةَ يَزِيدَ بْنِ خَصِيفَةَ الَّذِي احْتَجَّ بِهِ الْأَئِمَّةُ كُلُّهُمْ أَنْ يَقْبَلَ الِاحْتِجَاجَ بِرِوَايَةِ عِيسَى بْنِ جَارِيَةَ الَّذِي ضَعَّفَهُ يَحْيَى بْنُ مَعِينٍ وَ...وَ...

**“ಇಮಾಮ್‌ಗಳೆಲ್ಲರೂ ಪುರಾವೆಯಾಗಿ ಸ್ವೀಕರಿಸಿರುವ ಯಝೀದ್ ಇಬ್ನ್ ಖಸೀಫಃರವರ ವರದಿಯನ್ನು ತಿರಸ್ಕರಿಸಿದವರಿಗೆ ಯಹ್ಯಾ ಇಬ್ನ್ ಮಈನ್ ಮತ್ತು... ಮತ್ತು... ಮೊದಲಾದವರು ದಈಫ್ ಎಂದು ಸಾರಿರುವ ಈಸಾ ಇಬ್ನ್ ಜಾರಿಯಃರವರ ವರದಿಯನ್ನು ಪುರಾವೆಯಾಗಿ ಸ್ವೀಕರಿಸುವುದು ಯೋಗ್ಯವಾದುದಲ್ಲ.”**

ವಾಸ್ತವವೇನೆಂದರೆ ಮೇಲೆ ಹೇಳಲಾದ ಈಸಾರವರ ವರದಿಯನ್ನು ನಾನು ಅನಿರ್ಬಂಧಿತವಾದ ವಿಧದಲ್ಲಿ ಪುರಾವೆಯಾಗಿ ಸ್ವೀಕರಿಸಿಲ್ಲ. ಬದಲಾಗಿ ಇವರನ್ನು ಪುರಾವೆಯಾಗಿ ಸ್ವೀಕರಿಸಲಾಗದು ಎಂಬುದರೆಡೆಗೆ ನಾನು ಸೂಚನೆ ನೀಡಿದ್ದೇನೆ. ಅದು ನಾನು ಈ ಮಾತನ್ನು ಹೇಳಿದ ಸಂದರ್ಭದಲ್ಲಾಗಿದೆ (ಪುಟ 21):

سَنَدُهُ حَسَنٌ بِمَا قَبْلَهُ.

**“ಮೇಲಿನ ಸನದ್‌ನಿಂದಾಗಿ ಇದರ ಸನದ್ ಉತ್ತಮವಾಗಿದೆ.”**

ಒಂದು ವೇಳೆ ಶೈಖ್ (ಅಲ್‌ಅನ್ಸಾರೀ) ಆರೋಪಿಸಿದಂತೆ ನಾನು ಅವರನ್ನು ಪುರಾವೆಯಾಗಿ ಸ್ವೀಕರಿಸಿದ್ದರೆ **'ಮೇಲಿನ ಸನದ್‌ನಿಂದಾಗಿ...'** ಎಂದು ನಾನು ಹೇಳುತ್ತಿರಲಿಲ್ಲ. ಈ ಮಾತನ್ನು ಹೇಳುವವನ ಪ್ರಕಾರ ಈ ವರದಿಗಾರನು ಪುರಾವೆಯಾಗಿ ಸ್ವೀಕರಿಸಲಾಗುವಂತಹವರಲ್ಲಿ ಸೇರಿದವನಲ್ಲ, ಬದಲಾಗಿ ಆತ ದಈಫ್ ಆಗಿದ್ದಾನೆ ಮತ್ತು ಆತನನ್ನು ಕೇವಲ ಸಾಕ್ಷಿಯಾಗಿ ಸ್ವೀಕರಿಸಲಾಗುತ್ತದೆ ಎಂಬುದನ್ನು ನನ್ನ ಈ ಮಾತು ಖಚಿತವಾಗಿ ಬಿಂಬಿಸುತ್ತದೆ. ಇಂತಹ ವರದಿಗಾರರು ವರದಿ ಮಾಡುವ ಹದೀಸಿಗೆ ಇನ್ನೊಂದು ಸಾಕ್ಷಿ ಲಭ್ಯವಾದರೆ, ಆಗ ಇವರ ಹದೀಸನ್ನು ಹಸನ್ ಎನ್ನಲಾಗುತ್ತದೆ. ಇಲ್ಲಿ ಅದಕ್ಕೆ ಸಾಕ್ಷಿಯಿದೆ ಮತ್ತು ಆ ಸಾಕ್ಷಿಯು **'ಮೇಲಿನ ಸನದ್‌ನಿಂದಾಗಿ'** ಎಂದು ಹೇಳಲಾದ ಹದೀಸ್ ಆಗಿದೆ. ಅದು ಆಇಶಾ(﵂)ರವರ ಹದೀಸಾಗಿದೆ. ಅದು ಹೀಗಿದೆ:

مَا كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَزِيدُ فِي رَمَضَانَ وَلَا فِي غَيْرِهِ عَلَى إِحْدَى عَشْرَةَ رَكْعَةً.

**"ಪ್ರವಾದಿ(ﷺ)ರವರು ರಮದಾನ್‌ನಲ್ಲಾಗಲಿ ಇತರ ತಿಂಗಳುಗಳಲ್ಲಾಗಲಿ ಹನ್ನೊಂದು ರಕ್‌ಅತ್‌ಗಿಂತಲೂ ಹೆಚ್ಚು ನಮಾಝ್ ಮಾಡುತ್ತಿರಲಿಲ್ಲ."**

ಇದು ಇಬ್ಬರು ಶೈಖ್‌ಗಳು (ಅಲ್‌ಬುಖಾರಿ ಮತ್ತು ಮುಸ್ಲಿಮ್) ಹಾಗೂ ಮತ್ತಿತರರು ವರದಿ ಮಾಡಿದ ಹದೀಸಾಗಿದೆ.

ಹಾಗಾದರೆ ಆ ಶೈಖ್ (ಅಲ್‌ಅನ್ಸಾರೀ) **'ಮೇಲಿನ ಹದೀಸಿನಿಂದಾಗಿ ಇದರ ಸನದ್ ಹಸನ್ ಆಗಿದೆ'** ಎಂಬ ನನ್ನ ಮಾತನ್ನು ಅರ್ಥ ಮಾಡಿಕೊಳ್ಳಲಾಗದಷ್ಟು ಹದೀಸ್ ಶಾಸ್ತ್ರದಲ್ಲಿ ಅಜ್ಞಾನಿಯೇ? ಇದೇ ಹದೀಸನ್ನು ಇನ್ನೊಂದು ಸನದ್‌ನ ಮೂಲಕ ಪುನರಾವರ್ತಿಸಿದಾಗಲೂ (ಪುಟ 79–80) ನಾನಿದರ ಬಗ್ಗೆ ಹೆಚ್ಚು ವಿವರಣೆ ನೀಡಿದ್ದೇನೆ. ಅಲ್‌ಹೈಸಮೀ ಇದನ್ನು ಹಸನ್ ಎಂದಿರುವುದನ್ನೂ ನಾನು ಉದ್ಧರಿಸಿದ್ದೇನೆ. ತರುವಾಯ ಅವರ (ಅಲ್‌ಹೈಸಮೀಯ) ಮಾತಿಗೆ ಅಡಿಬರಹವಾಗಿ ನಾನು ಹೀಗೆಂದಿದ್ದೇನೆ:

وَسَنَدُهُ مُحْتَمِلٌ لِلتَّحْسِينِ عِنْدِي، وَاللَّهُ أَعْلَمُ.

**"ನನ್ನ ಪ್ರಕಾರ ಈ ಸನದ್ ಹಸನ್ ಆಗುವ ಸಾಧ್ಯತೆಯನ್ನು ಮಾತ್ರ ಹೊಂದಿದೆ. ಹೆಚ್ಚು ಬಲ್ಲವನು ಅಲ್ಲಾಹನಾಗಿದ್ದಾನೆ."**

ಅಥವಾ ಅವರ (ಅಲ್‌ಅನ್ಸಾರೀ) ಹೃದಯದಲ್ಲಿರುವ ರೋಷದಿಂದಾಗಿ

ಅದು ಉದ್ದೇಶಪೂರ್ವಕವಾಗಿ ಅಜ್ಞಾನಿಯಂತೆ ನಟಿಸುವುದು ಮತ್ತು ಶುದ್ಧವಾದ ಸುಳ್ಳಾರೋಪವಾಗಿದೆಯೇ? ಈ ರೀತಿ ಹೇಳಿದವನನ್ನು ಅಲ್ಲಾಹು ಅನುಗ್ರಹಿಸಲಿ:

فَإِنْ كُنْتَ لَا تَدْرِي فَتِلْكَ مُصِيبَةٌ * وَإِنْ كُنْتَ تَدْرِي فَالْمُصِيبَةُ أَعْظَمُ

**"ನಿನಗೆ ತಿಳಿದಿಲ್ಲವೆಂದಾದರೆ ಆಗ ಅದೊಂದು ದುರಂತವಾಗಿದೆ. ಆದರೆ ನಿನಗೆ ತಿಳಿದಿದೆಯೆಂದಾದರೆ ಆಗ ಆ ದುರಂತವು ಭೀಕರವಾಗಿದೆ."**

ಶೈಖ್ (ಅಲ್‌ಅನ್ಸಾರೀ)ಗೆ ಅದರ ಬಗ್ಗೆ ಅರಿವಿದೆಯೆಂಬುದಕ್ಕೆ ಓದುಗರಿಗೆ ಸಿಗುವ ಪುರಾವೆಯು **"ಶವದಿಂದ ಯಾವುದೇ ಪ್ರಯೋಜನವನ್ನೂ ಪಡೆಯಬಾರದು"** ಎಂಬ ಜಾಬಿರ್(ﷺ)ರವರ ಹದೀಸನ್ನು ಹಸನ್ ಎಂದು ಹೇಳಿದವರನ್ನು ತಕ್ಲೀದ್ ಮಾಡುತ್ತಾ ಅವರು ಹೇಳಿದ ಈ ಮಾತಾಗಿದೆ:

فَلَيْسَ مِنَ اللَّائِقِ لِلْأَلْبَانِيِّ تَضْعِيفُ حَدِيثٍ حَسَنٍ بِوُجُودِ طَرِيقٍ لَهُ أُخْرَى ضَعِيفَةٍ، فَإِنَّ ذَلِكَ خِلَافُ مَا قَرَّرَهُ أَئِمَّةُ الْفَنِّ.

**"ದಈಫ್ ಆಗಿರುವ ಬೇರೆ ಹಾದಿಯು ಅಸ್ತಿತ್ವದಲ್ಲಿರುವಾಗ ಹಸನ್ ಆಗಿರುವ ಹದೀಸನ್ನು ದಈಫ್ ಎನ್ನುವುದು ಅಲ್‌ಅಲ್ಬಾನಿಗೆ ಯೋಗ್ಯವಾದುದಲ್ಲ. ಯಾಕೆಂದರೆ ಇದು ಹದೀಸ್ ವಿದ್ವಾಂಸರು ದೃಢೀಕರಿಸಿರುವುದಕ್ಕೆ ವಿರುದ್ಧವಾದುದಾಗಿದೆ."**

ಹಾಗಾದರೆ, ಈಸಾ ಇಬ್ನ್ ಜಾರಿಯಃರವರ ಉಪರಿಯುಕ್ತ ಹದೀಸನ್ನು, ಆಇಶಾ (ﷺ)ರವರ ಹದೀಸನ್ನು ಅದಕ್ಕೆ ಸಾಕ್ಷಿಯಾಗಿ ತಂದು ನಾನು ಹಸನ್ ಎಂದಾಗ ನಾನು ಹದೀಸ್ ವಿದ್ವಾಂಸರು ದೃಢೀಕರಿಸಿರುವುದಕ್ಕೆ ಬದ್ಧನಾಗಿದ್ದೇನೆ ಎಂಬುದನ್ನು ಶೈಖ್ (ಅಲ್‌ಅನ್ಸಾರೀ) ಚೆನ್ನಾಗಿ ಅರಿತಿದ್ದಾರೆ! ಆದ್ದರಿಂದಲೇ ಆ ವಿಷಯದಲ್ಲಿ ನನ್ನಲ್ಲಿ ಪ್ರಮಾದವನ್ನು ತೋರಿಸಿಕೊಡಲು ಸಾಧ್ಯವಾಗದೆ ನಾನು ಅವರನ್ನು (ಈಸಾರನ್ನು) ಪುರಾವೆಯಾಗಿ ಸ್ವೀಕರಿಸಿದ್ದೇನೆ ಎಂಬ ಮಾತನ್ನು ಅವರು ಸ್ವತಃ ಸೃಷ್ಟಿಸಿ ಹೇಳಿದ್ದಾರೆ. ಇದು ಅವರ ಹೃದಯದಲ್ಲಿರುವ ರೋಷವನ್ನು ತಣಿಸುವುದಕ್ಕಾಗಿದೆ. ಅಲ್ಲಾಹು ಅಝ್ಝ ವಜಲ್ಲ್ ಅವರನ್ನು ವಿಚಾರಣೆ ಮಾಡುವನು.

ಜ್ಞಾನಾಧಾರಿತ ಸತ್ಯಗಳೊಂದಿಗೆ ಈ ಶೈಖ್ ಹೇಗೆ ಆಟವಾಡುತ್ತಿದ್ದಾರೆಂಬುದನ್ನು ಮಾನ್ಯ ಓದುಗರು ನನ್ನೊಂದಿಗೆ ಗಮನಿಸುವುದಿಲ್ಲವೇ? **"ಶವದಿಂದ ಯಾವುದೇ ಪ್ರಯೋಜನವನ್ನೂ ಪಡೆಯಬಾರದು"** ಎಂಬ ಜಾಬಿರ್(ﷺ)ರವರ ಹದೀಸನ್ನು

ದಈಫ್ ಎನ್ನುವುದು –ಅವರು ವಾದಿಸುವಂತೆ– ನನಗೆ ಯೋಗ್ಯವಾದುದಲ್ಲವಾದರೆ, ತಕ್ಲೀದ್ ಮಾಡುವ ಮೂಲಕವಾದರೂ ಇವರು ಒಪ್ಪಿಕೊಂಡಿರುವಂತೆ –ಇವರ ವಾದ ಪ್ರಕಾರ– ಅದಕ್ಕೆ ದಈಫ್ ಆಗಿರುವ ಬೇರೆ ಹಾದಿಯಿದೆಯೆಂದಾದರೆ, ಪ್ರವಾದಿ(ﷺ) ರವರು ಹನ್ನೊಂದು ರಕ್‌ಅತ್ ತರಾವೀಹ್ ನಮಾಝ್ ಮಾಡಿದ್ದಾರೆಂಬ ಇದಕ್ಕಿಂತ ಮುಂಚೆ ಉದ್ಧರಿಸಲಾದ ಜಾಬಿರ್(ರ)ರವರದ್ದೇ ಆದ ಹದೀಸನ್ನು –ಅವರು ಸ್ವತಃ ಅವರ ಕಣ್ಣುಗಳಿಂದಲೇ ನೋಡಬಹುದಾದಂತಹ ರೀತಿಯಲ್ಲಿ ಸಹೀಹೈನ್‌ನಲ್ಲಿರುವ ಆಇಶಾ(ರ)ರವರ ಹದೀಸ್ ಅದಕ್ಕೆ ಸಾಕ್ಷಿ ಕೂಡ ಆಗಿರುವಾಗ– ದಈಫ್ ಎಂದು ಹೇಳುವುದು ಅವರಿಗೆ ಯೋಗ್ಯವಾದುದಾಗಿದೆಯೇ?

ಇದರ ಅರ್ಥ ಶೈಖ್‌ರವರು ದ್ವಿಮುಖ ಧೋರಣೆಯನ್ನು ಹೊಂದಿದ್ದಾರೆ ಮತ್ತು ಎರಡು ಅಳತೆಗೋಲುಗಳ ಮೂಲಕ ಅಳೆಯುತ್ತಿದ್ದಾರೆ ಎಂಬುದಲ್ಲವೇ? ಸಹಾಯ ಬೇಡಲಾಗುವವನು ಅಲ್ಲಾಹು ಮಾತ್ರವಾಗಿದ್ದಾನೆ. ಅಲ್ಲಾಹನ ಹೊರತು ಯಾವುದೇ ಶಕ್ತಿಯಾಗಲಿ ಸಾಮರ್ಥ್ಯವಾಗಲಿ ಇಲ್ಲ.

ಶೈಖ್ ಇಸ್ಮಾಈಲ್ ಅಲ್‌ಅನ್ಸಾರೀ –ಅಲ್ಲಾಹು ಅವರಿಗೆ ಮಾರ್ಗದರ್ಶನ ಮಾಡಲಿ– ಕಾಣದಂತಹ ಕೆಲವು ವಾಸ್ತವಗಳನ್ನು ವಿವರಿಸಲು ನಾನು ಮುಂದಾಗುತ್ತಿದ್ದೇನೆ:

**'ಅವರ ವಾದ ಪ್ರಕಾರ'** ಎಂದು ನಾನು ಮುಂಚೆ ಹೇಳಿದ್ದೇಕೆಂದರೆ, ಹಸನ್ ಆಗಿದೆಯೆಂದು ಕೆಲವು ವಿದ್ವಾಂಸರಿಂದ ಅವರು ಉದ್ಧರಿಸಿದ, ಮತ್ತು ನಾನು ಅದನ್ನು ದಈಫ್ ಎಂದಿದ್ದಕ್ಕಾಗಿ ನನ್ನನ್ನು ಖಂಡಿಸಿದ, ಹಾಗೂ ಅದರಲ್ಲಿ ಜಾಬಿರ್(ರ) ರಿಂದ ವರದಿ ಮಾಡಿದ ಅಬು ಝ್ಝುಬೈರ್‌ರವರಲ್ಲಿ 'ಅನ್‌ಅನತ್' ಇದೆಯೆಂದು ಅವರು ಸ್ವತಃ ಅಭಿಪ್ರಾಯಪಟ್ಟಿರುವ ಈ ಹಾದಿಯು, 'ನಸ್ಬುರ್ರಾಯಃ'ದಲ್ಲಿರುವಂತೆ (1/122) ಮೊದಲನೆ ಹಾದಿಯನ್ನು ಬಲಪಡಿಸಿದ ಇನ್ನೊಂದು ಹಾದಿಯಾಗಿದೆ ಮತ್ತು ಅದರ ಮದಾರ್ ಕೂಡ ಅಬು ಝ್ಝುಬೈರ್‌ರವರ ಮೇಲೆಯೇ ಇದೆ ಎಂಬುದನ್ನು ಸೂಚಿಸುವುದಕ್ಕೆ ಮಾತ್ರವಾಗಿದೆ.

ದಈಫ್ ಆಗಿರುವ ವರದಿಯನ್ನು ಅದರಂತಿರುವ ಬೇರೊಂದು ವರದಿಯಿಂದ ಬಲಪಡಿಸುವ ಬದಲು ಅದೇ ವರದಿಯಿಂದ ಬಲಪಡಿಸುವುದಕ್ಕೆ ಶೈಖ್‌ರವರ ಅರಿವಿನ ಪ್ರಕಾರವಿರುವ **'ಹದೀಸ್ ವಿದ್ವಾಂಸರು ದೃಢೀಕರಣ'**ವು ಅನುಮತಿ ನೀಡುತ್ತದೆಯೇ!? ಅಥವಾ ಅದು ದೇಹೇಚ್ಛೆಯನ್ನು ಹಿಂಬಾಲಿಸುವುದು ಮತ್ತು ಸತ್ಯಕ್ಕೆ ವಿರುದ್ಧವಾಗಿ ಸಾಗುವ ಮೂಲಕವಾದರೂ ಇತರ ಶೈಖ್‌ಗಳ ಬೆಂಬಲಕ್ಕೆ ನಿಲ್ಲುವುದಾಗಿದೆಯೇ? ಅಥವಾ ಅದು 'ನೈಲುಲ್ ಅವ್ತಾರ್'ನಲ್ಲಿರುವಂತೆ ಹೆಚ್ಚು ಹೆಚ್ಚು ಉದ್ಧರಿಸುವ ಮತ್ತು ಹದೀಸನ್ನು ಸಂಗ್ರಹಿಸುವ, ಆದರೆ ಹದೀಸಿನ ಬಗ್ಗೆ ಮಾತನಾಡುವ ವಿಷಯದಲ್ಲಿ ಪರಿಶೋಧನೆಯ ಕೊರತೆಯನ್ನು ತೋರಿಸುವ ಅಶ್ಶೌಕಾನಿಯಂತಹವರನ್ನು ತಕ್ಲೀದ್ ಮಾಡುವುದಾಗಿದೆಯೇ?

ಆದರೆ ಇದರ ನಂತರ ಜಾಬಿರ್(ﷺ)ರವರ ಈ ಹದೀಸಿಗೆ ಅದೇ ಪದಗಳನ್ನು ಹೊಂದಿರುವ ಬಲವಾದ ಸಾಕ್ಷಿಯನ್ನು ಇಬ್ನ್ ಉಕೈಮ್(ﷺ)ರವರ ಹದೀಸಿನಲ್ಲಿ ನಾನು ಕಂಡಿದ್ದೇನೆಂಬುದನ್ನು ಸ್ಪಷ್ಟವಾಗಿ ಹೇಳಲು –ಅಲ್ಲಾಹನ ಔದಾರ್ಯ ಮತ್ತು ತೌಫೀಕ್‌ನಿಂದಾಗಿ– ಯಾರೂ ನನ್ನನ್ನು ತಡೆಯಲಾರರು. ಇದನ್ನು ನನಗಿಂತ ಮುಂಚೆ ಯಾರಾದರೂ ಪ್ರಸ್ತಾಪಿಸಿದ್ದಾಗಲಿ ಅಥವಾ ಸೂಚಿಸಿದ್ದಾಗಲಿ ನಾನು ಕಂಡಿಲ್ಲ. ನನ್ನ ಪ್ರಕಾರ ಇದರ ಸನದ್ ಸಹೀಹ್ ಆಗಿದೆ. 'ಇರ್ವಾಉಲ್ ಗಲೀಲ್' ಎಂಬ ನನ್ನ ಗ್ರಂಥದಲ್ಲಿ (1/78) ಇದನ್ನು ವಿವರಿಸಿದ್ದಾಗಿ ಕಾಣಬಹುದು.

ಒಂದು ವೇಳೆ ಅಶ್ಶೈಖ್ ಅಲ್‌ಅನ್ಸಾರೀ ಜ್ಞಾನ, ಉಪದೇಶ ಮತ್ತು ಮಾರ್ಗದರ್ಶನ ಮಾಡುವುದನ್ನು ಉದ್ದೇಶಿಸಿದ್ದರೆ ಒಂದೇ ಹಾದಿಯನ್ನು ಎರಡಾಗಿ ಮಾಡುವ ಮೂಲಕ ಅವರು ಪ್ರಮಾದವೆಸಗುತ್ತಿರಲಿಲ್ಲ. ಈ ಶಾಹಿದ್ (ಸಾಕ್ಷಿ) ಹದೀಸನ್ನು ತೋರಿಸಿಕೊಡುವ ಮೂಲಕ ಅವರು ನಮಗೆ ಸಹಾಯ ಮಾಡುತ್ತಿದ್ದರು. ಆದರೆ ಅವರ ವಿಷಯವು **'ಯಾರ ಬಳಿ ಒಂದು ವಸ್ತು ಇಲ್ಲವೋ ಅವನು ಅದನ್ನು ನೀಡಲಾರ'** ಎಂಬ ಹಳೇ ಮಾತಿನಂತಿದೆ. ಇಬ್ನ್ ಉಕೈಮ್‌ರವರ ಹದೀಸನ್ನು ಅದ್ದಾರಕುತ್ನೀ ವರದಿ ಮಾಡಿದ್ದಾರೆ ಮತ್ತು ಅದರ ಅರ್ಥ ಹಾಗೂ ಜಾಬಿರ್‌ರವರ ಹದೀಸಿನಲ್ಲಿರುವ ಅರ್ಥವು ಒಂದೇ ಆಗಿದೆಯೆಂದು ಅವರು ತಮ್ಮ ಉತ್ತರದಲ್ಲಿ (ಪುಟ 48) ಪ್ರಸ್ತಾಪಿಸಿರುವುದನ್ನು ನಾನು ಸ್ಪಷ್ಟವಾಗಿ ಕಂಡಿದ್ದೇನೆ.

ಆದರೆ, ಅಲ್ಲಾಹನ ಮೇಲಾಣೆ, ಇವರು ಅದ್ದಾರಕುತ್ನಿಯನ್ನು ಮಾತ್ರ ಪ್ರಸ್ತಾಪಿಸಿ ಇತರ ಸುನನ್‌ನ ಕರ್ತರನ್ನು ಯಾಕೆ ಪ್ರಸ್ತಾಪಿಸಿಲ್ಲವೆಂಬುದು ನನಗೂ ಗೊತ್ತಿಲ್ಲ ಮತ್ತು ಬಹುಶಃ ಇವರಿಗೂ ಗೊತ್ತಿರಲಾರದು. ಅದೂ ಅದ್ದಾರಕುತ್ನಿಯಲ್ಲಿರುವ ಹದೀಸಿನ ಪದಗಳಾದ **"ಶವದಿಂದ ಅದರ ಚರ್ಮವನ್ನಾಗಲಿ ಅಥವಾ ಒಳಗಿನ ಭಾಗಗಳನ್ನಾಗಲಿ ನೀವು ಯಾವುದೇ ಪ್ರಯೋಜನವನ್ನೂ ಪಡೆಯಬಾರದು"** ಎಂಬುದು ಮತ್ತು ಇತರ ಸುನ್ನತ್ತಿನ ಗ್ರಂಥಗಳಲ್ಲಿರುವ ಪದಗಳು ಒಂದೇ ಆಗಿರುವಾಗ! ಆದರೆ ಈ ಅರ್ಥವು ಜಾಬಿರ್‌ರವರ ಹದೀಸಿನ ಅದೇ ಅರ್ಥವಾಗಿದೆಯೆಂಬ ಇವರ ವಾದವು ಸ್ವೀಕಾರಯೋಗ್ಯವಲ್ಲ. ಯಾಕೆಂದರೆ ಈ ಅರ್ಥವು ಅದಕ್ಕಿಂತಲೂ ವಿಶೇಷವಾಗಿದೆಯೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಜಾಬಿರ್(ﷺ)ರವರ ಹದೀಸಿನಲ್ಲಿ ಯಾವ ಪದಗಳಿವೆಯೋ ಅದೇ ಪದಗಳನ್ನು ಇವರು ಪದಾನುಪದವಾಗಿ ಕಳೆದುಕೊಂಡಿದ್ದಾರೆ.

ಬಹಳ ಕಾಲದ ಬಳಿಕವಾದರೂ ಅದರೆಡೆಗೆ ನನಗೆ ಮಾರ್ಗದರ್ಶನ ಮಾಡಿದ ಅಲ್ಲಾಹನಿಗೆ ಸ್ತುತಿ. ಈ ವಿಷಯದಲ್ಲಿ –ಮುಂಚೆ ನಾನು ಸೂಚಿಸಿದ ನನ್ನ ಅಲಕ್ಷ್ಯದ ಕಾರಣದಿಂದ– ನನ್ನನ್ನು ವಿಮರ್ಶೆ ಮಾಡಲು ಅವನು ಯಾರಿಗೂ ಅನುವು ಮಾಡಿಕೊಡಲಿಲ್ಲ. ಯಾರಾದರೂ ಹಾಗೆ ಮಾಡಿದ್ದಿದ್ದರೆ... ಇಹಲೋಕದಲ್ಲೂ ಪರಲೋಕದಲ್ಲೂ ರಕ್ಷೆ ಮತ್ತು ಸೌಖ್ಯ ದಯಪಾಲಿಸುವಂತೆ ನಾವು ಅಲ್ಲಾಹನೊಂದಿಗೆ ಬೇಡುತ್ತೇವೆ.

5. ಈ ಮೇಲೆ ಹೇಳಲಾದ ಸುಳ್ಳಾರೋಪಕ್ಕೆ ಮಾತ್ರ ಶೈಖ್ (ಅಲ್‌ಅನ್ಸಾರೀ) ತಮ್ಮನ್ನು ಸೀಮಿತಗೊಳಿಸಲಿಲ್ಲ. ಬದಲಾಗಿ ನಾನು ಸಲಫ್‌ಗಳನ್ನು ಅಜ್ಞಾನಿಗಳೆಂದು ಸಾರಿದ್ದೇನೆಂಬ ಇನ್ನೊಂದು ಸುಳ್ಳಾರೋಪವನ್ನು (ಪುಟ 41) ಅವರು ನನ್ನ ಮೇಲೆ ಹೊರಿಸಿದ್ದಾರೆ. **'ಅಲ್ಲಾಹು ಪರಮಪಾವನನು! ಖಂಡಿತವಾಗಿಯೂ ಇದೊಂದು ಮಹಾ ಸುಳ್ಳಾರೋಪವಾಗಿದೆ.'**

ಶೈಖ್‌ರವರ ಪ್ರಕಾರ ಅಥವಾ ಅವರಂತಿರುವ ಇತರ ಮುಕಲ್ಲಿದ್‌ಗಳ ಮತ್ತು ಅಸೂಯೆಗಾರರ ಪ್ರಕಾರ ನಾನು ಅಸ್ಸಲಫು ಸ್ಸಾಲಿಹ್‌ಗಳನ್ನು ಅನುಸರಿಸುವುದರೆಡೆಗೆ ಮತ್ತು ಅವರ ಮದ್‌ಹಬನ್ನು ಗಟ್ಟಿಯಾಗಿ ಹಿಡಿದುಕೊಳ್ಳುವುದರೆಡೆಗೆ ಕರೆ ನೀಡುತ್ತೇನೆಯೇ ವಿನಾ ಅವರ ಪೈಕಿ ಯಾರಾದರೂ ಒಬ್ಬ ನಿರ್ದಿಷ್ಟ ವ್ಯಕ್ತಿಯ ಮದ್‌ಹಬ್‌ನೆಡೆಗೆ ಕರೆ ನೀಡುತ್ತಿಲ್ಲ ಎಂಬುದರ ಹೊರತು ನಾನು ಇನ್ನಾವುದೇ ತಪ್ಪನ್ನೂ ಮಾಡಿಲ್ಲ. ಅಸೂಯೆ ತುಂಬಿದ ರೀತಿಯಲ್ಲಿ ನನ್ನೊಂದಿಗೆ ತರ್ಕ ಮಾಡುವ ನಿಲುವನ್ನು ಹೊಂದಲು ಶೈಖ್‌ರವರನ್ನು ಪ್ರೇರೇಪಿಸಿದ್ದು ಇದೇ ಆಗಿದೆ. ಇದು ಬಹುಸಂಖ್ಯಾತ ಮುಕಲ್ಲಿದ್‌ಗಳನ್ನು, ಅಂದರೆ ತಮ್ಮ ತಂದೆ ತಾತಂದಿರು ಏನು ಮಾಡುತ್ತಿದ್ದರೋ ಅದರ ಹೊರತು ಧರ್ಮದ ಬಗ್ಗೆ ಇನ್ನೇನನ್ನೂ ಅರಿತಿರದವರನ್ನು –ಅವರ ಪೈಕಿ ಅಲ್ಲಾಹು ಸಂರಕ್ಷಿಸಿದವರ ಹೊರತು, ಇವರಂತೂ ಅಲ್ಪಸಂಖ್ಯಾತರಾಗಿದ್ದಾರೆ– ತುಷ್ಟೀಕರಿಸುವುದಕ್ಕಾಗಿದೆ.

ಅಚ್ಚರಿಯೇನೆಂದರೆ ಈ ಶೈಖ್ (ಅಲ್‌ಅನ್ಸಾರೀ) ನಾನು ಈಗಾಗಲೇ ಸೂಚಿಸಿದ ಮತ್ತು ದೃಢೀಕರಿಸಿದ ಎಲ್ಲ ವಿಷಯಗಳ ಮೂಲಕ ಹಾದು ಹೋಗಿದ್ದರೂ ಸಹ –ಅವುಗಳ ಪೈಕಿ ಕೆಲವದರಲ್ಲಿ ಅಥವಾ ಕನಿಷ್ಟ ಪಕ್ಷ ಎಲ್ಲದರಲ್ಲಿಯೂ ಅವರು ನಮ್ಮದೇ ಅಭಿಪ್ರಾಯವನ್ನು ಹೊಂದಿದ್ದಾರೆಂಬ ಬಗ್ಗೆ ನನಗೆ ಸಂಶಯವಿಲ್ಲ– ಅವುಗಳ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿಲ್ಲ. ಉದಾಹರಣೆಗೆ, ಇಪ್ಪತ್ತು ರಕ್‌ಅತ್ ತರಾವೀಹನ್ನು ವರದಿ ಮಾಡಿದ ಅಸರನ್ನು ದೃಢೀಕರಿಸಿದರೂ ಸಹ, ಪ್ರವಾದಿ(ﷺ)ರವರು ರಮದಾನ್‌ನಲ್ಲಾಗಲಿ ಅಥವಾ ಇತರ ತಿಂಗಳುಗಳಲ್ಲಾಗಲಿ ಹನ್ನೊಂದಕ್ಕಿರುವ ಹೆಚ್ಚು ರಕ್‌ಅತ್ ನಿರ್ವಹಿಸುತ್ತಿರಲಿಲ್ಲ ಎಂಬ ಆಇಶಾ(ರ)ರವರ ವರದಿ ಮಾಡಿದ ಹದೀಸಿಗೆ ಹೊಂದಾಣಿಕೆಯಾಗುವ ಇನ್ನೊಂದು ವರದಿಯನ್ನು ತಿರಸ್ಕರಿಸುವುದು ಅನಿವಾರ್ಯವಾಗುವುದಿಲ್ಲ. ಹಾಗಾದರೆ ಪ್ರವಾದಿ(ﷺ)ರವರ ಸುನ್ನತ್‌ನ ಪ್ರಕಾರ ಅಮಲ್ ಮಾಡುವುದು ಶ್ರೇಷ್ಠವೋ ಅಥವಾ ಉಮರ್(ರ)ರವರ ಕಾಲದಲ್ಲಿ ಜನರು (ಇಪ್ಪತ್ತು ರಕ್‌ಅತ್ ನಮಾಝ್) ಮಾಡುತ್ತಿದ್ದರು ಎಂಬುದು ಸಹೀಹ್ ಎಂದು ಪರಿಗಣಿಸಿ ಅದರ ಪ್ರಕಾರ ಅಮಲ್ ಮಾಡುವುದು ಶ್ರೇಷ್ಠವೋ?

ಶೈಖ್‌ರವರು ಇದರ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿಲ್ಲ. ಯಾಕೆಂದರೆ ಅವರು ಸುನ್ನತ್ತಿಗೆ ವಿರುದ್ಧವಾದುದನ್ನು (ಇಪ್ಪತ್ತು ರಕ್‌ಅತ್ತನ್ನು) ಶ್ರೇಷ್ಠವೆಂದು ಹೇಳಿದರೆ ಸುನ್ನತ್ತಿನ ಜನರ ನಡುವೆ ಅವರ ಒಳಗುಟ್ಟು ಬಯಲಾಗುತ್ತದೆ. ಇನ್ನು ಸುನ್ನತ್ತನ್ನು (ಹನ್ನೊಂದು ರಕ್‌ಅತ್ತನ್ನು) ಶ್ರೇಷ್ಠವೆಂದು ಹೇಳಿದರೆ ಅವರ ಅಭಿಪ್ರಾಯವು ಅಲ್‌ಅಲ್ಬಾನಿಯೊಂದಿಗೆ

ಹೊಂದಾಣಿಕೆಯಾಗುತ್ತದೆ. ಕೆಲವು ಅಥವಾ ಅನೇಕ ಕಾರಣಗಳಿಂದಾಗಿ ಇದನ್ನು ಹೇಳಲು ಅವರ ಮನಸ್ಸು ಒಪ್ಪಲಾರದೆಂಬುದು ಬುದ್ಧಿವಂತರಾದ ಓದುಗರಿಂದ ಮರೆಯಾಗಿರಲಾರದು!

ಇದು **'ಸಲಾತು ತ್ತರಾವೀಹ್'** ಎಂಬ ನಮ್ಮ ಗ್ರಂಥಕ್ಕೆ ವಿರುದ್ಧವಾಗಿ ಬರೆಯಲಾದ ಉತ್ತರಗಳ ಪೈಕಿ ನಾವು ಪರಿಶೋಧಿಸಿದ ಒಂದು ಉತ್ತರದ ಸ್ಥಿತಿಯಾಗಿದೆ. ಇದು ಅವುಗಳ ಪೈಕಿ ಮಾದರೀಯೋಗ್ಯ ಉತ್ತರವಾಗಿದ್ದರೂ ಸಹ, ಇದರಲ್ಲಿರುವ ನ್ಯಾಯಪಾಲನೆಯ ಕೊರತೆ, ಸತ್ಯವನ್ನು ವಿವರಿಸುವುದರ ಹೊರತು ಬೇರೇನನ್ನೂ ಬಯಸದ ಅಹ್ಲುಲ್ ಇಲ್ಮ್‌ಗಳ ಮಾರ್ಗದಿಂದಿರುವ ವಿದೂರತೆ ಮೊದಲಾದ ಇದರ ಶೈಲಿಯನ್ನು ಮಾನ್ಯ ಓದುಗರು ಸ್ವತಃ ಅರಿತುಕೊಂಡಿದ್ದಾರೆ. ಇದು ಅವರ (ವಿಮರ್ಶಕರ) ಪೈಕಿ ಅತಿಶ್ರೇಷ್ಠ ಮತ್ತು ಅತಿಹೆಚ್ಚು ಇಲ್ಮ್ ಇರುವ ವ್ಯಕ್ತಿಯ ಉತ್ತರವಾಗಿದ್ದರೆ ಇಲ್ಮ್ ಆಗಲಿ ಉತ್ತಮ ಸ್ವಭಾವವಾಗಲಿ ಇಲ್ಲದಿರುವವರ ಉತ್ತರವು ಹೇಗಿರಬಹುದು!?

ಮೇಲೆ ಪ್ರಸ್ತಾಪಿಸಿದ **'ಸಲಾತು ತ್ತರಾವೀಹ್'** ಎಂಬ ನಮ್ಮ ಪ್ರಬಂಧವನ್ನು ಮುದ್ರಿಸಿ ದೀರ್ಘ ಕಾಲವು ಕಳೆದಿದೆ ಮತ್ತು ಅದರ ಪುನರ್ ಮುದ್ರಣದ ಆವಶ್ಯಕತೆಯಿದೆ. ಅದು ಅದರ ಶೈಲಿಯಿಂದಾಗಿ ಅದರ ಗುರಿಯನ್ನು ಸಾಧಿಸಿದೆ ಮತ್ತು ಲಕ್ಷ್ಯವನ್ನು ಪೂರ್ತೀಕರಿಸಿದೆ. ತರಾವೀಹ್ ನಮಾಝ್‌ನ ವಿಷಯದಲ್ಲಿ ಬಹುಸಂಖ್ಯಾತ ಜನರಿಗೆ ಸುನ್ನತ್ತನ್ನು ತಿಳಿಸಿಕೊಡುವುದು ಮತ್ತು ಅದನ್ನು ವಿರೋಧಿಸುವವರಿಗೆ ಉತ್ತರ ನೀಡುವುದು ಅದರ ಪ್ರಮುಖ ಗುರಿಯಾಗಿದೆ. ಸಿರಿಯಾ, ಜೋರ್ಡಾನ್ ಹಾಗೂ ಮತ್ತಿತರ ಅನೇಕ ಇಸ್ಲಾಮೀ ದೇಶಗಳಲ್ಲಿ ಈ ಸುನ್ನತ್ ಪ್ರಚಾರವಾಗಿದೆ. ಅಲ್ಲಾಹನಿಗೆ ಸ್ತುತಿ, ಅವನ ಅನುಗ್ರಹದಿಂದಾಗಿ ಸತ್ಕರ್ಮಗಳು ಪೂರ್ತಿಯಾಗುತ್ತವೆ. ಆದ್ದರಿಂದ ಆ ಪ್ರಬಂಧವನ್ನು ಸಂಕ್ಷಿಪ್ತಗೊಳಿಸಿ ಶುದ್ಧ ಜ್ಞಾನಾಧಾರಿತ ಶೈಲಿಯಲ್ಲಿ, **'ನಿನ್ನ ಮಾತನ್ನು ಹೇಳು ಮತ್ತು ಮುಂದುವರಿ'** ಎಂಬ ಮಾತಿಗನುಗುಣವಾಗಿ ಯಾರಿಗೂ ಉತ್ತರ ನೀಡಲು ಹೋಗದೆ, ಮೂಲ ಪ್ರಬಂಧದಲ್ಲಿರುವ (ಸಲಾತು ತ್ತರಾವೀಹ್ ಎಂಬ ಪ್ರಬಂಧದಲ್ಲಿರುವ) ಎಲ್ಲ ಪ್ರಯೋಜನಗಳನ್ನು ಸಂಕ್ಷಿಪ್ತಗೊಳಿಸಿ, ಅದರಲ್ಲಿರುವ ಪ್ರಯೋಜನಗಳನ್ನು ಪೂರ್ತಿಮಾಡುವುದಕ್ಕಾಗಿ ಅದಕ್ಕೆ ಇನ್ನಿತರ ಪ್ರಯೋಜನಗಳನ್ನು ಸೇರಿಸಿ ಈ ಪ್ರಬಂಧವನ್ನು ರಚಿಸಲು ಬಯಸಿದೆ. ಈ ಹಿಂದಿನ ಪ್ರಬಂಧವನ್ನು ಜನರಿಗೆ ಪ್ರಯೋಜನಕಾರಿಯಾಗಿ ಮಾಡಿದಂತೆ ಇದನ್ನೂ ಪ್ರಯೋಜನಕಾರಿಯಾಗಿ ಮಾಡುವಂತೆ ಮತ್ತು ನನಗೆ ಅದರ ಪ್ರತಿಫಲವನ್ನು ನೀಡುವಂತೆ ನಾನು ಅಲ್ಲಾಹನೊಂದಿಗೆ ಬೇಡುತ್ತಿದ್ದೇನೆ. ಖಂಡಿತವಾಗಿಯೂ ಅವನು ಬೇಡಲಾಗುವವರಲ್ಲೇ ಅತ್ಯಧಿಕ ಗೌರವಾನ್ವಿತನಾಗಿದ್ದಾನೆ.

# قِيَامُ رَمَضَانَ

# ಕಿಯಾಮು ರಮದಾನ್

**ರಮದಾನ್ ತಿಂಗಳ ರಾತ್ರಿಗಳಲ್ಲಿ ನಮಾಝ್ ಮಾಡುವುದರ ಶ್ರೇಷ್ಠತೆಗಳು:**

1. ಈ ವಿಷಯದಲ್ಲಿ ಎರಡು ಹದೀಸ್‌ಗಳು ಬಂದಿವೆ:

**ಮೊದಲನೆಯದು:** ಅಬೂ ಹುರೈರಾ(ﷺ)ರವರ ಹದೀಸ್. ಅವರು ಹೇಳಿದರು:

**كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يُرَغِّبُ فِي قِيَامِ رَمَضَانَ، مِنْ غَيْرِ أَنْ يَأْمُرَهُمْ بِعَزِيمَةٍ، ثُمَّ يَقُولُ:**

**«مَنْ قَامَ رَمَضَانَ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ».**

**فَتُوُفِّيَ رَسُولُ اللَّهِ صَلَّى اللَّهُ عَلَيْهِ وَسَلَّمَ وَالْأَمْرُ عَلَى ذَلِكَ، ثُمَّ كَانَ الْأَمْرُ عَلَى ذَلِكَ فِي خِلَافَةِ أَبِي بَكْرٍ رَضِيَ اللَّهُ عَنْهُ، وَصَدْرٍ مِنْ خِلَافَةِ عُمَرَ رَضِيَ اللَّهُ عَنْهُ.**

**"ಕಿಯಾಮು ರಮದಾನ್ ನಿರ್ವಹಿಸುವಂತೆ ಪ್ರವಾದಿ(ﷺ)ರವರು ಜನರನ್ನು ಪ್ರೋತ್ಸಾಹಿಸುತ್ತಿದ್ದರು. ಆದರೆ ಆ ವಿಷಯದಲ್ಲಿ ಅವರು ಅವರಿಗೆ ಖಚಿತವಾದ ಯಾವುದೇ ಆದೇಶವನ್ನು ನೀಡಿರಲಿಲ್ಲ. ಅವರು ಹೇಳುತ್ತಿದ್ದರು:**
**"ಯಾರು ರಮದಾನ್ ತಿಂಗಳಲ್ಲಿ ವಿಶ್ವಾಸದಿಂದ ಮತ್ತು ಪ್ರತಿಫಲಾಪೇಕ್ಷೆಯಿಂದ ರಾತ್ರಿ ನಮಾಝ್ ನಿರ್ವಹಿಸುತ್ತಾನೋ ಅವನ ಗತ ಪಾಪಗಳು ಕ್ಷಮಿಸಲ್ಪಡುವುವು."**
**ವಸ್ತುಸ್ಥಿತಿಯು ಹೀಗಿರುವಾಗಲೇ[5] ಪ್ರವಾದಿ(ﷺ)ರವರು ಮರಣ ಹೊಂದಿದರು. ತರುವಾಯ ಅಬೂ ಬಕ್ರ್(ﷺ)ರವರ ಖಿಲಾಫತ್ತಿನಲ್ಲಿ ಮತ್ತು ಉಮರ್(ﷺ)ರವರ**

5 ಅಂದರೆ ತರಾವೀಹ್ ನಮಾಝುನ್ನು ಜಮಾಅತ್ ಆಗಿ ನಿರ್ವಹಿಸದಿರುವ ಸ್ಥಿತಿಯಲ್ಲೇ.

**ಖಿಲಾಫತ್ತಿನ ಆರಂಭಕಾಲದಲ್ಲಿ ಸ್ಥಿತಿಯು ಹೀಗೆಯೇ ಮುಂದುವರಿಯಿತು.”** (6)

**ಎರಡನೆಯದು:** ಅಮ್ರ್ ಇಬ್ನ್ ಮುರ್ರಃ ಅಲ್‌ಜುಹನೀ(ﷺ)ರವರ ಹದೀಸ್. ಅವರು ಹೇಳಿದರು:

**جَاءَ رَسُولَ اللَّهِ صَلَّى اللَّهُ عَلَيْهِ وَسَلَّمَ رَجُلٌ مِنْ قُضَاعَةَ فَقَالَ: يَا رَسُولَ اللَّهِ أَرَأَيْتَ إِنْ شَهِدْتُ أَنْ لَا إِلَهَ إِلَّا اللَّهُ، وَأَنَّكَ رَسُولُ اللَّهِ، وَصَلَّيْتُ الصَّلَوَاتِ الْخَمْسَ، وَصُمْتُ الشَّهْرَ، وَقُمْتُ رَمَضَانَ، وَآتَيْتُ الزَّكَاةَ؟ فَقَالَ النَّبِيُّ صَلَّى اللَّهُ عَلَيْهِ وَسَلَّمَ:**

**«مَنْ مَاتَ عَلَى هَذَا كَانَ مِنَ الصِّدِّيقِينَ وَالشُّهَدَاءِ».**

**“ಕುದಾಅಃ ಜನಾಂಗಕ್ಕೆ ಸೇರಿದ ಒಬ್ಬ ವ್ಯಕ್ತಿ ಪ್ರವಾದಿ(ﷺ)ರವರ ಬಳಿಗೆ ಬಂದು ಕೇಳಿದರು: ಓ ಅಲ್ಲಾಹನ ಸಂದೇಶವಾಹಕರೇ! ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ ಮತ್ತು ತಾವು ಅಲ್ಲಾಹನ ರಸೂಲ್ ಆಗಿರುವಿರಿ ಎಂದು ನಾನು ಸಾಕ್ಷ್ಯವಹಿಸಿದರೆ, ಐದು ವೇಳೆಯ ನಮಾಝ್‌ಗಳನ್ನು ನಿರ್ವಹಿಸಿದರೆ, ರಮದಾನ್ ತಿಂಗಳಲ್ಲಿ ಉಪವಾಸ ಆಚರಿಸಿದರೆ, ರಮದಾನಿನ ರಾತ್ರಿಗಳಲ್ಲಿ ನಮಾಝ್ ಮಾಡಿದರೆ ಮತ್ತು ಝಕಾತ್ ನೀಡಿದರೆ ತಾವೇನು ಹೇಳುವಿರಿ? ಆಗ ಪ್ರವಾದಿ(ﷺ)ರವರು ಹೇಳಿದರು:**

**“ಈ ಸ್ಥಿತಿಯಲ್ಲಿ ಯಾರು ಮರಣವನ್ನಪ್ಪುವನೋ ಅವನು ಸಿದ್ಧೀಕ್‌ಗಳ (ಸತ್ಯಸಂಧರ) ಮತ್ತು ಶುಹದಾ (ಹುತಾತ್ಮ)ಗಳ ಜೊತೆಗಿರುವನು.”** (7)

## ಲೈಲತುಲ್ ಕದ್ರ್ ಮತ್ತು ಅದರ ನಿಶ್ಚಿತ ಸಮಯ:

2. ರಮದಾನ್‌ನ ರಾತ್ರಿಗಳಲ್ಲಿ ಶ್ರೇಷ್ಠವಾದ ರಾತ್ರಿ ಲೈಲತುಲ್ ಕದ್ರ್ ಆಗಿದೆ.

---

**6** ಇದನ್ನು ಮುಸ್ಲಿಮ್ ಮತ್ತಿತರರು ವರದಿ ಮಾಡಿದ್ದಾರೆ. ಈ ಹದೀಸಿನಲ್ಲಿ ಬರುವ ಪ್ರವಾದಿ(ﷺ)ರವರ ಮರ್ಫೂಅ್ ಆಗಿರುವ ಮಾತು ಅಲ್‌ಬುಖಾರಿಯಲ್ಲಿಯೂ ವರದಿಯಾಗಿದೆ. ‘ಅಲ್‌ಇರ್ವಾಅ್’ನಲ್ಲಿ (4/14/906) ಮತ್ತು ‘ಸಹೀಹ್ ಅಬೀ ದಾವೂದ್’ನಲ್ಲಿ (1241) ಇದನ್ನು ಕಾಣಬಹುದು.

**7** ಇದನ್ನು ಇಬ್ನ್ ಖುಝೈಮಾ ಮತ್ತು ಇಬ್ನ್ ಹಿಬ್ಬಾನ್ ತಮ್ಮ ‘ಸಹೀಹ್’ ಗ್ರಂಥಗಳಲ್ಲಿ ಹಾಗೂ ಮತ್ತಿತರರು ಸಹೀಹಾದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ. ‘ಇಬ್ನ್ ಖುಝೈಮಾ’ (3/340/2262) ಮತ್ತು ‘ಸಹೀಹು ತ್ತರ್ಗೀಬ್’ (1/419/993) ಗ್ರಂಥಗಳಿಗೆ ನಾನು ಬರೆದ ಟಿಪ್ಪಣಿಯನ್ನು ನೋಡಿರಿ.

ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

«مَنْ قَامَ لَيْلَةَ الْقَدَرِ [ثُمَّ وُفِّقَتْ لَهُ]، إِيمَانًا وَاحْتِسَابًا، غُفِرَ لَهُ مَا تَقَدَّمَ مِنْ ذَنْبِهِ».

**"ಯಾರು ಲೈಲತುಲ್ ಕದರ್‌ನ ರಾತ್ರಿಯಲ್ಲಿ [ತರುವಾಯ ಅದಕ್ಕಿರುವ ಸೌಭಾಗ್ಯ ದಯಪಾಲಿಸಲ್ಪಟ್ಟು] ವಿಶ್ವಾಸದಿಂದ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡುತ್ತಾನೋ ಅವನ ಗತ ಪಾಪಗಳು ಕ್ಷಮಿಸಲ್ಪಡುವುವು."** (8)

3. ಬಲವಾದ ಅಭಿಪ್ರಾಯ ಪ್ರಕಾರ ಅದು (ಲೈಲತುಲ್ ಕದ್ರ್) ರಮದಾನ್ ತಿಂಗಳ ಇಪ್ಪತ್ತೇಳನೇ ರಾತ್ರಿಯಾಗಿದೆ. ಹೆಚ್ಚಿನ ಹದೀಸ್‌ಗಳೂ ಇದನ್ನೇ ಸೂಚಿಸುತ್ತವೆ. ಅವುಗಳ ಪೈಕಿ ಝಿರ್ರ್ ಇಬ್ನ್ ಹುಬೈಶ್(ﷺ)ರವರ ಹದೀಸ್ ಒಂದಾಗಿದೆ: ಅವರು ಹೇಳಿದರು:

سَمِعْتُ أُبَيَّ بْنَ كَعْبٍ يَقُولُ –وَقِيلَ لَهُ: إِنَّ عَبْدَ اللَّهِ بْنَ مَسْعُودٍ يَقُولُ: مَنْ قَامَ السَّنَةَ أَصَابَ لَيْلَةَ الْقَدْرِ!– فَقَالَ أُبَيٌّ رَضِيَ اللَّهُ عَنْهُ: رَحِمَهُ

---

**8** ಇದನ್ನು ಅಲ್‌ಬುಖಾರಿ, ಮುಸ್ಲಿಮ್ ಮತ್ತಿತರರು ಅಬೂ ಹುರೈರಾ(ﷺ)ರಿಂದ ಮತ್ತು ಅಹ್ಮದ್‌ರವರು ಉಬಾದಃ ಇಬ್ನುಸ್ಸಾಮಿತ್(ﷺ)ರಿಂದ ವರದಿ ಮಾಡಿದ್ದಾರೆ. ಹೆಚ್ಚುವರಿಯು ಅಹ್ಮದ್‌ರವರ ಹದೀಸಿನಲ್ಲಿ ಮತ್ತು ಅಬೂ ಹುರೈರಾ(ﷺ)ರಿಂದ ವರದಿ ಮಾಡಿದ ಮುಸ್ಲಿಮ್‌ರ ಹದೀಸಿನಲ್ಲಿರುವುದಾಗಿದೆ.

**ಸೂಚನೆ:** ಇದರ ಮೊದಲನೆ ಮುದ್ರಣದಲ್ಲಿ ಈ ಹದೀಸಿನ ಕೊನೆಯಲ್ಲಿ **'ವಮಾ ತಅಖ್ಖರ'** (ಮತ್ತು ಮುಂಬರುವ ಪಾಪಗಳು) ಎಂಬ ಹೆಚ್ಚುವರಿಯನ್ನು ನಾನು ಪ್ರಸ್ತಾಪಿಸಿದ್ದೆ. ಇದು ಅಲ್‌ಮುಂದಿರೀ, ಅಲ್‌ಅಸ್ಕಲಾನೀ ಮತ್ತಿತರರು ಇದನ್ನು ಸಹೀಹ್ ಎಂದಿರುವುದನ್ನು ಅವಲಂಬಿಸಿದ ಕಾರಣದಿಂದಾಗಿತ್ತು. ತರುವಾಯ ಅಬೂ ಹುರೈರಾ ಮತ್ತು ಉಬಾದಃರವರಿಂದಿರುವ ಈ ಹದೀಸಿನ ವಿವಿಧ ಹಾದಿಗಳನ್ನು ಮತ್ತು ವಿವಿಧ ವರದಿಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವ ಅವಕಾಶವನ್ನು ಅಲ್ಲಾಹು ನನಗೆ ದಯಪಾಲಿಸಿದನು. ನನ್ನ ಹೊರತು ಯಾರಾದರೂ ಇದನ್ನು ಮಾಡಿದ್ದಾಗಿ ನಾನು ಅರಿತಿಲ್ಲ. ಆಗ ಈ ಹೆಚ್ಚುವರಿಯು ಅಬೂ ಹುರೈರಾರಿಂದಿರುವ ಶಾದ್ದ್ ಮತ್ತು ಉಬಾದಃರಿಂದಿರುವ ಮುನ್ಕರ್ ಆಗಿದೆಯೆಂದು ನನಗೆ ಸ್ಪಷ್ಟವಾಯಿತು. ಅಬೂ ಹುರೈರಾರವರ ವರದಿಯನ್ನು ಹಸನ್ ಎಂದು ಮತ್ತು ಉಬಾದಃರವರ ವರದಿಯನ್ನು ಸಹೀಹ್ ಎಂದು ಹೇಳಿದವರಿಗೆ ಪ್ರಮಾದ ಸಂಭವಿಸಿದೆ. ಯಾಕೆಂದರೆ ಅವರು ಸನದ್‌ನ ವರದಿಗಾರರನ್ನು ಪರೀಕ್ಷಿಸಿದರೇ ವಿನಾ ಅದರ ವಿವಿಧ ವರದಿಗಳನ್ನು ಪರೀಕ್ಷಿಸಿಲ್ಲ. ಇವೆಲ್ಲವನ್ನೂ ನಾನು 'ಸಿಲ್ಸಿಲತುಲ್ ಅಹಾದೀಸಿ ದ್ದಈಫಃ' ಎಂಬ ಗ್ರಂಥದಲ್ಲಿ (5083) ವಿಶದವಾಗಿ ವಿವರಿಸಿದ್ದೇನೆ. ಆದ್ದರಿಂದಲೇ 'ಸಹೀಹು ತ್ತರ್ಗೀಬಿ ವತ್ತರ್ಹೀಬ್' ಎಂಬ ಗ್ರಂಥದಲ್ಲಿ (982) ಅಬೂ ಹುರೈರಾರವರ ಈ ಹದೀಸಿನಲ್ಲಿ ನಾನು ಈ ಹೆಚ್ಚುವರಿಯನ್ನು ಪ್ರಸ್ತಾಪಿಸಲಿಲ್ಲ. 'ಅತರ್ಗೀಬ್ ವತ್ತರ್ಹೀಬ್' ಎಂಬ ಅದರ ಮೂಲ ಗ್ರಂಥಕ್ಕೆ ವಿರುದ್ಧವಾಗಿ ಉಬಾದಃರವರ ಹದೀಸನ್ನೂ ನಾನು ಪ್ರಸ್ತಾಪಿಸಿಲ್ಲ. ಯಶಸ್ಸನ್ನು ದಯಪಾಲಿಸುವವನು ಅಲ್ಲಾಹನಾಗಿದ್ದಾನೆ.

اللَّهُ، أَرَادَ أَنْ لَا يَتَّكِلَ النَّاسُ، وَالَّذِي لَا إِلَهَ إِلَّا هُوَ، إِنَّهَا لَفِي رَمَضَانَ، -يَحْلِفُ مَا يَسْتَثْنِي- وَوَاللَّهِ إِنِّي لَأَعْلَمُ أَيَّ لَيْلَةٍ هِيَ، هِيَ اللَّيْلَةُ الَّتِي أَمَرَنَا رَسُولُ اللَّهِ صَلَّى اللَّهُ عَلَيْهِ وَسَلَّمَ بِقِيَامِهَا، هِيَ لَيْلَةُ صَبِيحَةِ سَبْعٍ وَعِشْرِينَ، وَأَمَارَتُهَا أَنْ تَطْلُعَ الشَّمْسُ فِي صَبِيحَةِ يَوْمِهَا بَيْضَاءَ لَا شُعَاعَ لَهَا.

**"ಯಾರು ವರ್ಷಪೂರ್ತಿ ಕಿಯಾಮುಲ್ಲೈಲ್ ನಿರ್ವಹಿಸುತ್ತಾರೋ ಅವರು ಲೈಲತುಲ್ ಕದ್ರನ್ನು ಪಡೆಯುತ್ತಾರೆ ಎಂಬ ಇಬ್ನ್ ಮಸ್‌ಊದ್(ﷺ)ರವರ ಮಾತಿನ ಬಗ್ಗೆ ಉಬಯ್ಯ್ ಇಬ್ನ್ ಕಅ್‌ಬ್(ﷺ)ರೊಂದಿಗೆ ವಿಚಾರಿಸಲಾದಾಗ ಅವರು ಹೀಗೆನ್ನುವುದಾಗಿ ನಾನು ಆಲಿಸಿದ್ದೇನೆ: ಅಲ್ಲಾಹು ಅವರ (ಇಬ್ನ್ ಮಸ್‌ಊದ್‌ರ) ಮೇಲೆ ಕರುಣೆ ತೋರಲಿ. ಜನರು ಆ ರಾತ್ರಿಯ ಮೇಲೆ ಅವಲಂಬಿತರಾಗದಿರಲು ಅವರು ಉದ್ದೇಶಿಸಿದ್ದಾರೆ. ಯಾರ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲವೋ ಅವನ ಮೇಲಾಣೆ! ಖಂಡಿತವಾಗಿಯೂ ಅದು (ಲೈಲತುಲ್ ಕದ್ರ್) ರಮದಾನ್ ತಿಂಗಳಲ್ಲಾಗಿದೆ. ಅಲ್ಲಾಹನಾಣೆ! ಆ ರಾತ್ರಿ ಯಾವುದೆಂದು ನನಗೆ ಗೊತ್ತಿದೆ. ರಾತ್ರಿ ನಮಾಝ್ ನಿರ್ವಹಿಸಬೇಕೆಂದು ಪ್ರವಾದಿ (ﷺ)ರವರು ನಮ್ಮೊಂದಿಗೆ ಆದೇಶ ನೀಡಿದ ಆ ರಾತ್ರಿ ರಮದಾನ್ ತಿಂಗಳ ಇಪ್ಪತ್ತೇಳನೇ ರಾತ್ರಿಯಾಗಿದೆ. ಆ ರಾತ್ರಿಯ ಲಕ್ಷಣವೇನೆಂದರೆ ಮರುದಿನ ಬೆಳಗ್ಗೆ ಸೂರ್ಯನು ಕಿರಣಗಳಿಲ್ಲದೆ ಬೆಳ್ಳಗೆ ಹೊಳೆಯುತ್ತಿರುವನು."**

ಬೇರೊಂದು ವರದಿಯಲ್ಲಿ ಅವರು ಇದನ್ನು (ಈ ಹದೀಸನ್ನು) ಪ್ರವಾದಿ(ﷺ) ರವರಿಗೆ ಸೇರಿಸಿದ್ದಾಗಿ ಕಾಣಬಹುದು. [9]

## ರಾತ್ರಿ ನಮಾಝನ್ನು ಜಮಾಅತ್ ಆಗಿ ನಿರ್ವಹಿಸುವುದು ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ:

4. ರಮದಾನ್‌ನಲ್ಲಿ ರಾತ್ರಿ ನಮಾಝನ್ನು ಜಮಾಅತ್ ಆಗಿ ನಿರ್ವಹಿಸುವುದು ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ. ಮಾತ್ರವಲ್ಲ, ಒಂಟಿಯಾಗಿ ನಿರ್ವಹಿಸುವುದಕ್ಕಿಂತಲೂ

---

9 ಇದನ್ನು ಮುಸ್ಲಿಮ್ ಮತ್ತಿತರರು ವರದಿ ಮಾಡಿದ್ದಾರೆ. 'ಸಹೀಹ್ ಅಬೀ ದಾವೂದ್'ನಲ್ಲಿ (1247) ಇದನ್ನು ಕಾಣಬಹುದು.

ಇದು ಶ್ರೇಷ್ಠವಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಸ್ವತಃ ಇದನ್ನು ಜಮಾಅತ್ ಆಗಿ ನಿರ್ವಹಿಸಿದ್ದಾರೆ ಮತ್ತು ಹಾಗೆ ನಿರ್ವಹಿಸುವುದರ ಶ್ರೇಷ್ಠತೆಯನ್ನು ವಿವರಿಸಿದ್ದಾರೆ. ಅಬೂ ದರ್ರ್(ﷺ)ರವರ ಹದೀಸ್‌ನಲ್ಲಿರುವಂತೆ. ಅವರು (ಅಬೂ ದರ್ರ್) ಹೇಳುತ್ತಾರೆ:

صُمْنَا مَعَ رَسُولِ اللَّهِ صَلَّى اللَّهُ عَلَيْهِ وَسَلَّمَ رَمَضَانَ، فَلَمْ يَقُمْ بِنَا شَيْئًا مِنَ الشَّهْرِ، حَتَّى بَقِيَ سَبْعٌ فَقَامَ بِنَا حَتَّى ذَهَبَ ثُلُثُ اللَّيْلِ، فَلَمَّا كَانَتِ السَّادِسَةُ لَمْ يَقُمْ بِنَا، فَلَمَّا كَانَتِ الْخَامِسَةُ قَامَ بِنَا حَتَّى ذَهَبَ شَطْرُ اللَّيْلِ، فَقُلْتُ: يَا رَسُولَ اللَّهِ لَوْ نَفَّلْتَنَا قِيَامَ هَذِهِ اللَّيْلَةِ، فَقَالَ:

«إِنَّ الرَّجُلَ إِذَا صَلَّى مَعَ الْإِمَامِ حَتَّى يَنْصَرِفَ حُسِبَ لَهُ قِيَامُ لَيْلَةٍ»

فَلَمَّا كَانَتِ الرَّابِعَةُ لَمْ يَقُمْ، فَلَمَّا كَانَتِ الثَّالِثَةُ جَمَعَ أَهْلَهُ وَنِسَاءَهُ وَالنَّاسَ، فَقَامَ بِنَا حَتَّى خَشِينَا أَنْ يَفُوتَنَا الْفَلَاحُ. قَالَ: قُلْتُ: مَا الْفَلَاحُ؟ قَالَ: السَّحُورُ، ثُمَّ لَمْ يَقُمْ بِنَا بَقِيَّةَ الشَّهْرِ.

**"ಅಲ್ಲಾಹನ ಸಂದೇಶವಾಹಕರ ಜೊತೆಗೆ ನಾವು ರಮದಾನ್ ಉಪವಾಸ ಆಚರಿಸಿದೆವು. ರಮದಾನಿನ ಕೊನೆಯ ಏಳು ರಾತ್ರಿಗಳು ಬಾಕಿಯಾಗುವವರೆಗೆ ಅವರು ನಮ್ಮೊಂದಿಗೆ ಒಮ್ಮೆಯೂ ರಾತ್ರಿ ನಮಾಝ್ ಮಾಡಲಿಲ್ಲ. ಹಾಗೆ ಇಪ್ಪತ್ತಮೂರನೇ ರಾತ್ರಿಯಂದು ರಾತ್ರಿಯ ಮೂರನೇ ಒಂದು ಭಾಗ ಕಳೆಯುವವರೆಗೆ ಅವರು ನಮ್ಮೊಂದಿಗೆ ನಮಾಝ್ ಮಾಡಿದರು. ಇಪ್ಪತ್ತನಾಲ್ಕನೇ ರಾತ್ರಿ ಅವರು ನಮ್ಮೊಂದಿಗೆ ನಮಾಝ್ ಮಾಡಲಿಲ್ಲ. ಇಪ್ಪತ್ತೈದನೇ ರಾತ್ರಿಯಂದು ರಾತ್ರಿಯ ಅರ್ಧ ಭಾಗ ಕಳೆಯುವವರೆಗೆ ಅವರು ನಮ್ಮೊಂದಿಗೆ ನಮಾಝ್ ಮಾಡಿದರು. ಆಗ ನಾನು ಅವರೊಂದಿಗೆ ಕೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ! ಈ ರಾತ್ರಿಯ ಉಳಿದ ಭಾಗದಲ್ಲಿ ನಾವು ಐಚ್ಛಿಕವಾಗಿ ನಮಾಝ್ ಮಾಡಲೇ? ಅವರು ಹೇಳಿದರು:**

**"ಇಮಾಮ್ ನಮಾಝ್ ಮಾಡಿ ಮುಗಿಯುವವರೆಗೆ ಓರ್ವ ವ್ಯಕ್ತಿ ಅವರ ಹಿಂದೆ ನಮಾಝ್ ಮಾಡಿದರೆ ರಾತ್ರಿ ಪೂರ್ತಿ ನಮಾಝ್ ಮಾಡಿದನೆಂದು ಅವನ ಹೆಸರಲ್ಲಿ ದಾಖಲಿಸಲಾಗುತ್ತದೆ."**

**ನಂತರ ಇಪ್ಪತ್ತಾರನೇ ರಾತ್ರಿ ಅವರು ನಮ್ಮೊಂದಿಗೆ ನಮಾಝ್ ಮಾಡಲಿಲ್ಲ.**

**ಇಪ್ಪತ್ತೇಳನೇ ರಾತ್ರಿಯಂದು[10] ಅವರು ತಮ್ಮ ಮನೆಯವರನ್ನು, ಪತ್ನಿಯರನ್ನು ಮತ್ತು ಇತರ ಜನರನ್ನು ಒಟ್ಟುಗೂಡಿಸಿ ನಮಾಝ್ ಮಾಡಿದರು. ಎಲ್ಲಿಯವರೆಗೆ ನಮಾಝ್ ಮಾಡಿದರೆಂದರೆ ನಾವು 'ಫಲಾಹ್' ಅನ್ನು ಕಳೆದುಕೊಳ್ಳುವೆವೋ ಎಂದು ನಮಗೆ ಭಯವಾಗುವವರೆಗೆ. 'ಫಲಾಹ್' ಎಂದರೇನೆಂದು ವರದಿಗಾರನು ಕೇಳಿದಾಗ ಅವರು (ಅಬೂದರ್ರ್) ಹೇಳಿದರು: 'ಫಲಾಹ್' ಎಂದರೆ ಸಹರ್. ತರುವಾಯ ಉಳಿದ ರಾತ್ರಿಗಳಲ್ಲಿ ಅವರು ನಮ್ಮೊಂದಿಗೆ ನಮಾಝ್ ಮಾಡಲಿಲ್ಲ."[11]**

## ರಾತ್ರಿ ನಮಾಝುನ್ನು ಜಮಾಅತ್ ಆಗಿ ನಿರ್ವಹಿಸುವುದನ್ನು ಪ್ರವಾದಿ(ﷺ)ರವರು ಮುಂದುವರಿಸದಿರಲು ಕಾರಣ:

5. ಪ್ರವಾದಿ(ﷺ)ರವರು ಆ ತಿಂಗಳ ಉಳಿದ ರಾತ್ರಿಗಳಲ್ಲಿ ರಾತ್ರಿ ನಮಾಝುನ್ನು ಜಮಾಅತ್ ಆಗಿ ನಿರ್ವಹಿಸದಿರಲು ಕಾರಣ ಅಲ್‌ಬುಖಾರಿ, ಮುಸ್ಲಿಮ್ ಮತ್ತಿತರರು[12] ವರದಿ ಮಾಡಿದ ಆಇಶಾ(ರ)ರವರ ಹದೀಸಿನಲ್ಲಿರುವಂತೆ ರಮದಾನ್ ತಿಂಗಳಲ್ಲಿ ರಾತ್ರಿ ನಮಾಝ್ ಕಡ್ಡಾಯವಾಗಬಹುದು ಮತ್ತು ಅದನ್ನು ನಿರ್ವಹಿಸಲು ಜನರಿಗೆ ಸಾಧ್ಯವಾಗಲಾರದು ಎಂಬ ಭಯದಿಂದಾಗಿತ್ತು. ಆದರೆ ಪ್ರವಾದಿ(ﷺ)ರವರ ಮರಣದೊಂದಿಗೆ ಅಲ್ಲಾಹು ಶರೀಅತ್ತನ್ನು ಪರಿಪೂರ್ಣಗೊಳಿಸಿರುವುದರಿಂದ ಅವರ ಮರಣಾನಂತರ ಈ ಭಯವು ನಿವಾರಣೆಯಾಗಿದೆ. ಆದ್ದರಿಂದ ರಾತ್ರಿ ನಮಾಝುನ್ನು ಜಮಾಅತ್ತಾಗಿ ನಿರ್ವಹಿಸುವುದಕ್ಕಿರುವ ತೊಡಕು ನಿವಾರಣೆಯಾಗಿರುವುದರಿಂದ ಅದರ ಮೊದಲ ವಿಧಿ ಅದಕ್ಕೆ ಅನ್ವಯವಾಗುತ್ತದೆ. ಅಂದರೆ ಕಿಯಾಮು ರಮದಾನನ್ನು ಜಮಾಅತ್ ಆಗಿ ನಿರ್ವಹಿಸುವುದು ಶರೀಅತ್‌ನಲ್ಲಿ ಒಳಪಟ್ಟದ್ದಾಗುತ್ತದೆ. ಆದ್ದರಿಂದಲೇ ಸಹೀಹುಲ್ ಬುಖಾರಿ ಮತ್ತಿತರ ಗ್ರಂಥಗಳಲ್ಲಿರುವಂತೆ ಉಮರ್(ರ)ರವರು ಇದನ್ನು ಜೀವಂತಗೊಳಿಸಿದರು.[13]

---

**10** ಅಂದರೆ ಇಪ್ಪತ್ತೇಳನೇ ರಾತ್ರಿ. ಈಗಾಗಲೇ ಹೇಳಲಾದಂತೆ ವಿದ್ವಾಂಸರ ಪ್ರಬಲಾಭಿಪ್ರಾಯ ಪ್ರಕಾರ ಲೈಲತುಲ್ ಕದರ್ ಇದೇ ರಾತ್ರಿಯಾಗಿದೆ. ಆದ್ದರಿಂದಲೇ ಪ್ರವಾದಿ(ﷺ)ರವರು ಆ ರಾತ್ರಿಯಂದು ತಮ್ಮ ಮನೆಯವರನ್ನು, ಪತ್ನಿಯರನ್ನು ಹಾಗೂ ಇತರ ಜನರನ್ನು ಜಮಾಯಿಸಿದ್ದಾರೆ. ಈ ರಾತ್ರಿಯಂದು ಮಹಿಳೆಯರು ಜಮಾಅತ್‌ಗೆ ಹಾಜರಾಗುವುದು ಪ್ರೋತ್ಸಾಹನೀಯವಾಗಿದೆ ಎಂಬುದಕ್ಕೆ ಇದರಲ್ಲಿ ಪುರಾವೆಯಿದೆ.

**11** ಹದೀಸ್ ಸಹೀಹ್. ಇದನ್ನು ಸುನನ್ ಗ್ರಂಥಗಳ ಕರ್ತರು ಹಾಗೂ ಮತ್ತಿತರರು ವರದಿ ಮಾಡಿದ್ದಾರೆ. **'**ಸಲಾತು ತ್ತರಾವೀಹ್**'** (ಪುಟ 16–17), **'**ಸಹೀಹ್ ಅಬೀ ದಾವೂದ್**'** (1245) ಮತ್ತು **'**ಅಲ್‌ಇರ್ವಾಅ್**'**ನಲ್ಲಿ (447) ಇದನ್ನು ಕಾಣಬಹುದು.

**12** ಈ ಹದೀಸನ್ನು ಮತ್ತು ಇದರ ತಖ್ರೀಜನ್ನು **'**ಸಲಾತು ತ್ತರಾವೀಹ್**'**ನಲ್ಲಿ (ಪುಟ 12–14) ನೋಡಿರಿ.

**13** ಇದರ ತಖ್ರೀಜ್ ಮತ್ತು ಇಬ್ನ್ ಅಬ್ದಿಲ್ ಬರ್ರ್ ಮೊದಲಾದವರು ಇದರ ಬಗ್ಗೆ ಹೇಳಿದ

## ಕಿಯಾಮು ರಮದಾನನ್ನು ಮಹಿಳೆಯರು ಜಮಾಅತ್ ಆಗಿ ನಿರ್ವಹಿಸುವುದು ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ:

6. ಈ ಮೇಲೆ ಉಲ್ಲೇಖಿಸಿದ ಅಬೂ ದರ್ರ್(ﷺ)ರವರ ಹದೀಸಿನಲ್ಲಿರುವಂತೆ ಮಹಿಳೆಯರು ಕಿಯಾಮು ರಮದಾನನ್ನು ಜಮಾಅತ್ ಆಗಿ ನಿರ್ವಹಿಸಲು ಹಾಜರಾಗುವುದು ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ. ಪುರುಷರಿಗಿರುವ ಇಮಾಮ್ ಅಲ್ಲದ ಬೇರೊಬ್ಬ ಇಮಾಮ್‌ರನ್ನು ಮಹಿಳೆಯರಿಗಾಗಿಯೇ ವಿಶೇಷವಾಗಿ ನಿಲ್ಲಿಸುವುದಕ್ಕೂ ಅನುಮತಿಯಿದೆ. ಕಿಯಾಮು ರಮದಾನ್ ನಿರ್ವಹಿಸುವುದಕ್ಕಾಗಿ ಜನರನ್ನು ಒಟ್ಟುಗೂಡಿಸಿದಾಗ ಉಮರ್(ﷺ)ರವರು ಪುರುಷರಿಗೆ ಇಮಾಮ್ ಆಗಿ ಉಬಯ್ಯ್ ಇಬ್ನ್ ಕಅ್‌ಬ್(ﷺ)ರವರನ್ನು ಮತ್ತು ಮಹಿಳೆಯರಿಗೆ ಇಮಾಮ್ ಆಗಿ ಸುಲೈಮಾನ್ ಇಬ್ನ್ ಅಬೀ ಹಸ್ಮಃ(ﷺ)ರವರನ್ನು ನಿಲ್ಲಿಸಿದ್ದರೆಂಬುದು ದೃಢಪಟ್ಟಿದೆ.

ಅರ್‌ಫಜಃ ಅಸ್ಸಕಫೀ(ﷺ)ರಿಂದ ವರದಿ: ಅವರು ಹೇಳುತ್ತಾರೆ:

كَانَ عَلِيُّ بْنُ أَبِي طَالِبٍ رَضِيَ اللَّهُ عَنْهُ يَأْمُرُ النَّاسَ بِقِيَامِ شَهْرِ رَمَضَانَ وَيَجْعَلُ لِلرِّجَالِ إِمَامًا وَلِلنِّسَاءِ إِمَامًا، قَالَ: فَكُنْتُ أَنَا إِمَامَ النِّسَاءِ.

**"ಅಲೀ ಇಬ್ನ್ ಅಬೀ ತಾಲಿಬ್(ﷺ)ರವರು ರಮದಾನಿನಲ್ಲಿ ರಾತ್ರಿ ನಮಾಝ್ ನಿರ್ವಹಿಸುವಂತೆ ಜನರಿಗೆ ಆದೇಶ ನೀಡುತ್ತಿದ್ದರು ಮತ್ತು ಪುರುಷರಿಗೆ ಒಬ್ಬ ಇಮಾಮನ್ನು ಹಾಗೂ ಮಹಿಳೆಯರಿಗೆ ಒಬ್ಬ ಇಮಾಮನ್ನು ನಿಶ್ಚಯಿಸುತ್ತಿದ್ದರು. ಆಗ ಮಹಿಳೆಯರ ಇಮಾಮ್ ನಾನಾಗಿದ್ದೆನು."** [14]

ನಾನು ಹೇಳುತ್ತೇನೆ: ನನ್ನ ಅಭಿಪ್ರಾಯ ಪ್ರಕಾರ ಮಸೀದಿ ವಿಶಾಲವಾಗಿದ್ದರೆ ಮಾತ್ರ ಹೀಗೆ ಎರಡು ಇಮಾಮ್‌ಗಳನ್ನು ನಿಲ್ಲಿಸಬಹುದು. ಒಂದು ಇಮಾಮ್‌ನಿಂದ ಇನ್ನೊಂದು ಇಮಾಮ್‌ಗೆ ತೊಂದರೆಯಾಗದಿರುವುದಕ್ಕಾಗಿ.

---

ಮಾತುಗಳನ್ನು 'ಸಲಾತು ತ್ತರಾವೀಹ್' ಎಂಬ ಗ್ರಂಥದಲ್ಲಿ (ಪುಟ 49–52) ನೋಡಿರಿ.

**14** ಇದು ಮತ್ತು ಇದರ ಮುಂಚಿನ ಹದೀಸನ್ನು ಅಲ್‌ಬೈಹಕೀ (2/494) ವರದಿ ಮಾಡಿದ್ದಾರೆ. ಮೊದಲನೆಯದ್ದನ್ನು ಅಬ್ದುರ್ರಝ್ಝಾಕ್ ಕೂಡ ತಮ್ಮ 'ಮುಸನ್ನಫ್'ನಲ್ಲಿ (8/258/8722) ವರದಿ ಮಾಡಿದ್ದಾರೆ. ಇವೆರಡನ್ನೂ ಇಬ್ನ್ ನಸ್ರ್ ತಮ್ಮ 'ಕಿಯಾಮು ರಮದಾನ್' ಎಂಬ ಗ್ರಂಥದಲ್ಲಿ (ಪುಟ 93) ವರದಿ ಮಾಡಿದ್ದಾರೆ. ತರುವಾಯ ನಾವು ಹೇಳಿದ್ದಕ್ಕೆ ಪುರಾವೆಯಾಗಿ ಇವರೂ (ಪುಟ 95) ಇವೆರಡು ಹದೀಸ್‌ಗಳನ್ನೇ ತೋರಿಸಿದ್ದಾರೆ.

## ರಾತ್ರಿ ನಮಾಝ್‌ನ ರಕ್‌ಅತ್‌ಗಳ ಸಂಖ್ಯೆ:

7. ಇದರ ರಕ್‌ಅತ್‌ಗಳ ಸಂಖ್ಯೆ ಹನ್ನೊಂದಾಗಿದೆ. ಪ್ರವಾದಿ(ﷺ)ರವರನ್ನು ಅನುಸರಿಸುವುದಕ್ಕಾಗಿ ಇದಕ್ಕಿಂತ ಹೆಚ್ಚು ನಿರ್ವಹಿಸಬಾರದು. ಯಾಕೆಂದರೆ ತಮ್ಮ ಮರಣದವರೆಗೂ ಅವರು ಅದಕ್ಕಿಂತ ಹೆಚ್ಚು ನಿರ್ವಹಿಸಿಲ್ಲ. ರಮದಾನ್‌ನಲ್ಲಿ ಪ್ರವಾದಿ (ﷺ)ರವರ ರಾತ್ರಿ ನಮಾಝಿನ ಬಗ್ಗೆ ಆಇಶಾ(رضي الله عنها)ರವರೊಂದಿಗೆ ವಿಚಾರಿಸಲಾದಾಗ ಅವರು ಹೇಳಿದರು:

**مَا كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَزِيدُ فِي رَمَضَانَ وَلَا فِي غَيْرِهِ عَلَى إِحْدَى عَشْرَةَ رَكْعَةً، يُصَلِّي أَرْبَعًا فَلَا تَسَلْ عَنْ حُسْنِهِنَّ وَطُولِهِنَّ، ثُمَّ يُصَلِّي أَرْبَعًا فَلَا تَسَلْ عَنْ حُسْنِهِنَّ وَطُولِهِنَّ، ثُمَّ يُصَلِّي ثَلَاثًا.**

**"ಪ್ರವಾದಿ(ﷺ)ರವರು ರಮದಾನಿನಲ್ಲಾಗಲಿ ಇತರ ತಿಂಗಳುಗಳಲ್ಲಾಗಲಿ ಹನ್ನೊಂದು ರಕ್‌ಅತ್‌ಗಿಂತ ಹೆಚ್ಚು ನಮಾಝ್ ನಿರ್ವಹಿಸುತ್ತಿರಲಿಲ್ಲ. ಅವರು ನಾಲ್ಕು ರಕ್‌ಅತ್ ನಿರ್ವಹಿಸುತ್ತಿದ್ದರು. ಅವುಗಳ ಸೌಂದರ್ಯ ಮತ್ತು ದೀರ್ಘದ ಬಗ್ಗೆ ಕೇಳಬೇಡ. ತರುವಾಯ ಅವರು ನಾಲ್ಕು ರಕ್‌ಅತ್ ನಿರ್ವಹಿಸುತ್ತಿದ್ದರು. ಅವುಗಳ ಸೌಂದರ್ಯ ಮತ್ತು ದೀರ್ಘದ ಬಗ್ಗೆ ಕೇಳಬೇಡ. ತರುವಾಯ ಅವರು ಮೂರು ರಕ್‌ಅತ್ ನಿರ್ವಹಿಸುತ್ತಿದ್ದರು."** (15)

8. ಅದಕ್ಕಿಂತ (ಹನ್ನೊಂದಕ್ಕಿಂತ) ಕಮ್ಮಿ ನಿರ್ವಹಿಸಬಹುದು. ಎಷ್ಟೆಂದರೆ ಕೇವಲ ಒಂದು ರಕ್‌ಅತ್ ಕೂಡ ನಿರ್ವಹಿಸಬಹುದು. ಇದಕ್ಕೆ ಪ್ರವಾದಿ(ﷺ)ರವರ ಮಾತು ಮತ್ತು ಕೃತ್ಯವು ಪುರಾವೆಯಾಗಿದೆ.

ಪ್ರವಾದಿ(ﷺ)ರವರ ಕೃತ್ಯದ ಬಗ್ಗೆ ಹೇಳುವುದಾದರೆ ಆಇಶಾ(رضي الله عنها)ರವರೊಂದಿಗೆ ವಿಚಾರಿಸಲಾಯಿತು: **"ಪ್ರವಾದಿ(ﷺ)ರವರು ಎಷ್ಟು ರಕ್‌ಅತ್‌ಗಳೊಂದಿಗೆ ವಿತ್ರ್ ಮಾಡುತ್ತಿದ್ದರು?"** ಆಗ ಅವರು ಹೇಳಿದರು:

**15** ಇದನ್ನು ಅಲ್‌ಬುಖಾರಿ ಮುಸ್ಲಿಮ್ ಮತ್ತಿತರರು ವರದಿ ಮಾಡಿದ್ದಾರೆ. 'ಸಲಾತು ತ್ತರಾವೀಹ್' (ಪುಟ 20–21) ಮತ್ತು 'ಸಹೀಹ್ ಅಬೀ ದಾವೂದ್'ನಲ್ಲಿ (1212) ಇದನ್ನು ಕಾಣಬಹುದು.

كَانَ يُوتِرُ بِأَرْبَعٍ وَثَلَاثٍ، وَسِتٍّ وَثَلَاثٍ، وَثَمَانٍ وَثَلَاثٍ، وَعَشْرٍ وَثَلَاثٍ، وَلَمْ يَكُنْ يُوتِرُ بِأَنْقَصَ مِنْ سَبْعٍ، وَلَا بِأَكْثَرَ مِنْ ثَلَاثَ عَشْرَةَ.

**"ಪ್ರವಾದಿ(ﷺ)ರವರು ನಾಲ್ಕು ರಕ್‌ಅತ್ ನಿರ್ವಹಿಸಿ[16] ಮೂರು ರಕ್‌ಅತ್‌ಗಳಿಂದ ವಿತ್ರ್ ಮಾಡುತ್ತಿದ್ದರು. ಅವರು ಆರು ರಕ್‌ಅತ್ ನಿರ್ವಹಿಸಿ ಮೂರು ರಕ್‌ಅತ್‌ಗಳಿಂದ ವಿತ್ರ್ ಮಾಡುತ್ತಿದ್ದರು. ಅವರು ಎಂಟು ರಕ್‌ಅತ್ ನಿರ್ವಹಿಸಿ ಮೂರು ರಕ್‌ಅತ್‌ಗಳಿಂದ ವಿತ್ರ್ ಮಾಡುತ್ತಿದ್ದರು. ಅವರು ಹತ್ತು ರಕ್‌ಅತ್ ನಿರ್ವಹಿಸಿ ಮೂರು ರಕ್‌ಅತ್‌ಗಳಿಂದ ವಿತ್ರ್ ಮಾಡುತ್ತಿದ್ದರು. ಅವರು ಏಳಕ್ಕಿಂತ ಕಡಿಮೆ ರಕ್‌ಅತ್ ನಿರ್ವಹಿಸುತ್ತಿರಲಿಲ್ಲ ಮತ್ತು ಹದಿಮೂರಕ್ಕಿಂತ ಹೆಚ್ಚು ರಕ್‌ಅತ್ ನಿರ್ವಹಿಸುತ್ತಿರಲಿಲ್ಲ."** [17]

ಪ್ರವಾದಿ(ﷺ)ರವರ ಮಾತಿನ ಬಗ್ಗೆ ಹೇಳುವುದಾದರೆ ಅವರು ಹೇಳಿದರು:

«الْوِتْرُ حَقٌّ، فَمَنْ شَاءَ فَلْيُوتِرْ بِخَمْسٍ، وَمَنْ شَاءَ فَلْيُوتِرْ بِثَلَاثٍ، وَمَنْ شَاءَ فَلْيُوتِرْ بِوَاحِدَةٍ»

**"ವಿತ್ರ್ ಸತ್ಯವಾಗಿದೆ. ಆದ್ದರಿಂದ ಯಾರಾದರೂ ಐದು ರಕ್‌ಅತ್‌ಗಳೊಂದಿಗೆ ವಿತ್ರ್ ನಿರ್ವಹಿಸಲು ಬಯಸಿದರೆ ಹಾಗೆ ಮಾಡಲಿ. ಯಾರಾದರೂ ಮೂರು ರಕ್‌ಅತ್‌ಗಳೊಂದಿಗೆ ವಿತ್ರ್ ನಿರ್ವಹಿಸಲು ಬಯಸಿದರೆ ಹಾಗೆ ಮಾಡಲಿ. ಯಾರಾದರೂ ಒಂದು ರಕ್‌ಅತ್‌ನೊಂದಿಗೆ ವಿತ್ರ್ ನಿರ್ವಹಿಸಲು ಬಯಸಿದರೆ ಹಾಗೆ ಮಾಡಲಿ."** [18]

---

**16** ನಾನು ಹೇಳುತ್ತೇನೆ: ಇಶಾದ ನಂತರವಿರುವ ಎರಡು ರಕ್‌ಅತ್‌ಗಳು ಅಥವಾ ರಾತ್ರಿ ನಮಾಝುನ್ನು ಪ್ರಾರಂಭಿಸುವುದಕ್ಕೆ ಮೊದಲು ಪ್ರವಾದಿ(ﷺ)ರವರು ಹಗುರವಾಗಿ ನಿರ್ವಹಿಸುತ್ತಿದ್ದ ಎರಡು ರಕ್‌ಅತ್‌ಗಳು ಇದರಲ್ಲಿ ಸೇರಿವೆ. ಈ ಅಭಿಪ್ರಾಯವನ್ನು ಹಾಫಿದ್ ಇಬ್ನ್ ಹಜರ್ ಬಲಪಡಿಸಿದ್ದಾರೆ. ನೋಡಿ: 'ಸಲಾತು ತ್ತರಾವೀಹ್' (ಪುಟ 19–20).

**17** ಇದನ್ನು ಅಬೂದಾವೂದ್, ಅಹ್ಮದ್ ಮತ್ತಿತರರು ವರದಿ ಮಾಡಿದ್ದಾರೆ. ಇದರ ಸನದ್ ಉತ್ತಮವಾಗಿದೆ. ಅಲ್‌ಇರಾಕೀ ಇದನ್ನು ಸಹೀಹ್ ಎಂದಿದ್ದಾರೆ. 'ಸಲಾತು ತ್ತರಾವೀಹ್' (ಪುಟ 98–99) ಮತ್ತು 'ಸಹೀಹ್ ಅಬೀ ದಾವೂದ್'ನಲ್ಲಿ (1233) ಇದನ್ನು ಕಾಣಬಹುದು.

**18** ಇದನ್ನು ಅತ್ತಹಾವೀ, ಅಲ್‌ಹಾಕಿಮ್ ಮತ್ತಿತರರು ವರದಿ ಮಾಡಿದ್ದಾರೆ. ವಿದ್ವಾಂಸರ ಪೈಕಿ ಒಂದು ಗುಂಪು ಹೇಳಿದಂತೆ ಇದರ ಸನದ್ ಸಹೀಹ್ ಆಗಿದೆ. ಇದಕ್ಕೆ ಶಾಹಿದ್ ಆಗಿರುವ ಒಂದು ಹದೀಸ್ ಇದೆ. ಆದರೆ ಅದರಲ್ಲಿ ಮುನ್ಕರ್ ಆಗಿರುವ ಭಾಗವಿದೆ. ನಾನದನ್ನು 'ಸಲಾತು ತ್ತರಾವೀಹ್'ನಲ್ಲಿ (ಪುಟ 99–100) ವಿವರಿಸಿದ್ದೇನೆ.

## ರಾತ್ರಿ ನಮಾಝ್‌ನಲ್ಲಿ ಕುರ್‌ಆನ್ ಪಾರಾಯಣ:

9. ರಮದಾನ್‌ನ ರಾತ್ರಿ ನಮಾಝ್‌ನಲ್ಲಿ ಅಥವಾ ಇತರ ತಿಂಗಳ ರಾತ್ರಿ ನಮಾಝ್‌ಗಳಲ್ಲಿ ಕುರ್‌ಆನ್ ಪಾರಾಯಣ ಮಾಡುವುದರ ಬಗ್ಗೆ ಹೇಳುವುದಾದರೆ, ಹೆಚ್ಚು ಅಥವಾ ಕಮ್ಮಿ ಪಾರಾಯಣ ಮಾಡಬಾರದೆಂಬಂತೆ ಪ್ರವಾದಿ(ﷺ)ರವರು ಅದಕ್ಕೆ ಒಂದು ಮಿತಿಯನ್ನು ನಿಗದಿಗೊಳಿಸಿಲ್ಲ. ಬದಲಾಗಿ ಅವರ ಪಾರಾಯಣವು ಕಮ್ಮಿ ಮತ್ತು ಹೆಚ್ಚು ಎಂಬಂತೆ ವ್ಯತ್ಯಸ್ತವಾಗಿರುತ್ತಿತ್ತು. ಅವರು ಕೆಲವೊಮ್ಮೆ ಪ್ರತಿಯೊಂದು ರಕ್‌ಅತ್‌ನಲ್ಲೂ 'ಯಾ ಅಯ್ಯುಹಲ್ ಮುಝ್ಝಮ್ಮಿಲ್'ನಂತಹ ಸುಮಾರು 20 ಆಯತ್‌ಗಳನ್ನು ಪಾರಾಯಣ ಮಾಡುತ್ತಿದ್ದರು. ಕೆಲವೊಮ್ಮೆ ಸುಮಾರು 50 ಆಯತ್‌ಗಳನ್ನು ಪಾರಾಯಣ ಮಾಡುತ್ತಿದ್ದರು. ಅವರು ಹೇಳುತ್ತಿದ್ದರು:

«مَنْ صَلَّى فِي لَيْلَةٍ بِمِائَةِ آيَةٍ لَمْ يُكْتَبْ مِنَ الْغَافِلِينَ»

**"ಯಾರು ನೂರು ಆಯತ್‌ಗಳನ್ನು ಪಾರಾಯಣ ಮಾಡುತ್ತಾ ರಾತ್ರಿ ನಮಾಝ್ ನಿರ್ವಹಿಸುತ್ತಾನೋ ಅವನನ್ನು ನಿರ್ಲಕ್ಷಿತರಲ್ಲಿ ದಾಖಲಿಸಲಾಗುವುದಿಲ್ಲ."**

ಇನ್ನೊಂದು ಹದೀಸಿನಲ್ಲಿ ಹೀಗಿದೆ:

«مَنْ صَلَّى فِي لَيْلَةٍ بِمِئَتَيْ آيَةٍ فَإِنَّهُ يُكْتَبُ مِنَ الْقَانِتِينَ الْمُخْلِصِينَ»

**"ಯಾರು ಇನ್ನೂರು ಆಯತ್‌ಗಳನ್ನು ಪಾರಾಯಣ ಮಾಡುತ್ತಾ ರಾತ್ರಿ ನಮಾಝ್ ನಿರ್ವಹಿಸುತ್ತಾನೋ ಅವನನ್ನು ದೇವನಿಷ್ಠೆ ಮತ್ತು ನಿಷ್ಕಳಂಕತೆಯುಳ್ಳವರ ಪೈಕಿ ದಾಖಲಿಸಲಾಗುವುದು."**

ರೋಗ ಪೀಡಿತರಾಗಿದ್ದ ಸಂದರ್ಭದಲ್ಲಿ ಪ್ರವಾದಿ(ﷺ)ರವರು ರಾತ್ರಿ ನಮಾಝ್ ಒಂದರಲ್ಲಿ 'ಅಸ್ಸಬ್‌ಉತ್ತಿವಾಲ್' ಅಂದರೆ ಸೂರಃ ಅಲ್‌ಬಕರಃ, ಸೂರಃ ಆಲು ಇಮ್ರಾನ್, ಸೂರಃ ಅನ್ನಿಸಾಅ್, ಸೂರಃ ಅಲ್‌ಮಾಇದಃ, ಸೂರಃ ಅಲ್‌ಅನ್‌ಆಮ್, ಸೂರಃ ಅಲ್‌ಅಅ್‌ರಾಫ್ ಮತ್ತು ಸೂರಃ ಅತ್ತೌಬಾ ಪಾರಾಯಣ ಮಾಡಿದ್ದರು.

ಹುದೈಫಾ ಇಬ್ನುಲ್ ಯಮಾನ್(رضي الله عنه)ರವರ ಹದೀಸಿನಲ್ಲಿರುವಂತೆ ಅವರು ಪ್ರವಾದಿ(ﷺ)ರವರ ಹಿಂದೆ ನಮಾಝ್ ಮಾಡಿದಾಗ ಪ್ರವಾದಿ(ﷺ)ರವರು ಒಂದೇ ರಕ್‌ಅತ್‌ನಲ್ಲಿ ಸೂರಃ ಅಲ್‌ಬಕರಃ, ನಂತರ ಸೂರಃ ಅನ್ನಿಸಾಅ್, ನಂತರ ಸೂರಃ

ಆಲು ಇಮ್ರಾನ್ ಪಾರಾಯಣ ಮಾಡಿದ್ದರು. ಅವರು ಅವುಗಳನ್ನು ನಿಧಾನವಾಗಿ ಮತ್ತು ಇಂಪಾಗಿ ಪಾರಾಯಣ ಮಾಡಿದ್ದರು. [19]

ಅತ್ಯಂತ ಸಹೀಹಾದ ಸನದ್‌ನಲ್ಲಿ ದೃಢಪಟ್ಟಿರುವಂತೆ ಉಮರ್(ﷺ)ರವರು ಜನರಿಗೋಸ್ಕರ ಹನ್ನೊಂದು ರಕ್ಅತ್ ಕಿಯಾಮು ರಮದಾನ್ ನಿರ್ವಹಿಸುವಂತೆ ಉಬಯ್ಯ್ ಇಬ್ನ್ ಕಅ್‌ಬ್(ﷺ)ರೊಂದಿಗೆ ಆದೇಶಿಸಿದರು. ಆಗ ಉಬಯ್ಯ್(ﷺ)ರವರು ನೂರಕ್ಕಿಂತಲೂ ಅಧಿಕ ಆಯತ್‌ಗಳನ್ನು ಪಾರಾಯಣ ಮಾಡುತ್ತಿದ್ದರು. ನಿಲ್ಲುವಿಕೆಯ ದೀರ್ಘದಿಂದಾಗಿ ಅವರ ಹಿಂದಿರುವವರು ಊರುಗೋಲುಗಳ ಆಶ್ರಯವನ್ನು ಪಡೆಯುತ್ತಿದ್ದರು. ಪ್ರಭಾತಕ್ಕೆ ಸಮೀಪವಾಗಿಯಲ್ಲದೆ ಅವರು ನಮಾಝನ್ನು ಮುಗಿಸುತ್ತಿರಲಿಲ್ಲ. [20]

ಉಮರ್(ﷺ)ರವರಿಂದ ಸಹೀಹಾಗಿ ವರದಿಯಾದ ಇನ್ನೊಂದು ವರದಿಯಲ್ಲಿರುವಂತೆ ಅವರು ರಮದಾನ್ ತಿಂಗಳಲ್ಲಿ **'ಕಾರೀ'** (ಕುರ್‌ಆನ್ ಪಾರಾಯಣ ಮಾಡುವವರು) ಗಳನ್ನು ಕರೆಸಿ ಅವರ ಪೈಕಿ ವೇಗವಾಗಿ ಪಾರಾಯಣ ಮಾಡುವವರಿಗೆ ಮೂವತ್ತು ಆಯತ್, ಮಧ್ಯಮವಾಗಿ ಪಾರಾಯಣ ಮಾಡುವವರಿಗೆ ಇಪ್ಪತ್ತೈದು ಆಯತ್ ಮತ್ತು ನಿಧಾನವಾಗಿ ಪಾರಾಯಣ ಮಾಡುವವರಿಗೆ ಇಪ್ಪತ್ತು ಆಯತ್ ಪಾರಾಯಣ ಮಾಡುವಂತೆ ಆದೇಶಿಸಿದರು. [21]

ಇದರ ಪ್ರಕಾರ, ರಾತ್ರಿ ನಮಾಝ್ ಮಾಡುವವನು ಏಕಾಂಗಿಯಾಗಿ ನಮಾಝ್ ಮಾಡುವುದಾದರೆ ಅವನು ಬಯಸುವಷ್ಟು ದೀರ್ಘಿಸಬಹುದು. ಹಾಗೆಯೇ ತನ್ನೊಂದಿಗೆ ಹೊಂದಾಣಿಕೆಯಿರುವವರೊಂದಿಗೆ ನಮಾಝ್ ಮಾಡುವಾಗಲೂ ಅವನು ಬಯಸುವಷ್ಟು ದೀರ್ಘಿಸಬಹುದು. ಅವನು ಎಷ್ಟರಮಟ್ಟಿಗೆ ದೀರ್ಘಿಸುತ್ತಾನೋ ಅಷ್ಟರಮಟ್ಟಿಗೆ ಅದು ಶ್ರೇಷ್ಠವಾಗಿದೆ. ಆದರೆ ಅವನು ಅಪರೂಪವಾಗಿಯೇ ಹೊರತು ರಾತ್ರಿಯನ್ನು ಸಂಪೂರ್ಣ ಜೀವಂತಗೊಳಿಸುವ ರೀತಿಯಲ್ಲಿ ನಮಾಝ್ ಮಾಡಬಾರದು. ಯಾಕೆಂದರೆ ಇದು (ಅಪರೂಪವಾಗಿ ಮಾತ್ರ ರಾತ್ರಿಯನ್ನು ನಮಾಝ್‌ನಿಂದ ಜೀವಂತಗೊಳಿಸುವುದು) ಪ್ರವಾದಿ(ﷺ)ರವರ ಚರ್ಯೆಯಾಗಿದೆ. ಅವರು ಹೇಳಿದರು:

«وَخَيْرُ الْهَدْيِ هَدْيُ مُحَمَّدٍ»

---

**19** ಈ ಹದೀಸ್‌ಗಳೆಲ್ಲವೂ ಸಹೀಹ್ ಆಗಿವೆ. 'ಸಿಫತು ಸ್ವಲಾತ್'ನಲ್ಲಿ (ಪುಟ 117–122) ಇವುಗಳನ್ನು ಕಾಣಬಹುದು.

**20** ಇಮಾಮ್ ಮಾಲಿಕ್ ಇದರಂತೆಯೇ ವರದಿ ಮಾಡಿದ್ದಾರೆ. 'ಸಲಾತು ತ್ತರಾವೀಹ್'ನಲ್ಲಿ (ಪುಟ 52) ಇದನ್ನು ಕಾಣಬಹುದು.

**21** 'ಸಲಾತು ತ್ತರಾವೀಹ್'ನಲ್ಲಿ (ಪುಟ 71) ಇದನ್ನು ಕಾಣಬಹುದು. ಇದನ್ನು ಅಬ್ದುರ್ರಝ್ಝಾಕ್ 'ಅಲ್‌ಮುಸನ್ನಫ್'ನಲ್ಲಿ (4/261/7731) ಮತ್ತು ಅಲ್‌ಬೈಹಕೀ (2/497) ಕೂಡ ವರದಿ ಮಾಡಿದ್ದಾರೆ.

**“ಚರ್ಯೆಗಳಲ್ಲಿ ಉತ್ತಮವಾದುದು ಮುಹಮ್ಮದ್(ﷺ)ರವರ ಚರ್ಯೆಯಾಗಿದೆ.”**[22]

ಆದರೆ ಇಮಾಮ್ ಆಗಿ ನಿಂತು ನಮಾಝ್ ಮಾಡುವುದಾದರೆ ತನ್ನ ಹಿಂದಿರುವವರಿಗೆ ಪ್ರಯಾಸವಾಗದ ರೀತಿಯಲ್ಲಿ ದೀರ್ಘಗೊಳಿಸುವುದು ಅವನ ಮೇಲೆ ಕಡ್ಡಾಯವಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

«إِذَا قَامَ أَحَدُكُمْ لِلنَّاسِ فَلْيُخَفِّفِ الصَّلَاةَ، فَإِنَّ فِيهِمُ [الصَّغِيرَ] وَالْكَبِيرَ وَفِيهِمُ الضَّعِيفَ، [وَالْمَرِيضَ]، [وَذَا الْحَاجَةِ]، وَإِذَا قَامَ وَحْدَهُ فَلْيُطِلْ صَلَاتَهُ مَا شَاءَ».

**“ನಿಮ್ಮಲ್ಲೊಬ್ಬರು ಜನರಿಗೋಸ್ಕರ ಇಮಾಮ್ ಆಗಿ ನಿಂತು ನಮಾಝ್ ಮಾಡುವುದಾದರೆ ಅವನು ನಮಾಝನ್ನು ಹಗುರಗೊಳಿಸಲಿ. ಯಾಕೆಂದರೆ ಅವರಲ್ಲಿ (ಮಅ್‌ಮೂಮ್‌ಗಳಲ್ಲಿ) ಚಿಕ್ಕವರು ಮತ್ತು ದೊಡ್ಡವರಿದ್ದಾರೆ. ಅವರಲ್ಲಿ ಬಲಹೀನರು, ರೋಗಿಗಳು ಮತ್ತು ಅಗತ್ಯ ಕೆಲಸಗಳಿರುವವರು ಇದ್ದಾರೆ. ಆದರೆ ಏಕಾಂಗಿಯಾಗಿ ನಮಾಝ್ ಮಾಡುವಾಗ ಅವನು ಬಯಸುವಂತೆ ನಮಾಝನ್ನು ದೀರ್ಘಗೊಳಿಸಲಿ.”** [23]

## ರಾತ್ರಿ ನಮಾಝಿನ ಸಮಯ:

10. ರಾತ್ರಿ ನಮಾಝಿನ ಸಮಯವು ಇಶಾ ನಮಾಝ್‌ನ ಬಳಿಕ ಫಜ್ರ್ ನಮಾಝಿನ ವರೆಗಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

«إِنَّ اللَّهَ زَادَكُمْ صَلَاةً وَهِيَ الْوِتْرُ فَصَلُّوهَا بَيْنَ صَلَاةِ الْعِشَاءِ إِلَى صَلَاةِ الْفَجْرِ»

---

**22** ಇದು ಮುಸ್ಲಿಮ್, ಅನ್ನಸಾಈ ಮತ್ತಿತರರು ವರದಿ ಮಾಡಿದ ಹದೀಸಿನ ಒಂದು ಭಾಗವಾಗಿದೆ. ‘ಅಹ್ಕಾಮುಲ್ ಜನಾಇಝ್’ (ಪುಟ 18) ಮತ್ತು ‘ಇರ್ವಾಉಲ್ ಗಲೀಲ್’ನಲ್ಲಿ (608) ಇದನ್ನು ಕಾಣಬಹುದು.

**23** ಇದನ್ನು ಅಲ್‌ಬುಖಾರಿ ಮತ್ತು ಮುಸ್ಲಿಮ್ ವರದಿ ಮಾಡಿದ್ದಾರೆ. ಇದರ ಪದಗಳು ಮತ್ತು ಹೆಚ್ಚುವರಿಯು ಮುಸ್ಲಿಮ್‌ರದ್ದಾಗಿದೆ. ‘ಇರ್ವಾಉಲ್ ಗಲೀಲ್’ (512) ಮತ್ತು ‘ಸಹೀಹ್ ಅಬೀ ದಾವೂದ್’ನಲ್ಲಿ (759 ಮತ್ತು 760) ಇದನ್ನು ಕಾಣಬಹುದು.

**“ಅಲ್ಲಾಹು ನಿಮಗೆ ಹೆಚ್ಚುವರಿಯಾಗಿ ಒಂದು ನಮಾಝನ್ನು ನೀಡಿದ್ದಾನೆ. ಅದು ವಿತ್ರ್ ಆಗಿದೆ. [24] ಆದ್ದರಿಂದ ಅದನ್ನು ಇಶಾ ನಮಾಝ್ ಮತ್ತು ಫಜ್ರ್ ನಮಾಝಿನ ನಡುವೆ ನಿರ್ವಹಿಸಿರಿ.” [25]**

11. ರಾತ್ರಿಯ ಕೊನೆಯ ಹಂತದಲ್ಲಿ ನಮಾಝ್ ಮಾಡಲು ಯಾರಿಗೆ ಸಾಧ್ಯವಾಗುತ್ತದೋ ಅವರಿಗೆ ಅದು ಶ್ರೇಷ್ಠಕರವಾಗಿದೆ. ಯಾಕೆಂದರೆ ಪ್ರವಾದಿ(ﷺ) ರವರು ಹೇಳಿದರು:

«مَنْ خَافَ أَنْ لَا يَقُومَ مِنْ آخِرِ اللَّيْلِ فَلْيُوتِرْ أَوَّلَهُ، وَمَنْ طَمِعَ أَنْ يَقُومَ آخِرَهُ فَلْيُوتِرْ آخِرَ اللَّيْلِ، فَإِنَّ صَلَاةَ آخِرِ اللَّيْلِ مَشْهُودَةٌ، وَذَلِكَ أَفْضَلُ».

**“ರಾತ್ರಿಯ ಕೊನೆಯ ಹಂತದಲ್ಲಿ ಎದ್ದೇಳಲಾರೆನು ಎಂದು ಯಾರಾದರೂ ಭಯಪಟ್ಟರೆ ಅವನು ರಾತ್ರಿಯ ಮೊದಲ ಹಂತದಲ್ಲಿ ವಿತ್ರ್ ನಮಾಝ್ (ರಾತ್ರಿ ನಮಾಝ್) ಮಾಡಲಿ. ರಾತ್ರಿಯ ಕೊನೆಯ ಹಂತದಲ್ಲಿ ನಮಾಝ್ ಮಾಡಲು ಯಾರಾದರೂ ಬಯಸಿದರೆ ಅವನು ರಾತ್ರಿಯ ಕೊನೆಯ ಹಂತದಲ್ಲಿ ವಿತ್ರ್ ನಮಾಝ್ ಮಾಡಲಿ. ಯಾಕೆಂದರೆ ರಾತ್ರಿಯ ಕೊನೆಯ ಹಂತದ ನಮಾಝ್ (ಮಲಕ್‌ಗಳಿಂದ) ಸಾಕ್ಷ್ಯವಹಿಸಲಾಗುತ್ತದೆ. ಅದು ಅತಿಶ್ರೇಷ್ಠವಾಗಿದೆ.” [26]**

12. ರಾತ್ರಿಯ ಮೊದಲ ಹಂತದಲ್ಲಿ ಜಮಾಅತ್ ಆಗಿ ನಮಾಝ್ ಮಾಡುವ ಮತ್ತು ರಾತ್ರಿಯ ಕೊನೆಯ ಹಂತದಲ್ಲಿ ಏಕಾಂಗಿಯಾಗಿ ನಮಾಝ್ ಮಾಡುವ ಆಯ್ಕೆಯಿದ್ದರೆ ಜಮಾಅತ್ ಆಗಿ ನಮಾಝ್ ಮಾಡುವುದು ಶ್ರೇಷ್ಠವಾಗಿದೆ. ಯಾಕೆಂದರೆ ಈಗಾಗಲೇ 4ನೇ ಪ್ಯಾರಾದಲ್ಲಿರುವ ಪ್ರವಾದಿ(ﷺ)ರವರ ಹದೀಸಿನ ಪ್ರಕಾರ ಅವನು ರಾತ್ರಿ ಪೂರ್ತಿ ನಮಾಝ್ ಮಾಡಿದ್ದಾಗಿ ಅವನ ಹೆಸರಲ್ಲಿ ದಾಖಲಿಸಲಾಗುತ್ತದೆ.

ಉಮರ್(رضي الله عنه)ರವರ ಕಾಲದಲ್ಲಿ ಸಹಾಬಾ ಕಿರಾಮ್‌ಗಳ ಪ್ರವೃತ್ತಿ ಕೂಡ ಇದೇ

---

**24** ರಾತ್ರಿ ನಮಾಝ್‌ಗಳೆಲ್ಲವನ್ನೂ ‘ವಿತ್ರ್’ ಎಂದೇ ಹೆಸರಿಸಲಾಗಿದೆ. ಏಕೆಂದರೆ ಅದು ‘ವಿತ್ರ್’ (ಬೆಸ) ಸಂಖ್ಯೆಯಲ್ಲಿ ಅಂದರೆ ಏಕ ಸಂಖ್ಯೆಯಲ್ಲಿ ಕೊನೆಗೊಳ್ಳುತ್ತದೆ.

**25** ಹದೀಸ್ ಸಹೀಹ್. ಇದನ್ನು ಅಹ್ಮದ್ ಮತ್ತಿತರರು ಅಬೂ ಬಸ್ರಾ(رضي الله عنه)ರಿಂದ ವರದಿ ಮಾಡಿದ್ದಾರೆ. ‘ಅಸ್ಸಹೀಹಃ’ (108) ಮತ್ತು ‘ಅಲ್‌ಇರ್ವಾಅ್’ನಲ್ಲಿ (2/158) ಇದನ್ನು ಕಾಣಬಹುದು.

**26** ಇದನ್ನು ಮುಸ್ಲಿಮ್ ಮತ್ತಿತರರು ವರದಿ ಮಾಡಿದ್ದಾರೆ. ‘ಅಸ್ಸಹೀಹಃ’ದಲ್ಲಿ (2610) ಇದನ್ನು ಕಾಣಬಹುದು.

ರೀತಿಯಾಗಿ ಜಾರಿಯಲ್ಲಿತ್ತು. ಅಬ್ದುರ್ರಹ್ಮಾನ್ ಇಬ್ನ್ ಅಬ್ದ್ ಅಲ್‌ಕಾರೀ(رضي الله عنه)ರವರು ಹೇಳುತ್ತಾರೆ:

**خَرَجْتُ مَعَ عُمَرَ بْنِ الْخَطَّابِ لَيْلَةً فِي رَمَضَانَ إِلَى الْمَسْجِدِ، فَإِذَا النَّاسُ أَوْزَاعٌ مُتَفَرِّقُونَ، يُصَلِّي الرَّجُلُ لِنَفْسِهِ، وَيُصَلِّي الرَّجُلُ فَيُصَلِّي بِصَلَاتِهِ الرَّهْطُ، فَقَالَ: وَاللَّهِ إِنِّي لَأَرَى لَوْ جَمَعْتُ هَؤُلَاءِ عَلَى قَارِئٍ وَاحِدٍ لَكَانَ أَمْثَلَ، ثُمَّ عَزَمَ، فَجَمَعَهُمْ عَلَى أُبَيِّ بْنِ كَعْبٍ، قَالَ: ثُمَّ خَرَجْتُ مَعَهُ لَيْلَةً أُخْرَى، وَالنَّاسُ يُصَلُّونَ بِصَلَاةِ قَارِئِهِمْ، فَقَالَ عُمَرُ: نِعْمَتِ الْبِدْعَةُ هَذِهِ، وَالَّتِي يَنَامُونَ عَنْهَا أَفْضَلُ مِنَ الَّتِي يَقُومُونَ – يُرِيدُ آخِرَ اللَّيْلِ – وَكَانَ النَّاسُ يَقُومُونَ أَوَّلَهُ.**

**"ರಮದಾನ್ ತಿಂಗಳ ಒಂದು ರಾತ್ರಿ ನಾನು ಉಮರ್(رضي الله عنه)ರವರ ಜೊತೆಗೆ ಮಸೀದಿಗೆ ಹೊರಟೆ. ಅಲ್ಲಿ ಜನರು ಬೇರೆ ಬೇರೆಯಾಗಿ ನಮಾಝ್ ಮಾಡುತ್ತಿದ್ದರು. ಓರ್ವ ವ್ಯಕ್ತಿ ಏಕಾಂಗಿಯಾಗಿ ನಮಾಝ್ ಮಾಡುತ್ತಿದ್ದರು. ಇನ್ನೋರ್ವ ವ್ಯಕ್ತಿ ನಮಾಝ್ ಮಾಡುತ್ತಿದ್ದರು ಮತ್ತು ಜನರ ಒಂದು ಗುಂಪು ಅವರ ಹಿಂದೆ ನಮಾಝ್ ಮಾಡುತ್ತಿತ್ತು. ಆಗ ಉಮರ್(رضي الله عنه)ರವರು ಹೇಳಿದರು: ಅಲ್ಲಾಹನ ಮೇಲಾಣೆ! ಇವರೆಲ್ಲರನ್ನೂ ಒಬ್ಬ ಕಾರಿಯ ಹಿಂದೆ ಒಟ್ಟುಗೂಡಿಸಿದರೆ ಅದೊಂದು ಉತ್ತಮ ಮಾದರಿಯಾಗಬಹುದು. ನಂತರ ಅವರು ದೃಢನಿರ್ಧಾರ ತೆಗೆದು ಅವರೆಲ್ಲರನ್ನೂ ಉಬಯ್ಯ್ ಇಬ್ನ್ ಕಅ್‌ಬ್(رضي الله عنه)ರವರ ಹಿಂದೆ ಒಟ್ಟುಗೂಡಿಸಿದರು. ನಂತರ ನಾನು ಇನ್ನೊಂದು ರಾತ್ರಿ ಉಮರ್(رضي الله عنه)ರವರ ಜೊತೆಗೆ ಹೊರಟಾಗ ಜನರೆಲ್ಲರೂ ತಮ್ಮ ಕಾರಿಯ ಹಿಂದೆ ನಮಾಝ್ ಮಾಡುತ್ತಿದ್ದರು. ಆಗ ಉಮರ್(رضي الله عنه)ರವರು ಹೇಳಿದರು: 'ಇದು ಎಷ್ಟೊಂದು ಉತ್ತಮ ಬಿದ್‌ಅತ್! ಆದರೆ ಅವರು ಮಲಗುವ ಸಮಯ (ರಾತ್ರಿಯ ಕೊನೆಯ ಹಂತ) ಅವರು ನಮಾಝ್ ಮಾಡುವ ಸಮಯ (ರಾತ್ರಿಯ ಮೊದಲ ಹಂತ)ಕ್ಕಿಂತಲೂ ಶ್ರೇಷ್ಠವಾಗಿದೆ.' ಜನರು ರಾತ್ರಿಯ ಮೊದಲ ಹಂತದಲ್ಲಿ ನಮಾಝ್ ಮಾಡುತ್ತಿದ್ದರು."** [27]

ಝೈದ್ ಇಬ್ನ್ ವಹ್ಬ್(رضي الله عنه) ಹೇಳಿದರು:

**27** ಇದನ್ನು ಅಲ್‌ಬುಖಾರಿ ಮತ್ತಿತರರು ವರದಿ ಮಾಡಿದ್ದಾರೆ. 'ಸಲಾತು ತ್ತರಾವೀಹ್'ನಲ್ಲಿ (ಪುಟ 48) ಇದನ್ನು ಕಾಣಬಹುದು.

كَانَ عَبْدُ اللَّهِ يُصَلِّي بِنَا فِي شَهْرِ رَمَضَانَ فَيَنْصَرِفُ بِلَيْلٍ.

**“ಅಬ್ದುಲ್ಲಾಹ್ (ಇಬ್ನ್ ಮಸ್‌ಊದ್) ನಮಗೋಸ್ಕರ ರಮದಾನ್ ತಿಂಗಳಲ್ಲಿ ಇಮಾಮ್ ಆಗಿ ನಿಂತು ನಮಾಝ್ ಮಾಡುತ್ತಿದ್ದರು. ಆಗ ಅವರು ರಾತ್ರಿಯೇ ನಮಾಝನ್ನು ಮುಗಿಸುತ್ತಿದ್ದರು.”** (28)

## ರಾತ್ರಿ ನಮಾಝನ್ನು ನಿರ್ವಹಿಸುವ ವಿವಿಧ ರೂಪಗಳು:

13. ನಾನು **‘ಸಲಾತು ತ್ತರಾವೀಹ್’**ನಲ್ಲಿ (ಪುಟ 101–115) ಇದರ ಬಗ್ಗೆ ಸ್ಪಷ್ಟವಾದ ವಿವರಣೆಯನ್ನು ನೀಡಿದ್ದೇನೆ. ಓದುಗನಿಗೆ ಸುಲಭಗೊಳಿಸುವುದಕ್ಕಾಗಿ ಮತ್ತು ನೆನಪಿಸುವುದಕ್ಕಾಗಿ ನಾನದನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತಿದ್ದೇನೆ.

**ಒಂದನೇ ರೂಪ:** ಹದಿಮೂರು ರಕ್‌ಅತ್. ಹಗುರವಾದ ಎರಡು ರಕ್‌ಅತ್‌ಗಳಿಂದ ಆರಂಭಿಸುವುದು. ಪ್ರಬಲಾಭಿಪ್ರಾಯ ಪ್ರಕಾರ ಈ ಎರಡು ರಕ್‌ಅತ್‌ಗಳು ಇಶಾದ ನಂತರದ ಸುನ್ನತ್ ನಮಾಝ್ ಆಗಿದೆ. ಅಥವಾ ಈಗಾಗಲೇ ವಿವರಿಸಿದಂತೆ ರಾತ್ರಿ ನಮಾಝನ್ನು ಆರಂಭಿಸುವಾಗ ನಿರ್ವಹಿಸುವ ಎರಡು ವಿಶೇಷ ರಕ್‌ಅತ್‌ಗಳಾಗಿವೆ. ತರುವಾಯ ಬಹಳ ದೀರ್ಘವಾದ ಎರಡು ರಕ್‌ಅತ್ ನಮಾಝ್ ನಿರ್ವಹಿಸುವುದು. ತರುವಾಯ ಅದಕ್ಕಿಂತ ಸ್ವಲ್ಪ ಕಿರಿದಾದ ಎರಡು ರಕ್‌ಅತ್ ನಿರ್ವಹಿಸುವುದು. ತರುವಾಯ ಅದಕ್ಕಿಂತ ಸ್ವಲ್ಪ ಕಿರಿದಾದ ಎರಡು ರಕ್‌ಅತ್ ನಿರ್ವಹಿಸುವುದು. ತರುವಾಯ ಅದಕ್ಕಿಂತ ಸ್ವಲ್ಪ ಕಿರಿದಾದ ಎರಡು ರಕ್‌ಅತ್ ನಿರ್ವಹಿಸುವುದು. ತರುವಾಯ ಅದಕ್ಕಿಂತ ಸ್ವಲ್ಪ ಕಿರಿದಾದ ಎರಡು ರಕ್‌ಅತ್ ನಿರ್ವಹಿಸುವುದು. ತರುವಾಯ ಒಂದು ರಕ್‌ಅತ್‌ನಿಂದ ವಿತ್ರ್ ಮಾಡುವುದು.

**ಎರಡನೇ ರೂಪ:** ಹದಿಮೂರು ರಕ್‌ಅತ್ ನಮಾಝ್ ನಿರ್ವಹಿಸುವುದು. ಅದರಲ್ಲಿ ಎಂಟು ರಕ್‌ಅತ್ ನಮಾಝನ್ನು ಎರಡೆರಡು ರಕ್‌ಅತ್‌ಗಳ ಬಳಿಕ ಸಲಾಮ್ ಹೇಳುತ್ತಾ ನಿರ್ವಹಿಸುವುದು. ತರುವಾಯ ಕೊನೆಯ ಐದು ರಕ್‌ಅತ್‌ಗಳನ್ನು ವಿತ್ರ್ ಮಾಡುವುದು. ಅಂದರೆ ಐದನೆ ರಕ್‌ಅತ್‌ನಲ್ಲೇ ಹೊರತು ಅವುಗಳ ಮಧ್ಯೆ ಕೂರುವುದಾಗಲಿ ಸಲಾಮ್ ಹೇಳುವುದಾಗಲಿ ಮಾಡದಿರುವುದು.

---

**28** ಇದನ್ನು ಅಬ್ದುರ್ರಝ್ಝಾಕ್ (7741) ವರದಿ ಮಾಡಿದ್ದಾರೆ. ಇದರ ಸನದ್ ಸಹೀಹ್ ಆಗಿದೆ. ‘ಕಿಯಾಮನ್ನು (ತರಾವೀಹ್ ನಮಾಝನ್ನು) ರಾತ್ರಿಯ ಕೊನೆಯ ತನಕ ತಡಮಾಡಬೇಕೇ?’ ಎಂದು ಇಮಾಮ್ ಅಹ್ಮದ್‌ರೊಂದಿಗೆ ಕೇಳಲಾದಾಗ ಇದು ಮತ್ತು ಇದರ ಮೇಲಿನ ಅಸರ್‌ಗಳೆಡೆಗೆ ಸೂಚನೆ ನೀಡುತ್ತಾ ಅವರು ಹೇಳಿದರು: ‘ಕೂಡದು, ಮುಸ್ಲಿಮರ (ಸಹಾಬಾಗಳ) ಚರ್ಯೆ ನನಗೆ ಅತ್ಯಂತ ಇಷ್ಟವಾಗಿದೆ.’ ಇದನ್ನು ಅಬೂ ದಾವೂದ್ ‘ಅಲ್‌ಮಸಾಇಲ್’ನಲ್ಲಿ (62) ವರದಿ ಮಾಡಿದ್ದಾರೆ.

**ಮೂರನೇ ರೂಪ:** ಹನ್ನೊಂದು ರಕ್‌ಅತ್ ನಮಾಝ್. ಪ್ರತಿ ಎರಡು ರಕ್‌ಅತ್‌ಗಳ ಬಳಿಕ ಸಲಾಮ್ ಹೇಳುವುದು ಮತ್ತು ಒಂದು ರಕ್‌ಅತ್‌ನೊಂದಿಗೆ ವಿತ್ರ್ ಮಾಡುವುದು.

**ನಾಲ್ಕನೇ ರೂಪ:** ಹನ್ನೊಂದು ರಕ್‌ಅತ್ ನಮಾಝ್. ಅವುಗಳಲ್ಲಿ ನಾಲ್ಕು ರಕ್‌ಅತ್‌ಗಳನ್ನು ಒಂದು ಸಲಾಮ್‌ನೊಂದಿಗೆ ನಿರ್ವಹಿಸುವುದು (ಅಂದರೆ ನಾಲ್ಕು ರಕ್‌ಅತ್‌ಗಳ ಬಳಿಕ ಸಲಾಮ್ ಹೇಳುವುದು). ತರುವಾಯ ಅದೇ ರೀತಿ ನಾಲ್ಕು ರಕ್‌ಅತ್‌ಗಳನ್ನು ನಿರ್ವಹಿಸುವುದು. ತರುವಾಯ ಮೂರು ರಕ್‌ಅತ್ ನಿರ್ವಹಿಸುವುದು.

ನಾಲ್ಕು ರಕ್‌ಅತ್ ಮತ್ತು ಮೂರು ರಕ್‌ಅತ್‌ಗಳನ್ನು ನಿರ್ವಹಿಸುವಾಗ ಪ್ರತಿ ಎರಡೆರಡು ರಕ್‌ಅತ್‌ಗಳ ಮಧ್ಯೆ ಕೂರಬೇಕೇ? ಇದಕ್ಕೊಂದು ತೃಪ್ತಿಕರವಾದ ಉತ್ತರವನ್ನು ನಾವು ಕಂಡಿಲ್ಲ. ಆದರೆ ಮೂರು ರಕ್‌ಅತ್‌ಗಳನ್ನು ನಿರ್ವಹಿಸುವಾಗ ಮಧ್ಯೆ ಕೂರುವುದು ಶರೀಅತ್‌ನಲ್ಲಿ ಒಳಪಟ್ಟದ್ದಲ್ಲ.

**ಐದನೇ ರೂಪ:** ಹನ್ನೊಂದು ರಕ್‌ಅತ್ ನಮಾಝ್ ನಿರ್ವಹಿಸುವುದು. ಅವುಗಳಲ್ಲಿ ಎಂಟು ರಕ್‌ಅತ್‌ಗಳನ್ನು (ಮಧ್ಯೆ ಕೂರದೆ) ಎಂಟನೇ ರಕ್‌ಅತ್‌ನಲ್ಲಿ ಮಾತ್ರ ಕೂರುವುದು. ಈ ಕೂರುವಿಕೆಯಲ್ಲಿ ತಶಹ್ಹುದ್ ಮತ್ತು ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವುದನ್ನು ನಿರ್ವಹಿಸುವುದು. ತರುವಾಯ ಸಲಾಮ್ ಹೇಳದೆ ಒಂಬತ್ತನೆ ರಕ್‌ಅತ್‌ಗಾಗಿ ಎದ್ದೇಳುವುದು. ತರುವಾಯ ಒಂಬತ್ತನೆ ರಕ್‌ಅತ್ತನ್ನು ವಿತ್ರ್ ಆಗಿ ನಿರ್ವಹಿಸಿ ಸಲಾಮ್ ಹೇಳಿ ಕೊನೆಗೊಳಿಸುವುದು. ತರುವಾಯ ಎರಡು ರಕ್‌ಅತ್‌ಗಳನ್ನು ಕುಳಿತುಕೊಂಡು ನಿರ್ವಹಿಸುವುದು.

**ಆರನೇ ರೂಪ:** ಒಂಬತ್ತು ರಕ್‌ಅತ್ ನಮಾಝ್ ನಿರ್ವಹಿಸುವುದು. ಅವುಗಳಲ್ಲಿ ಆರು ರಕ್‌ಅತ್‌ಗಳನ್ನು (ಮಧ್ಯೆ ಕೂರದೆ) ಆರನೇ ರಕ್‌ಅತ್‌ನಲ್ಲಿ ಮಾತ್ರ ಕೂರುವುದು. ಈ ಕೂರುವಿಕೆಯಲ್ಲಿ ತಶಹ್ಹುದ್ ಮತ್ತು ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವುದನ್ನು ನಿರ್ವಹಿಸುವುದು. ತರುವಾಯ ಸಲಾಮ್ ಹೇಳದೆ ಏಳನೆ ರಕ್‌ಅತ್‌ಗಾಗಿ ಎದ್ದೇಳುವುದು. ಏಳನೆ ರಕ್‌ಅತ್ತನ್ನು ವಿತ್ರ್ ಆಗಿ ನಿರ್ವಹಿಸಿ ಸಲಾಮ್ ಹೇಳಿ ಕೊನೆಗೊಳಿಸುವುದು. ನಂತರ ಎರಡು ರಕ್‌ಅತ್‌ಗಳನ್ನು ಕುಳಿತುಕೊಂಡು ನಿರ್ವಹಿಸುವುದು.

ಈ ಮೇಲಿನ ಎಲ್ಲ ರೂಪಗಳೂ ಪ್ರವಾದಿ(ﷺ)ರವರಿಂದ ಸ್ಪಷ್ಟ ವಚನಗಳ ಮೂಲಕ ದೃಢಪಟ್ಟಿವೆ. ಇವುಗಳಿಗೆ ಬೇರೆ ರೂಪಗಳನ್ನು ಸೇರಿಸಲೂ ಸಾಧ್ಯವಿದೆ. ಅಂದರೆ ಈ ಮೇಲೆ ಹೇಳಲಾದ ಪ್ರತಿಯೊಂದು ರೂಪಗಳಿಂದಲೂ ತಾನು ಬಯಸಿದಷ್ಟು ರಕ್‌ಅತ್‌ಗಳನ್ನು ಕಡಿಮೆ ಮಾಡುವ ಮೂಲಕ ಒಂದೇ ಒಂದು ರಕ್‌ಅತ್ ರಾತ್ರಿ ನಮಾಝನ್ನು ನಿರ್ವಹಿಸುವ ತನಕ. ಯಾಕೆಂದರೆ ಈಗಾಗಲೇ ಹೇಳಿದಂತೆ ಇದು ಪ್ರವಾದಿ(ﷺ)ರವರ ಮಾತನ್ನು ಅನುಸರಿಸಿ ಅಮಲ್ ಮಾಡುವುದಾಗಿದೆ:

«...فَمَنْ شَاءَ فَلْيُوتِرْ بِخَمْسٍ، وَمَنْ شَاءَ فَلْيُوتِرْ بِثَلَاثٍ، وَمَنْ شَاءَ

فَلْيُوتِرْ بِوَاحِدَةٍ»

**“....ಆದ್ದರಿಂದ ಯಾರಾದರೂ ಐದು ರಕ್‌ಅತ್‌ಗಳೊಂದಿಗೆ ವಿತ್ರ್ ನಿರ್ವಹಿಸಲು ಬಯಸಿದರೆ ಹಾಗೆ ಮಾಡಲಿ. ಯಾರಾದರೂ ಮೂರು ರಕ್‌ಅತ್‌ಗಳೊಂದಿಗೆ ವಿತ್ರ್ ನಿರ್ವಹಿಸಲು ಬಯಸಿದರೆ ಹಾಗೆ ಮಾಡಲಿ. ಯಾರಾದರೂ ಒಂದು ರಕ್‌ಅತ್‌ನೊಂದಿಗೆ ವಿತ್ರ್ ನಿರ್ವಹಿಸಲು ಬಯಸಿದರೆ ಹಾಗೆ ಮಾಡಲಿ.”** [29]

(ಎರಡನೆ ರೂಪದಲ್ಲಿ ವಿವರಿಸಲಾದಂತೆ) ಈ ಐದು ಮತ್ತು ಮೂರು ರಕ್‌ಅತ್‌ಗಳನ್ನು ನಿರ್ವಹಿಸುವಾಗ ಅವನು ಬಯಸಿದರೆ ಒಂದೇ ಕೂರುವಿಕೆ ಮತ್ತು ಒಂದೇ ಸಲಾಮ್‌ನೊಂದಿಗೆ ನಿರ್ವಹಿಸಬಹುದು. ಅಥವಾ ಮೂರನೇ ರೂಪ ಹಾಗೂ ಮತ್ತಿತರ ರೂಪಗಳಲ್ಲಿ ವಿವರಿಸಲಾದಂತೆ ಪ್ರತಿ ಎರಡು ರಕ್‌ಅತ್‌ಗಳ ಮಧ್ಯೆ ಸಲಾಮ್ ಹೇಳುತ್ತಾ ನಿರ್ವಹಿಸಬಹುದು. ಇದು ಶ್ರೇಷ್ಠವಾಗಿದೆ.[30]

ಆದರೆ ಐದು ಮತ್ತು ಮೂರು ರಕ್‌ಅತ್‌ಗಳನ್ನು (ವಿತ್ರ್ ಆಗಿ) ನಿರ್ವಹಿಸುವಾಗ ಪ್ರತಿ ಎರಡು ರಕ್‌ಅತ್‌ಗಳ ಮಧ್ಯೆ ಕೂರುತ್ತಾ ಸಲಾಮ್ ಹೇಳದೆ ಮುಂದುವರಿಸುವುದನ್ನು ನಾವು ಪ್ರವಾದಿ(ﷺ)ರವರ ಚರ್ಯೆಯಲ್ಲಿ ದೃಢಪಟ್ಟಿರುವುದಾಗಿ ಕಂಡಿಲ್ಲ. ಮೂಲ ವಿಧಿಯ (ಅಸ್ಲ್) ಪ್ರಕಾರ ಅದಕ್ಕೆ ಅನುಮತಿಯಿದೆ. ಆದರೆ ಮೂರು ರಕ್‌ಅತ್‌ಗಳನ್ನು ವಿತ್ರ್ ಆಗಿ (ಅಂದರೆ ಮಧ್ಯೆ ಕುಳಿತುಕೊಂಡು ಸಲಾಮ್ ಹೇಳದೆ ಮುಂದುವರಿಸಿ) ನಿರ್ವಹಿಸುವುದನ್ನು ಪ್ರವಾದಿ(ﷺ)ರವರು ವಿರೋಧಿಸಿದ್ದಾರೆ. ಅದಕ್ಕೆ ಅವರು ನೀಡಿದ ಕಾರಣ ಹೀಗಿದೆ:

«وَلَا تَشَبَّهُوا بِصَلَاةِ الْمَغْرِبِ»

---

**29** 8ನೇ ಪ್ಯಾರಾ ನೋಡಿ. (ಪುಟ 40)

**30** ಪ್ರಮುಖ ಸೂಚನೆ: ಮೇಲೆ ಸೂಚಿಸಿದ ಕೆಲವು ರೂಪಗಳನ್ನು ವಿವರಿಸುತ್ತಾ ಇಬ್ನ್ ಖುಝೈಮಃ ತಮ್ಮ ‘ಸಹೀಹ್’ನಲ್ಲಿ (2/194) ಆಇಶಾ ಮತ್ತಿತರರ ಹದೀಸನ್ನು ವಿವರಿಸಿದ ಬಳಿಕ ಹೀಗೆಂದಿದ್ದಾರೆ:

**“ಒಬ್ಬ ವ್ಯಕ್ತಿಗೆ ಪ್ರವಾದಿ(ﷺ)ರವರು ನಿರ್ವಹಿಸಿದ್ದಾರೆಂದು ವರದಿಯಾಗಿರುವ ಯಾವುದೇ ಸಂಖ್ಯೆಯಷ್ಟು ಮತ್ತು ಪ್ರವಾದಿ(ﷺ)ರವರು ನಿರ್ವಹಿಸಿದ್ದಾರೆಂದು ವರದಿಯಾಗಿರುವ ಯಾವುದೇ ರೂಪದಲ್ಲೂ ನಮಾಝ್ ನಿರ್ವಹಿಸಲು ಅನುಮತಿಯಿದೆ. ಅದರಲ್ಲಿ ಯಾವುದೇ ವ್ಯಕ್ತಿಗೂ ಯಾವುದೇ ತೊಂದರೆಯಿಲ್ಲ.”**

ನಾನು ಹೇಳುತ್ತೇನೆ: ಪ್ರವಾದಿ(ﷺ)ರವರಿಂದ ದೃಢಪಟ್ಟ ಸಂಖ್ಯೆಯಷ್ಟೇ ಹೊರತು ಅದಕ್ಕಿಂತ ಹೆಚ್ಚು ನಮಾಝ್ ನಿರ್ವಹಿಸಬಾರದೆಂಬ ನಾವು ಆರಿಸಿದ ಅಭಿಪ್ರಾಯಕ್ಕೆ ಇದು ಸಂಪೂರ್ಣವಾಗಿ ಹೊಂದಾಣಿಕೆಯಾಗುತ್ತದೆ. ಯಶಸ್ಸನ್ನು ದಯಪಾಲಿಸಿರುವುದಕ್ಕಾಗಿ ಅಲ್ಲಾಹನಿಗೆ ಸ್ತುತಿ. ನಾನು ಅವನಿಂದ ಇನ್ನಷ್ಟು ಔದಾರ್ಯವನ್ನು ಬೇಡುತ್ತಿದ್ದೇನೆ.

**“ಮಗ್ರಿಬ್ ನಮಾಝ್‌ನೊಂದಿಗೆ ಸಾಮ್ಯಗೊಳಿಸಬಾರದು.”** [31]

ಆದ್ದರಿಂದ ಮೂರು ರಕ್‌ಅತ್ ವಿತ್ರ್ ನಿರ್ವಹಿಸುವಾಗ ಈ ಸಾಮ್ಯತೆಯಿಂದ ದೂರ ಸರಿಯುವುದು ಅನಿವಾರ್ಯವಾಗಿದೆ. ಅದನ್ನು ಈ ಕೆಳಗಿನ ಎರಡು ವಿಧಗಳಲ್ಲಿ ಮಾಡಬಹುದು:

**ಒಂದು:** ಎರಡು ರಕ್‌ಅತ್ ನಿರ್ವಹಿಸಿ ಸಲಾಮ್ ಹೇಳಿ ತರುವಾಯ ಒಂದು ರಕ್‌ಅತ್ ನಿರ್ವಹಿಸಿ ಸಲಾಮ್ ಹೇಳುವುದು. ಇದು ಪ್ರಬಲವಾದುದೂ ಶ್ರೇಷ್ಠವಾದುದೂ ಆಗಿದೆ.

**ಎರಡು:** ಎರಡು ರಕ್‌ಅತ್ ನಿರ್ವಹಿಸಿದ ಬಳಿಕ ಕೂರದೆ ಮತ್ತು ಸಲಾಮ್ ಹೇಳದೆ ಮೂರನೇ ರಕ್‌ಅತ್ ನಿರ್ವಹಿಸುವುದು. ಅಲ್ಲಾಹು ತಆಲಾ ಹೆಚ್ಚು ಬಲ್ಲವನಾಗಿದ್ದಾನೆ.

## ವಿತ್ರ್‌ನ ಮೂರು ರಕ್‌ಅತ್‌ಗಳಲ್ಲಿ ಪಾರಾಯಣ:

14. ಮೂರು ರಕ್‌ಅತ್ ವಿತ್ರ್ ನಮಾಝ್‌ನಲ್ಲಿ ಮೊದಲ ರಕ್‌ಅತ್‌ನಲ್ಲಿ **‘**ಸಬ್ಬಿಹಿಸ್ಮ ರಬ್ಬಿಕಲ್ ಅಅ್‌ಲಾ**’**, ಎರಡನೇ ರಕ್‌ಅತ್‌ನಲ್ಲಿ **‘**ಕುಲ್ ಯಾ ಅಯ್ಯುಹಲ್ ಕಾಫಿರೂನ್**’** ಮತ್ತು ಮೂರನೇ ರಕ್‌ಅತ್‌ನಲ್ಲಿ **‘**ಕುಲ್ ಹುವಲ್ಲಾಹು ಅಹದ್**’** ಪಾರಾಯಣ ಮಾಡುವುದು ಸುನ್ನತ್ತಾಗಿದೆ. ಕೆಲವೊಮ್ಮೆ ಕೊನೆಯ ರಕ್‌ಅತ್‌ನಲ್ಲಿ **‘**ಕುಲ್ ಅಊದು ಬಿರಬ್ಬಿಲ್ ಫಲಕ್**’** ಮತ್ತು **‘**ಕುಲ್ ಅಊದು ಬಿರಬ್ಬಿ ನ್ನಾಸ್**’** ಸೇರಿಸಬೇಕು.

ಒಮ್ಮೆ ವಿತ್ರ್‌ನ ಒಂದು ರಕ್‌ಅತ್‌ನಲ್ಲಿ ಪ್ರವಾದಿ(ﷺ)ರವರು ಸೂರಃ **‘**ಅನ್ನಿಸಾಅ್**’**ನ ನೂರು ಆಯತ್‌ಗಳನ್ನು ಪಾರಾಯಣ ಮಾಡಿದ್ದರೆಂದು ಸಹೀಹ್ ಆಗಿ ವರದಿಯಾಗಿದೆ. [32]

## ಕುನೂತ್‌ನ ದುಆ ಮತ್ತು ಅದರ ಸ್ಥಳ:

15. ಪಾರಾಯಣ ಮುಗಿದ ಬಳಿಕ ಮತ್ತು ರುಕೂಅ್‌ಗೆ ಮುಂಚಿತವಾಗಿ ಪ್ರವಾದಿ (ﷺ)ರವರು ತಮ್ಮ ಮೊಮ್ಮಗನಾದ ಹಸನ್ ಇಬ್ನ್ ಅಲೀ(رضي الله عنه)ರವರಿಗೆ ಕಲಿಸಿದ ಪ್ರಾರ್ಥನೆಯನ್ನು ಪ್ರಾರ್ಥಿಸುವ ಮೂಲಕ ಕೆಲವೊಮ್ಮೆ ಕುನೂತ್ ನಿರ್ವಹಿಸಬೇಕು. ಆ ಪ್ರಾರ್ಥನೆ ಹೀಗಿದೆ:

---

**31** ಇದನ್ನು ಅತ್ತಹಾವೀ, ಅದ್ದಾರಕುತ್ನೀ ಮತ್ತಿತರರು ವರದಿ ಮಾಡಿದ್ದಾರೆ. ನೋಡಿ: ‘ಸಲಾತು ತ್ತರಾವೀಹ್**’** (ಪುಟ 99 ಮತ್ತು 110).

**32** ಇದನ್ನು ಅನ್ನಸಾಈ ಮತ್ತು ಅಹ್ಮದ್ ಸಹೀಹಾದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ.

«اللَّهُمَّ اهْدِنِي فِيمَنْ هَدَيْتَ، وَعَافِنِي فِيمَنْ عَافَيْتَ، وَتَوَلَّنِي فِيمَنْ تَوَلَّيْتَ، وَبَارِكْ لِي فِيمَا أَعْطَيْتَ، وَقِنِي شَرَّ مَا قَضَيْتَ، فَإِنَّكَ تَقْضِي وَلَا يُقْضَى عَلَيْكَ، وَإِنَّهُ لَا يَذِلُّ مَنْ وَالَيْتَ، وَلَا يَعِزُّ مَنْ عَادَيْتَ، تَبَارَكْتَ رَبَّنَا وَتَعَالَيْتَ، لَا مَنْجَا مِنْكَ إِلَّا إِلَيْكَ»

**"ಅಲ್ಲಾಹುಮ್ಮಹ್ದಿನೀ ಫೀಮನ್ ಹದಯ್ತ, ವಆಫಿನೀ ಫೀಮನ್ ಆಫಯ್ತ, ವತವಲ್ಲನೀ ಫೀಮನ್ ತವಲ್ಲಯ್ತ, ವಬಾರಿಕ್ ಲೀ ಫೀಮಾ ಅಅ್ತಯ್ತ, ವಕಿನೀ ಶರ್ರ ಮಾ ಕದಯ್ತ, ಫಇನ್ನಕ ತಕ್ದೀ ವಲಾ ಯುಕ್ದಾ ಅಲೈಕ, ವಇನ್ನಹೂ ಲಾ ಯದ್ವಿಲ್ಲು ಮನ್ ವಾಲಯ್ತ, ವಲಾ ಯಇಝ್ಝು ಮನ್ ಆದಯ್ತ, ತಬಾರಕ್ತ ರಬ್ಬನಾ ವತಆಲಯ್ತ, ಲಾ ಮನ್ಜಾ ಮಿನ್ಕ ಇಲ್ಲಾ ಇಲೈಕ್."** [33]

ಕೆಲವೊಮ್ಮೆ ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳಬೇಕು. ಇದು ಮುಂದೆ ಬರಲಿದೆ. [34]

16. ಕುನೂತನ್ನು ರುಕೂಅ್‌ನ ನಂತರ ನಿರ್ವಹಿಸುವುದಲ್ಲಿ ತೊಂದರೆಯಿಲ್ಲ. ಹಾಗೆಯೇ ರಮದಾನ್ ತಿಂಗಳ ಉತ್ತರಾರ್ಧದಲ್ಲಿ (ಕೊನೆಯ ಹದಿನೈದು ದಿನಗಳಲ್ಲಿ) ಅದರೊಂದಿಗೆ ಅವಿಶ್ವಾಸಿಗಳನ್ನು ಶಪಿಸುವುದು, ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವುದು ಮತ್ತು ಮುಸ್ಲಿಮರಿಗಾಗಿ ಪ್ರಾರ್ಥಿಸುವುದನ್ನು ಸೇರಿಸುವುದರಲ್ಲೂ ತೊಂದರೆಯಿಲ್ಲ. ಯಾಕೆಂದರೆ ಉಮರ್(رضي الله عنه)ರವರ ಕಾಲದ ಸಹಾಬಾ ನಾಯಕರು ಹೀಗೆ ಮಾಡುತ್ತಿದ್ದರೆಂದು ದೃಢಪಟ್ಟಿದೆ. ಇದು ಈಗಾಗಲೇ ಉಲ್ಲೇಖಿಸಲಾದ ಅಬ್ದುರ್ರಹ್ಮಾನ್ ಇಬ್ನ್ ಅಬ್ದ್ ಅಲ್‌ಕಾರೀ(رضي الله عنه)ರವರ ಹದೀಸಿನ ಕೊನೆಯಲ್ಲಿ ವರದಿಯಾಗಿದೆ:

وَكَانُوا يَلْعَنُونَ الْكَفَرَةَ فِي النِّصْفِ: اللَّهُمَّ قَاتِلِ الْكَفَرَةَ الَّذِينَ يَصُدُّونَ عَنْ سَبِيلِكَ، وَيُكَذِّبُونَ رُسُلَكَ، وَلَا يُؤْمِنُونَ بِوَعْدِكَ، وَخَالِفْ بَيْنَ كَلِمَتِهِمْ، وَأَلْقِ فِي قُلُوبِهِمُ الرُّعْبَ، وَأَلْقِ عَلَيْهِمْ رِجْزَكَ وَعَذَابَكَ، إِلَهَ الْحَقِّ، ثُمَّ يُصَلِّي عَلَى النَّبِيِّ صَلَّى اللَّهُ عَلَيْهِ وَسَلَّمَ، وَيَدْعُو

33 ಇದನ್ನು ಅಬೂ ದಾವೂದ್, ಅನ್ನಸಾಈ ಮತ್ತಿತರರು ಸಹೀಹಾದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ. ನೋಡಿ: 'ಸಿಫತು ಸ್ಸಲಾತ್' (ಪುಟ 95–96, 7ನೆ ಮುದ್ರಣ).

34 'ಫದ್ಲು ಸ್ಸಲಾತಿ ಅಲನ್ನಬಿಯ್ಯಿ(ﷺ)' (ಪುಟ 33) ಮತ್ತು 'ತಲ್ಕೀಸು ಸಿಫತಿ ಸಲಾತಿ ನ್ನಬಿಯ್ಯಿ (ﷺ)' (ಪುಟ 45) ಎಂಬ ಗ್ರಂಥಗಳಲ್ಲಿರುವ ನನ್ನ ಟಿಪ್ಪಣಿಯನ್ನು ನೋಡಿರಿ.

لِلْمُسْلِمِينَ بِمَا اسْتَطَاعَ مِنْ خَيْرٍ، ثُمَّ يَسْتَغْفِرُ لِلْمُؤْمِنِينَ.

قَالَ: وَكَانَ يَقُولُ إِذَا فَرَغَ مِنْ لَعْنِهِ الْكَفَرَةَ وَصَلَاتِهِ عَلَى النَّبِيِّ صَلَّى اللَّهُ عَلَيْهِ وَسَلَّمَ وَاسْتِغْفَارِهِ لِلْمُؤْمِنِينَ وَالْمُؤْمِنَاتِ وَمَسْأَلَتِهِ: اللَّهُمَّ إِيَّاكَ نَعْبُدُ، وَلَكَ نُصَلِّي وَنَسْجُدُ، وَإِلَيْكَ نَسْعَى وَنَحْفِدُ، وَنَرْجُو رَحْمَتَكَ رَبَّنَا، وَنَخَافُ عَذَابَكَ الْجِدَّ، إِنَّ عَذَابَكَ لِمَنْ عَادَيْتَ مُلْحَقٌ، ثُمَّ يُكَبِّرُ وَيَهْوِي سَاجِدًا.

“ಅವರು (ಸಹಾಬಾಗಳು) ಕೊನೆಯ ಅರ್ಧದಲ್ಲಿ ಅವಿಶ್ವಾಸಿಗಳನ್ನು ಶಪಿಸುತ್ತಿದ್ದರು: ‘ಓ ಅಲ್ಲಾಹ್! ನಿನ್ನ ಮಾರ್ಗದಿಂದ ಜನರನ್ನು ತಡೆಯುವ, ನಿನ್ನ ಸಂದೇಶವಾಹಕರನ್ನು ಸುಳ್ಳಾಗಿಸುವ ಮತ್ತು ನಿನ್ನ ವಾಗ್ದಾನದಲ್ಲಿ ನಂಬಿಕೆಯಿಡದ ಅವಿಶ್ವಾಸಿಗಳನ್ನು ಶಪಿಸು. ಅವರ ಐಕ್ಯತೆಯನ್ನು ಬೇರ್ಪಡಿಸು, ಅವರ ಹೃದಯಗಳಲ್ಲಿ ಭಯವನ್ನಿರಿಸು ಮತ್ತು ಅವರ ಮೇಲೆ ನಿನ್ನ ಶಿಕ್ಷೆ ಮತ್ತು ಯಾತನೆಯನ್ನು ಹಾಕು. ಓ ಸತ್ಯದ ದೇವನೇ!’ ತರುವಾಯ ಅವರು (ಇಮಾಮ್ ನಿಂತವರು) ಪ್ರವಾದಿ (ﷺ)ರವರ ಮೇಲೆ ಸಲಾತ್ ಹೇಳುತ್ತಿದ್ದರು, ತನಗೆ ಸಾಧ್ಯವಾದಷ್ಟು ಒಳಿತಿನಿಂದ ಮುಸ್ಲಿಮರಿಗಾಗಿ ಪ್ರಾರ್ಥಿಸುತ್ತಿದ್ದರು. ನಂತರ ವಿಶ್ವಾಸಿಗಳಿಗಾಗಿ ಪಾಪಮುಕ್ತಿಯನ್ನು ಬೇಡುತ್ತಿದ್ದರು.

ಅವರು (ಅಬ್ದುರ್ರಹ್ಮಾನ್) ಮುಂದುವರಿದು ಹೇಳುತ್ತಾರೆ: ಅವಿಶ್ವಾಸಿಗಳನ್ನು ಶಪಿಸಿದ ನಂತರ, ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳಿದ ನಂತರ ಮತ್ತು ವಿಶ್ವಾಸಿಗಳಿಗೆ ಹಾಗೂ ವಿಶ್ವಾಸಿನಿಯರಿಗೆ ಪಾಪಮುಕ್ತಿಯನ್ನು ಬೇಡಿದ ನಂತರ ಅವರು ಹೀಗೆ ಪ್ರಾರ್ಥಿಸುತ್ತಿದ್ದರು: ‘ಓ ಅಲ್ಲಾಹ್! ನಿನ್ನನ್ನು ಮಾತ್ರ ನಾವು ಆರಾಧಿಸುತ್ತೇವೆ, ನಿನಗೆ ಮಾತ್ರ ನಾವು ನಮಾಝ್ ಹಾಗೂ ಸುಜೂದ್ ಮಾಡುತ್ತೇವೆ. ನಿನಗಾಗಿ ಮಾತ್ರ ನಾವು ಪರಿಶ್ರಮಿಸುತ್ತೇವೆ ಮತ್ತು ಧಾವಿಸುತ್ತೇವೆ. ನಿನ್ನ ಕರುಣೆಯನ್ನು ನಾವು ಆಶಿಸುತ್ತೇವೆ. ನಿನ್ನ ಕಠಿಣ ಶಿಕ್ಷೆಯನ್ನು ನಾವು ಭಯಪಡುತ್ತೇವೆ. ನಿನ್ನ ಶಿಕ್ಷೆ ನಿನ್ನನ್ನು ವಿರೋಧಿಸುವವರೊಂದಿಗೆ ಥಳಕು ಹಾಕಿಕೊಂಡಿದೆ.’ ನಂತರ ಅವರು ತಕ್ಬೀರ್ ಹೇಳುತ್ತಾ ಸುಜೂದ್ ಮಾಡುತ್ತಿದ್ದರು.” [35]

**35** ಇದನ್ನು ಇಬ್ನ್ ಖುಝೈಮಃ ತಮ್ಮ ‘ಸಹೀಹ್’ನಲ್ಲಿ (2/155–156/1100) ವರದಿ ಮಾಡಿದ್ದಾರೆ.

## ವಿತ್ರ್‌ನ ಕೊನೆಯಲ್ಲಿ ಏನು ಹೇಳಬೇಕು?

17. ವಿತ್ರ್‌ನ ಕೊನೆಯಲ್ಲಿ [ಸಲಾಮ್ ಹೇಳುವುದಕ್ಕೆ ಮುಂಚಿತವಾಗಿ ಅಥವಾ ನಂತರ] ಹೀಗೆನ್ನುವುದು ಸುನ್ನತ್ತಾಗಿದೆ:

«اللَّهُمَّ إِنِّي أَعُوذُ بِرِضَاكَ مِنْ سَخَطِكَ، وَبِمُعَافَاتِكَ مِنْ عُقُوبَتِكَ، وَأَعُوذُ بِكَ مِنْكَ، لَا أُحْصِي ثَنَاءً عَلَيْكَ، أَنْتَ كَمَا أَثْنَيْتَ عَلَى نَفْسِكَ»

**"ಅಲ್ಲಾಹುಮ್ಮ ಇನ್ನೀ ಅಊದು ಬಿರಿದಾಕ ಮಿನ್ ಸಖತಿಕ ವಬಿಮುಆಫಾತಿಕ ಮಿನ್ ಉಕೂಬತಿಕ ವಅಊದು ಬಿಕ ಮಿನ್ಕ ಲಾ ಉಹ್ಸೀ ಸನಾಅನ್ ಅಲೈಕ ಅನ್ತ ಕಮಾ ಅಸ್ನಯ್ತ ಅಲಾ ನಫ್ಸಿಕ್."** [36]

18. ವಿತ್ರ್ ನಿರ್ವಹಿಸಿ ಸಲಾಮ್ ಹೇಳಿದ ಬಳಿಕ ಹೀಗೆ ಹೇಳಬೇಕು:

«سُبْحَانَ الْمَلِكِ الْقُدُّوسِ، سُبْحَانَ الْمَلِكِ الْقُدُّوسِ، سُبْحَانَ الْمَلِكِ الْقُدُّوسِ»

**"ಸುಬ್‌ಹಾನಲ್ ಮಲಿಕಿಲ್ ಕುದ್ದೂಸ್. ಸುಬ್‌ಹಾನಲ್ ಮಲಿಕಿಲ್ ಕುದ್ದೂಸ್. ಸುಬ್‌ಹಾನಲ್ ಮಲಿಕಿಲ್ ಕುದ್ದೂಸ್." (ಮೂರು ಬಾರಿ)**

ಇವುಗಳನ್ನು ಹೇಳುವಾಗ ಧ್ವನಿಯನ್ನು ದೀರ್ಘಗೊಳಿಸಬೇಕು ಮತ್ತು ಮೂರನೆಯ ಬಾರಿ ಹೇಳುವಾಗ ಧ್ವನಿಯನ್ನು ಎತ್ತಬೇಕು. [37]

## ಇದರ ನಂತರದ ಎರಡು ರಕ್‌ಅತ್:

19. ಪ್ರವಾದಿ(ﷺ)ರವರು ನಿರ್ವಹಿಸಿದ್ದಾಗಿ ದೃಢಪಟ್ಟಿರುವುದರಿಂದ ಇದರ ಬಳಿಕ ಎರಡು ರಕ್‌ಅತ್ ನಿರ್ವಹಿಸಬೇಕಾಗಿದೆ.[38] ಮಾತ್ರವಲ್ಲ ಅವರು ತಮ್ಮ ಸಮುದಾಯಕ್ಕೆ

---

**36** 'ಸಹೀಹ್ ಅಬೀ ದಾವೂದ್' (1282) ಮತ್ತು 'ಅಲ್‌ಇರ್ವಾಅ್' (430).

**37** 'ಸಹೀಹ್ ಅಬೀದಾವೂದ್' (1284).

**38** ಇದನ್ನು ಮುಸ್ಲಿಮ್ ಮತ್ತಿತರರು ವರದಿ ಮಾಡಿದ್ದಾರೆ. ನೋಡಿ: 'ಸಲಾತು ತ್ತರಾವೀಹ್'

ಇದನ್ನು ಆದೇಶಿಸಿದ್ದಾರೆ. ಅವರು ಹೇಳಿದರು:

«إِنَّ هَذَا السَّفَرَ جَهْدٌ وَثِقَلٌ، فَإِذَا أَوْتَرَ أَحَدُكُمْ فَلْيَرْكَعْ رَكْعَتَيْنِ، فَإِنِ اسْتَيْقَظَ وَإِلَّا كَانَتَا لَهُ»

**"ಖಂಡಿತವಾಗಿಯೂ ಈ ಯಾತ್ರೆಯು ಒಂದು ಕಠಿಣ ಪರಿಶ್ರಮವೂ ಭಾರವೂ ಆಗಿದೆ. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ವಿತ್ರ್ ನಮಾಝ್ ನಿರ್ವಹಿಸಿದರೆ ಅವನು (ಅದರ ಬಳಿಕ) ಎರಡು ರಕ್‌ಅತ್ ನಮಾಝ್ ನಿರ್ವಹಿಸಲಿ. ಅವನು ಎಚ್ಚರಗೊಂಡರೆ ಮಾತ್ರ. ಇಲ್ಲದಿದ್ದರೆ ಅದನ್ನು ಅವನ ಹೆಸರಲ್ಲಿ ದಾಖಲಿಸಲಾಗುವುದು."** (39)

20. ಈ ಎರಡು ರಕ್‌ಅತ್‌ಗಳಲ್ಲಿ **'ಇದಾ ಝುಲ್‌ಝಿಲತಿಲ್ ಅರ್ದು'** ಮತ್ತು **'ಕುಲ್ ಯಾ ಅಯ್ಯುಹಲ್ ಕಾಫಿರೂನ್'** ಪಾರಾಯಣ ಮಾಡುವುದು ಸುನ್ನತ್ತಾಗಿದೆ. **(40)**

(ಪುಟ 108–109).

**39** ಇದನ್ನು ಇಬ್ನ್ ಖುಝೈಮಃ ತಮ್ಮ 'ಸಹೀಹ್'ನಲ್ಲಿ, ಅದ್ದಾರಿಮೀ ಮತ್ತಿತರರು ವರದಿ ಮಾಡಿದ್ದಾರೆ. 'ಸಿಲ್ಸಿಲತು ಸ್ಸಹೀಹಃ'ದಲ್ಲಿ ಇದನ್ನು ಕಾಣಬಹುದು. ನಾನು ಸುದೀರ್ಘ ಕಾಲದವರೆಗೆ ಈ ಎರಡು ರಕ್‌ಅತ್‌ಗಳನ್ನು ನಿರ್ವಹಿಸುವುದರ ಬಗ್ಗೆ ಹಿಂಜರಿದಿದ್ದೆ. ಆದರೆ ಪ್ರವಾದಿ(ﷺ)ರವರ ಈ ಗೌರವಾನ್ವಿತ ಆದೇಶವನ್ನು ಕಂಡಾಗ ನಾನು ಅದನ್ನು ನಿರ್ವಹಿಸುವುದರತ್ತ ಧಾವಿಸಿದೆ. **'ರಾತ್ರಿಯಲ್ಲಿ ನಿಮ್ಮ ಕೊನೆಯ ನಮಾಝನ್ನು ವಿತ್ರ್ ಆಗಿ (ಬೆಸ ಸಂಖ್ಯೆಯಾಗಿ) ಮಾಡಿರಿ'** ಎಂಬ ಪ್ರವಾದಿ(ﷺ)ರವರ ವಚನವು ಐಚ್ಛಿಕವಾಗಿದೆಯೇ ಹೊರತು ಕಡ್ಡಾಯವಾದುದಲ್ಲ ಎಂಬುದನ್ನು ನಾನು ಅರಿತುಕೊಂಡೆ. ಇದು ಇಬ್ನ್ ನಸ್ರ್‌ರವರ (130) ಅಭಿಪ್ರಾಯವೂ ಆಗಿದೆ.

**40** ಇದನ್ನು ಇಬ್ನ್ ಖುಝೈಮಃ (1104 ಮತ್ತು 1105) ಆಇಶಾ(ರ) ಮತ್ತು ಅನಸ್(ರ) ರವರಿಂದ ಎರಡು ಸನದ್‌ಗಳಲ್ಲಿ ವರದಿ ಮಾಡಿದ್ದಾರೆ. ಈ ಎರಡು ಸನದ್‌ಗಳು ಪರಸ್ಪರ ಒಂದನ್ನೊಂದು ಬಲಪಡಿಸುತ್ತವೆ. ನೋಡಿ: 'ಸಿಫತು ಸ್ಸಲಾತ್' (124).

# الِاعْتِكَافُ
# ಇಅ್‌ತಿಕಾಫ್

**ಶರೀಅತ್‌ನಲ್ಲಿ ಒಳಪಟ್ಟದ್ದಾಗಿದೆ:**

1. ರಮದಾನ್ ತಿಂಗಳು ಮತ್ತು ಇತರ ತಿಂಗಳುಗಳು ಸೇರಿದಂತೆ ವರ್ಷದ ಯಾವುದೇ ದಿನಗಳಲ್ಲೂ ಇಅ್‌ತಿಕಾಫ್ ನಿರ್ವಹಿಸುವುದು ಸುನ್ನತ್ತಾಗಿದೆ. ಇದಕ್ಕಿರುವ ಮೂಲಾಧಾರ ಅಲ್ಲಾಹನ ಈ ವಚನವಾಗಿದೆ:

﴿ وَأَنتُمۡ عَٰكِفُونَ فِي ٱلۡمَسَٰجِدِۗ ﴾

**"ನೀವು ಮಸೀದಿಗಳಲ್ಲಿ ಇಅ್‌ತಿಕಾಫ್ ನಿರ್ವಹಿಸುತ್ತಿರುವಾಗ." (2/187)**

ಮಾತ್ರವಲ್ಲ, ಪ್ರವಾದಿ(ﷺ)ರವರು ಇಅ್‌ತಿಕಾಫ್ ನಿರ್ವಹಿಸಿದ್ದರು ಎಂದು ಅನೇಕ ಸಹೀಹಾದ ಹದೀಸ್‌ಗಳಲ್ಲಿ ವರದಿಯಾಗಿದೆ. ಹಾಗೆಯೇ ಸಲಫ್‌ಗಳಿಂದಲೂ ಕೂಡ ಮುತವಾತಿರ್ ಆಗಿ ಅಸರ್‌ಗಳು ವರದಿಯಾಗಿವೆ. ಇವೆಲ್ಲವನ್ನೂ ಇಬ್ನ್ ಅಬೀ ಶೈಬಾರವರ ಮತ್ತು ಅಬ್ದುರ್ರಝ್ಝಾಕ್‌ರವರ 'ಮುಸನ್ನಫ್'ಗಳಲ್ಲಿ ಪ್ರಸ್ತಾಪಿಸಲಾಗಿದೆ.[41]

ಶವ್ವಾಲ್ ತಿಂಗಳ ಕೊನೆಯ ಹತ್ತರಲ್ಲಿ ಪ್ರವಾದಿ(ﷺ)ರವರು ಇಅ್‌ತಿಕಾಫ್ ನಿರ್ವಹಿಸಿದ್ದರೆಂಬುದು ಸಹೀಹಾಗಿ ದೃಢಪಟ್ಟಿದೆ.[42] ಅದೇ ರೀತಿ (ಸಹೀಹಾಗಿ ದೃಢಪಟ್ಟಿರುವಂತೆ ಉಮರ್(رضي الله عنه)ರವರು ಪ್ರವಾದಿ(ﷺ)ರವರೊಂದಿಗೆ ಹೇಳಿದರು:

---

**41** ಇದಕ್ಕಿಂತ ಮುಂಚಿನ ಮುದ್ರಣದಲ್ಲಿ ಇಅ್‌ತಿಕಾಫ್‌ನ ಶ್ರೇಷ್ಠತೆಯನ್ನು ವಿವರಿಸುವ **'ಯಾರಾದರೂ ಒಂದು ದಿನ ಇಅ್‌ತಿಕಾಫ್ ನಿರ್ವಹಿಸಿದರೆ...'** ಎಂಬ ಹದೀಸನ್ನು ನಾನು ಇಲ್ಲಿ ಪ್ರಸ್ತಾಪಿಸಿದ್ದೆ. ಆದರೆ ತರುವಾಯ ಅದನ್ನು ತೆಗೆದು ಹಾಕಿದೆ. ಯಾಕೆಂದರೆ ಅದನ್ನು ತಖ್ರೀಜ್ ಮಾಡಿದ ಬಳಿಕ ಅದು ದಈಫ್ ಆಗಿದೆಯೆಂದು ನನಗೆ ಸ್ಪಷ್ಟವಾಯಿತು. ಇದರ ಬಗ್ಗೆ ನಾನು 'ಸಿಲ್ಸಿಲತುಲ್ ಅಹಾದೀಸಿ ದ್ದಈಫಃ'ದಲ್ಲಿ (5347) ವಿಶದವಾಗಿ ಮಾತನಾಡಿದ್ದೇನೆ. ನನಗೆ ಅವ್ಯಕ್ತವಾಗಿದ್ದ ಮತ್ತು ನನಗಿಂತ ಮುಂಚೆ ಅಲ್‌ಹೈಸಮೀಯವರಿಗೆ ಅವ್ಯಕ್ತವಾಗಿದ್ದ ನ್ಯೂನತೆಯನ್ನು ನಾನು ಅದರಲ್ಲಿ ಬಹಿರಂಗಪಡಿಸಿದ್ದೇನೆ.

**42** ಇದು ಅಲ್‌ಬುಖಾರಿ, ಮುಸ್ಲಿಮ್ ಮತ್ತು ಇಬ್ನ್ ಖುಝೈಮಃರವರು ತಮ್ಮ 'ಸಹೀಹ್'ಗಳಲ್ಲಿ ವರದಿ ಮಾಡಿದ ಆಇಶಾ(رضي الله عنها)ರವರ ಹದೀಸಿನ ಒಂದು ಭಾಗವಾಗಿದೆ. ಇದನ್ನು 'ಸಹೀಹ್ ಅಬೀ ದಾವೂದ್'ನಲ್ಲಿ (2127) ಕಾಣಬಹುದು.

كُنْتُ نَذَرْتُ فِي الْجَاهِلِيَّةِ أَنْ أَعْتَكِفَ لَيْلَةً فِي الْمَسْجِدِ الْحَرَامِ.

**"ಮಸ್ಜಿದುಲ್ ಹರಾಮ್‌ನಲ್ಲಿ ಒಂದು ರಾತ್ರಿ ಇಅ್ತಿಕಾಫ್ ನಿರ್ವಹಿಸುವೆನೆಂದು ನಾನು ಜಾಹಿಲೀ ಕಾಲದಲ್ಲಿ ಹರಕೆ ಹೊತ್ತಿದ್ದೆ."**

ಪ್ರವಾದಿ(ﷺ)ರವರು ಹೇಳಿದರು:

«فَأَوْفِ بِنَذْرِكَ، [فَاعْتَكِفْ لَيْلَةً]».

**"ಹಾಗಾದರೆ ತಾವು ತಮ್ಮ ಹರಕೆಯನ್ನು ನೆರವೇರಿಸಿರಿ. [ಒಂದು ರಾತ್ರಿ ಇಅ್ತಿಕಾಫ್ ನಿರ್ವಹಿಸಿರಿ]."**[43]

2. ಅಬೂ ಹುರೈರಾ(ರ)ರವರ (ಈ ಕೆಳಗಿನ) ಹದೀಸಿನ ಪ್ರಕಾರ ರಮದಾನ್ ತಿಂಗಳಲ್ಲಿ ಇಅ್ತಿಕಾಫ್ ನಿರ್ವಹಿಸುವುದಕ್ಕೆ ಒತ್ತು ನೀಡಲಾಗಿದೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَعْتَكِفُ فِي كُلِّ رَمَضَانَ عَشَرَةَ أَيَّامٍ، فَلَمَّا كَانَ الْعَامُ الَّذِي قُبِضَ فِيهِ اعْتَكَفَ عِشْرِينَ يَوْمًا.

**"ಪ್ರವಾದಿ(ﷺ)ರವರು ಪ್ರತಿ ರಮದಾನ್ ತಿಂಗಳಲ್ಲೂ ಹತ್ತು ದಿನ ಇಅ್ತಿಕಾಫ್ ನಿರ್ವಹಿಸುತ್ತಿದ್ದರು. ಅವರು ಮರಣಹೊಂದಿದ ವರ್ಷದ ರಮದಾನಿನಲ್ಲಿ ಅವರು ಇಪ್ಪತ್ತು ದಿನ ಇಅ್ತಿಕಾಫ್ ನಿರ್ವಹಿಸಿದರು."** [44]

3. ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ಇಅ್ತಿಕಾಫ್ ನಿರ್ವಹಿಸುವುದು ಶ್ರೇಷ್ಠವಾಗಿದೆ. ಯಾಕೆಂದರೆ ಅಲ್ಲಾಹು ಅಝ್ಝ ವಜಲ್ಲ್ ಪ್ರವಾದಿ(ﷺ)ರನ್ನು ಮೃತಪಡಿಸುವ ವರೆಗೂ ಅವರು ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ಇಅ್ತಿಕಾಫ್

**43** ಇದನ್ನು ಅಲ್‌ಬುಖಾರಿ, ಮುಸ್ಲಿಮ್ ಮತ್ತು ಇಬ್ನ್ ಖುಝೈಮಃರವರು ವರದಿ ಮಾಡಿದ್ದಾರೆ. 'ಮುಖ್ತಸರು ಸಹೀಹಿಲ್ ಬುಖಾರಿ'ಯಲ್ಲಿರುವಂತೆ (995) ಹೆಚ್ಚುವರಿಯು ಅಲ್‌ಬುಖಾರಿಯ ಒಂದು ವರದಿಯಲ್ಲಿರುವುದಾಗಿದೆ. 'ಸಹೀಹ್ ಅಬೀ ದಾವೂದ್'ನಲ್ಲಿ (2136–2137) ಇದನ್ನೂ ಕಾಣಬಹುದು.

**44** ಇದನ್ನು ಅಲ್‌ಬುಖಾರಿ ಮತ್ತು ಇಬ್ನ್ ಖುಝೈಮಃರವರು ತಮ್ಮ 'ಸಹೀಹ್'ಗಳಲ್ಲಿ ವರದಿ ಮಾಡಿದ್ದಾರೆ. ಇದನ್ನು 'ಸಹೀಹ್ ಅಬೀ ದಾವೂದ್'ನಲ್ಲೂ (2126–2130) ಕಾಣಬಹುದು.

ನಿರ್ವಹಿಸುತ್ತಿದ್ದರು. [45]

**ಅದರ (ಇಅ್ತಿಕಾಫ್‌ನ) ಶರತ್ತುಗಳು:**

1. ಶರೀಅತ್ತಿನ ಪ್ರಕಾರ ಇದನ್ನು ಮಸೀದಿಗಳಲ್ಲಿ ಮಾತ್ರ ನಿರ್ವಹಿಸಬೇಕಾಗಿದೆ. ಯಾಕೆಂದರೆ ಅಲ್ಲಾಹು ಹೇಳಿದ್ದಾನೆ:

﴿ وَلَا تُبَٰشِرُوهُنَّ وَأَنتُمْ عَٰكِفُونَ فِى ٱلْمَسَٰجِدِ ﴾

**“ನೀವು ಮಸೀದಿಗಳಲ್ಲಿ ಇಅ್ತಿಕಾಫ್ ನಿರ್ವಹಿಸುತ್ತಿರುವಾಗ ಅವರೊಂದಿಗೆ (ಪತ್ನಿಯರೊಂದಿಗೆ) ಮುಬಾಶರತ್[46] ಮಾಡಬಾರದು.”** [47]

ಆಇಶಾ(رضي الله عنها) ಹೇಳಿದರು:

**السُّنَّةُ فِي الْمُعْتَكِفِ أَنْ لَا يَخْرُجَ إِلَّا لِحاجَتِهِ الَّتِي لا بُدَّ لَهُ مِنْهَا، وَلَا يَعُودَ مَرِيضًا، وَلَا يَمَسَّ امْرَأَتَهُ، وَلَا يُبَاشِرَهَا، وَلَا اعْتِكَافَ إِلَّا فِي مَسْجِدِ جَمَاعَةٍ، وَالسُّنَّةُ فِيمَنْ اعْتَكَفَ أَنْ يَصُومَ.**

---

**45** ಇದನ್ನು ಅಲ್‌ಬುಖಾರಿ, ಮುಸ್ಲಿಮ್ ಮತ್ತು ಇಬ್ನ್ ಖುಝೈಮಃ (2223) ವರದಿ ಮಾಡಿದ್ದಾರೆ. ‘ಅಲ್‌ಇರ್ವಾಅ್’ (966) ಮತ್ತು ‘ಸಹೀಹ್ ಅಬೀ ದಾವೂದ್’ನಲ್ಲಿ (2125) ಇದನ್ನು ಕಾಣಬಹುದು.

**46** ಅಂದರೆ ಅವರೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದಬಾರದು. ಇಬ್ನ್ ಅಬ್ಬಾಸ್ ಹೇಳುತ್ತಾರೆ: **“ಮುಬಾಶರಃ, ಮುಲಾಮಸಃ, ಮಸ್ಸ್ ಇವೆಲ್ಲವೂ ಜಿಮಾಅ್ (ಲೈಂಗಿಕ ಸಂಪರ್ಕ) ಆಗಿದೆ. ಆದರೆ ಅಲ್ಲಾಹು ಅಝ್ಝ ವಜಲ್ಲ್ ಅವನಿಚ್ಛಿಸಿದ ಪದಗಳಿಗೆ ಅವನಿಚ್ಛಿಸಿದ ಪದಗಳನ್ನು ಪರ್ಯಾಯವಾಗಿ ಬಳಸುತ್ತಾನೆ.”** ಇದನ್ನು ಅಲ್‌ಬೈಹಕೀ (4/321) ವಿಶ್ವಾಸಯೋಗ್ಯರಾದ ವರದಿಗಾರರಿರುವ ಸನದ್‌ನೊಂದಿಗೆ ವರದಿ ಮಾಡಿದ್ದಾರೆ.

**47** ಅಲ್‌ಬಕರಃ 187. ನಾವು ಪ್ರಸ್ತಾಪಿಸಿರುವುದಕ್ಕೆ ಇಮಾಮ್ ಅಲ್‌ಬುಖಾರಿ ಕೂಡ ಇದೇ ಆಯತ್ತನ್ನು ಪುರಾವೆಯಾಗಿ ತೋರಿಸಿದ್ದಾರೆ. ಅಲ್‌ಹಾಫಿದ್ (ಇಬ್ನ್ ಹಜರ್) ಹೇಳುತ್ತಾರೆ: **“ಈ ಆಯತ್ತಿನಲ್ಲಿರುವ ಪುರಾವೆಯೇನೆಂದರೆ ಮಸೀದಿಗಳಲ್ಲದ ಸ್ಥಳಗಳಲ್ಲಿ ಇಅ್ತಿಕಾಫ್ ನಿರ್ವಹಿಸುವುದು ಸಿಂಧುವಾಗುತ್ತದೆಯೆಂದಾದರೆ ಮಸೀದಿಗಳಲ್ಲಿ ಇಅ್ತಿಕಾಫ್ ನಿರ್ವಹಿಸುವಾಗ ಲೈಂಗಿಕ ಸಂಪರ್ಕ ಹೊಂದುವುದು ನಿಷಿದ್ಧವಾಗಿದೆಯೆಂದು ವಿಶೇಷವಾಗಿ ಹೇಳುತ್ತಿರಲಿಲ್ಲ. ಯಾಕೆಂದರೆ ವಿದ್ವಾಂಸರ ಒಮ್ಮತಾಭಿಪ್ರಾಯ ಪ್ರಕಾರ ಇಅ್ತಿಕಾಫ್‌ನ ಸಂದರ್ಭದಲ್ಲಿ ಲೈಂಗಿಕ ಸಂಪರ್ಕ ಹೊಂದುವುದು ನಿಷಿದ್ಧವಾಗಿದೆ. ಆದ್ದರಿಂದ ಇಲ್ಲಿ ಮಸೀದಿಗಳು ಎಂದು ಪ್ರಸ್ತಾಪಿಸಿರುವುದರಿಂದ ಅದರ ಉದ್ದೇಶವು ಮಸೀದಿಗಳಲ್ಲೇ ಹೊರತು ಇಅ್ತಿಕಾಫ್ ಸಿಂಧುವಾಗಲಾರದು ಎಂದು ತಿಳಿದು ಬರುತ್ತದೆ.”**

**“ಇಅ್ತಿಕಾಫ್ ನಿರ್ವಹಿಸುವವನಿಗಿರುವ ಸುನ್ನತ್ ಏನೆಂದರೆ ಅವನು ತನಗೆ ಅನಿವಾರ್ಯವಾಗಿರುವ ಆವಶ್ಯಕತೆಗಳ ಹೊರತು ಹೊರ ಹೋಗಬಾರದು, ರೋಗಿಯನ್ನು ಸಂದರ್ಶಿಸಬಾರದು, ತನ್ನ ಪತ್ನಿಯನ್ನು ಸ್ಪರ್ಶಿಸಬಾರದು ಮತ್ತು ಆಕೆಯೊಂದಿಗೆ ಲೈಂಗಿಕ ಸಂಪರ್ಕ ಹೊಂದಬಾರದು. ಜಮಾಅತ್ (ಸಾಮೂಹಿಕ) ನಮಾಝ್ ನಿರ್ವಹಿಸುವ ಮಸೀದಿಗಳಲ್ಲೇ ಹೊರತು ಇಅ್ತಿಕಾಫ್ ಸಿಂಧುವಾಗಲಾರದು. ಇಅ್ತಿಕಾಫ್ ನಿರ್ವಹಿಸುವವನು ಉಪವಾಸ ಆಚರಿಸಿದವನಾಗಿರುವುದೂ ಸುನ್ನತ್ ಆಗಿದೆ.”** (48)

2. ಅದು ಜುಮುಅಃ ನಮಾಝ್ ನಿರ್ವಹಿಸಲಾಗುವ ಮಸೀದಿಯಾಗಿರಬೇಕಾಗಿದೆ. ಇಲ್ಲವಾದರೆ ಜುಮುಅಃ ನಮಾಝ್ ನಿರ್ವಹಿಸಲು ಅಲ್ಲಿಂದ ಹೊರಹೋಗಬೇಕಾದುದು ಅನಿವಾರ್ಯವಾಗುತ್ತದೆ. ಯಾಕೆಂದರೆ ಜುಮುಅಃ ನಮಾಝ್‌ಗಾಗಿ ಹೊರಹೋಗುವುದು ಕಡ್ಡಾಯವಾಗಿದೆ. ಯಾಕೆಂದರೆ ಈ ಮೇಲಿನ ಹದೀಸಿನ ಇನ್ನೊಂದು ವರದಿಯಲ್ಲಿರುವಂತೆ ಆಇಶಾ(ﵺ) ಇದನ್ನು ಹೇಳಿದ್ದಾರೆ. ಆ ವರದಿಯಲ್ಲಿ ಹೀಗಿದೆ:

...وَلَا اعْتِكَافَ إِلَّا فِي مَسْجِدٍ جَامِعٍ.

**“...ಜುಮುಅಃ ನಮಾಝ್ ನಿರ್ವಹಿಸಲಾಗುವ ಮಸೀದಿಯಲ್ಲೇ ಹೊರತು ಇಅ್ತಿಕಾಫ್ ಸಿಂಧುವಾಗಲಾರದು.”** (49)

ತರುವಾಯ ನಾನು ಸಹೀಹ್ ಆಗಿರುವ, ಸ್ಪಷ್ಟವಾಗಿರುವ ಹದೀಸೊಂದನ್ನು ಕಂಡೆ. ಅದು ಆಯತ್ತಿನಲ್ಲಿ ಹೇಳಲಾದ ‘ಮಸೀದಿ’ಗಳನ್ನು ಕೇವಲ ಮೂರು ಮಸೀದಿಗಳಿಗೆ ಮಾತ್ರ ಸೀಮಿತಗೊಳಿಸುತ್ತದೆ. ಅಂದರೆ ಮಸ್ಜಿದುಲ್ ಹರಾಮ್, ಮಸ್ಜಿದುನ್ನಬವೀ ಮತ್ತು ಮಸ್ಜಿದುಲ್ ಅಕ್ಸಾ. ಅದು ಪ್ರವಾದಿ(ﷺ)ರವರ ಈ ವಚನವಾಗಿದೆ:

«لَا اعْتِكَافَ إِلَّا فِي الْمَسَاجِدِ الثَّلَاثَةِ»

---

**48** ಇದನ್ನು ಅಲ್‌ಬೈಹಕೀ ಸಹೀಹಾದ ಸನದ್‌ನೊಂದಿಗೆ ಮತ್ತು ಅಬೂ ದಾವೂದ್ ಹಸನ್ ಆದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ. ಆಇಶಾರವರಿಂದಿರುವ ಇದರ ನಂತರದ ವರದಿಯನ್ನು ಅಬೂ ದಾವೂದ್ ವರದಿ ಮಾಡಿದ್ದಾರೆ. ‘ಸಹೀಹ್ ಅಬೀ ದಾವೂದ್’ನಲ್ಲಿ (2135) ಮತ್ತು ‘ಅಲ್‌ಇರ್ವಾಅ್’ನಲ್ಲಿ (966) ಇದನ್ನು ಕಾಣಬಹುದು.

**49** ಅಲ್‌ಬೈಹಕೀ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ ಹದೀಸಿನಲ್ಲಿ ಅವರು (ಇಬ್ನ್ ಅಬ್ಬಾಸ್) ಹೇಳುತ್ತಾರೆ: **“ಅಲ್ಲಾಹನಿಗೆ ಅತ್ಯಧಿಕ ದ್ವೇಷ ತರಿಸುವ ವಿಷಯವು ಬಿದ್‌ಅತ್‌ಗಳಾಗಿವೆ. ಮನೆಗಳಲ್ಲಿ ನಿರ್ಮಿಸಲಾದ ಮಸೀದಿಗಳಲ್ಲಿ ಇಅ್ತಿಕಾಫ್ ನಿರ್ವಹಿಸುವುದು ಬಿದ್‌ಅತ್‌ಗಳಲ್ಲಿ ಸೇರಿದ್ದಾಗಿದೆ.”**

**"ಮೂರು ಮಸೀದಿಗಳಲ್ಲೇ ಹೊರತು ಇಅ್‌ತಿಕಾಫ್ ಸಿಂಧುವಲ್ಲ."** (50)

ನಾನು ಕಂಡಿರುವಂತೆ ಸಲಫ್‌ಗಳ ಪೈಕಿ ಹುದೈಫಃ ಇಬ್ನುಲ್ ಯಮಾನ್, ಸಈದ್ ಇಬ್ನುಲ್ ಮುಸಯ್ಯಬ್ ಮತ್ತು ಅತಾಅ್ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ಅತಾಅ್ ಮಸ್ಜಿದುಲ್ ಅಕ್ಸಾವನ್ನು ಪ್ರಸ್ತಾಪಿಸಿಲ್ಲ. ಇತರರು ಜುಮುಅಃ ನಮಾಝ್ ನಿರ್ವಹಿಸಲಾಗುವ ಎಲ್ಲ ಮಸೀದಿಗಳನ್ನೂ ಅನಿರ್ಬಂಧಿತವಾಗಿ ಇದರಲ್ಲಿ ಸೇರಿಸಿದ್ದಾರೆ. ಕೆಲವರು ಇದಕ್ಕೆ ವಿರುದ್ಧವಾಗಿ ಮನೆಯಲ್ಲಿರುವ ಮಸೀದಿಯಲ್ಲೂ ಆಗಬಹುದು ಎಂದಿದ್ದಾರೆ.

ಆದರೆ ನಾವು ಮಾಡಬೇಕಾದುದು ಅವುಗಳ ಪೈಕಿ ಹದೀಸಿನೊಂದಿಗೆ ಹೊಂದಾಣಿಕೆಯಾಗುವವುಗಳನ್ನು ಮಾತ್ರ ಸ್ವೀಕರಿಸುವುದನ್ನಾಗಿದೆ. ಹೆಚ್ಚು ಬಲ್ಲವನು ಅಲ್ಲಾಹನಾಗಿದ್ದಾನೆ.

3. ಈ ಮೇಲಿನ ಆಇಶಾ(ﷺ)ರವರ ವರದಿಯಲ್ಲಿರುವಂತೆ ಇಅ್‌ತಿಕಾಫ್ ನಿರ್ವಹಿಸುವವನು ಉಪವಾಸ ಆಚರಿಸಿದವನಾಗಿರಬೇಕಾದುದು ಸುನ್ನತ್ತಾಗಿದೆ. (51)

## ಇಅ್‌ತಿಕಾಫ್‌ನಲ್ಲಿರುವವನಿಗೆ ಏನೆಲ್ಲ ಅನುಮತಿಸಲಾಗಿದೆ?

1. ಮಲಮೂತ್ರ ವಿಸರ್ಜನೆಗಾಗಿ ಹೊರಹೋಗುವುದು, ತಲೆಯನ್ನು ತೊಳೆಯುವುದಕ್ಕಾಗಿ ಅಥವಾ ಕೂದಲು ಬಾಚುವುದಕ್ಕಾಗಿ ತಲೆಯನ್ನು ಮಸೀದಿಯಿಂದ

---

**50** ಇದನ್ನು ಅತ್ತಹಾವೀ, ಅಲ್‌ಇಸ್ಮಾಈಲೀ ಮತ್ತು ಅಲ್‌ಬೈಹಕೀ ಹುದೈಫಃ ಇಬ್ನುಲ್ ಯಮಾನ್ (ﷺ)ರಿಂದಿರುವ ಸಹೀಹಾದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ. ನಾವು ಮೇಲೆ ಪ್ರಸ್ತಾಪಿಸಿದ ಇದಕ್ಕೆ ಹೊಂದಾಣಿಕೆಯಾಗುವ ಕೆಲವು ಆಸಾರ್‌ಗಳೊಂದಿಗೆ ಇದನ್ನು 'ಅಸ್ಸಹೀಹಃ'ದಲ್ಲಿ (2786) ಕಾಣಬಹುದು. ಇವೆಲ್ಲವೂ ಸಹೀಹ್ ಆಗಿವೆ.

**51** ಇದನ್ನು ಅಲ್‌ಬೈಹಕೀ ಸಹೀಹಾದ ಸನದ್‌ನೊಂದಿಗೆ ಮತ್ತು ಅಬೂ ದಾವೂದ್ ಹಸನ್ ಆದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ. ಇಮಾಮ್ ಇಬ್ನುಲ್ ಕಯ್ಯಿಮ್ 'ಝಾದುಲ್ ಮಆದ್'ನಲ್ಲಿ ಹೇಳಿದ್ದಾರೆ:

**"ಪ್ರವಾದಿ(ﷺ)ರವರು ಉಪವಾಸ ಆಚರಿಸದ ಸ್ಥಿತಿಯಲ್ಲಿ ಇಅ್‌ತಿಕಾಫ್ ನಿರ್ವಹಿಸಿದ್ದಾಗಿ ಉದ್ಧರಿಸಲ್ಪಟ್ಟಿಲ್ಲ. ಮಾತ್ರವಲ್ಲ, ಆಇಶಾ(ﷺ) ಹೇಳಿದರು: ಉಪವಾಸದೊಂದಿಗೇ ಹೊರತು ಇಅ್‌ತಿಕಾಫ್ ಸಿಂಧುವಾಗಲಾರದು. ಅಲ್ಲಾಹು ಸುಬ್‌ಹಾನಹೂ ವತಆಲಾ ಉಪವಾಸದೊಂದಿಗೇ ಹೊರತು ಇಅ್‌ತಿಕಾಫನ್ನು ಪ್ರಸ್ತಾಪಿಸಿಲ್ಲ. ಉಪವಾಸದೊಂದಿಗೇ ಹೊರತು ಪ್ರವಾದಿ(ﷺ)ರವರು ಇಅ್‌ತಿಕಾಫ್ ನಿರ್ವಹಿಸಿಲ್ಲ. ಆದ್ದರಿಂದ ಪುರಾವೆಯ ಪ್ರಕಾರ ಪ್ರಬಲವಾದ ಅಭಿಪ್ರಾಯವು ಉಪವಾಸವು ಇಅ್‌ತಿಕಾಫ್‌ಗಿರುವ ಶರತ್ತಾಗಿದೆ ಎಂಬುದಾಗಿದೆ. ಸಲಫ್‌ಗಳಲ್ಲಿ ಬಹುಸಂಖ್ಯಾತರೂ ಈ ಅಭಿಪ್ರಾಯವನ್ನೇ ಹೊಂದಿದ್ದಾರೆ. ಶೈಖುಲ್ ಇಸ್ಲಾಮ್ ಅಬುಲ್ ಅಬ್ಬಾಸ್ ಇಬ್ನ್ ತೈಮಿಯ್ಯಃರವರು ಈ ಅಭಿಪ್ರಾಯವನ್ನು ಬಲಪಡಿಸಿದ್ದಾರೆ."**

ನಾನು ಹೇಳುತ್ತೇನೆ: ನಮಾಝ್‌ಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಮಸೀದಿಗೆ ಬಂದು ಅಲ್ಲಿ ಸ್ವಲ್ಪ ಕಾಲ ತಂಗುವಾಗ ಇಅ್‌ತಿಕಾಫ್‌ನ ನಿಯ್ಯತ್ ಮಾಡುವುದು ಶರೀಅತ್ತಿನಲ್ಲಿ ಒಳಪಟ್ಟದ್ದಲ್ಲವೆಂದು ಇದರಿಂದ ತಿಳಿದುಬರುತ್ತದೆ. ಶೈಖುಲ್ ಇಸ್ಲಾಮ್ 'ಅಲ್‌ಇಖ್ತಿಯಾರಾತ್'ನಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಹೊರ ತೂರಿಸುವುದು ಇತ್ಯಾದಿಗಳಿಗೆ ಅನುಮತಿಯಿದೆ. ಆಇಶಾ(﵂)ರವರು ಹೇಳಿದರು:

«وَإِنْ كَانَ رَسُولُ اللَّهِ صَلَّى اللَّهُ عَلَيْهِ وَسَلَّمَ لَيُدْخِلُ عَلَيَّ رَأْسَهُ وَهُوَ [مُعْتَكِفٌ] فِي الْمَسْجِدِ، [وَأَنَا فِي حُجْرَتِي] فَأُرَجِّلُهُ، [وَفِي رِوَايَةٍ: فَأَغْسِلُهُ وَإِنَّ بَيْنِي وَبَيْنَهُ لَعَتَبَةُ الْبَابِ وَأَنَا حَائِضٌ]، وَكَانَ لَا يَدْخُلُ الْبَيْتَ إِلَّا لِحَاجَةِ [الْإِنْسَانِ] إِذَا كَانَ مُعْتَكِفًا.

**"ಪ್ರವಾದಿ(ﷺ)ರವರು ಮಸೀದಿಯಲ್ಲಿ ಇಅ್‌ತಿಕಾಫ್‌ನಲ್ಲಿರುವಾಗ ಅವರು ತಮ್ಮ ತಲೆಯನ್ನು ಮಸೀದಿಯಿಂದ ತೂರಿಸುತ್ತಿದ್ದರು. ಆಗ [ನಾನು ನನ್ನ ಕೋಣೆಯಲ್ಲಿದ್ದುಕೊಂಡು] ಅವರ ತಲೆಗೂದಲನ್ನು ಬಾಚುತ್ತಿದ್ದೆ. [ಇನ್ನೊಂದು ವರದಿಯಲ್ಲಿ: ನಾನು ಅವರ ತಲೆಯನ್ನು ತೊಳೆಯುತ್ತಿದ್ದೆ. ನನ್ನ ಮತ್ತು ಅವರ ಮಧ್ಯೆ ಬಾಗಿಲ ಹೊಸ್ತಿಲು ಮಾತ್ರ ಇತ್ತು. ಆಗ ನಾನು ಋತುಸ್ರಾವವಿರುವವಳಾಗಿದ್ದೆ.] ಅವರು ಇಅ್‌ತಿಕಾಫ್‌ನಲ್ಲಿರುವಾಗ [ಮನುಷ್ಯನ] ಅಗತ್ಯಗಳಿಗಾಗಿ ಹೊರತು ಮನೆಯನ್ನು ಪ್ರವೇಶಿಸುತ್ತಿರಲಿಲ್ಲ."** (52)

2. ಇಅ್‌ತಿಕಾಫ್‌ನಲ್ಲಿರುವವರಿಗೆ ಹಾಗೂ ಮತ್ತಿತರರಿಗೆ ಮಸೀದಿಯೊಳಗೆ ವುದೂ ಮಾಡುವುದಕ್ಕೆ ಅನುಮತಿಯಿದೆ. ಯಾಕೆಂದರೆ ಪ್ರವಾದಿ(ﷺ)ರವರ ಸೇವೆ ಮಾಡಿದ ವ್ಯಕ್ತಿಯೊಬ್ಬರು ಹೇಳುತ್ತಾರೆ:

تَوَضَّأَ النَّبِيُّ صَلَّى اللَّهُ عَلَيْهِ وَسَلَّمَ فِي الْمَسْجِدِ وُضُوءًا خَفِيفًا.

**"ಪ್ರವಾದಿ(ﷺ)ರವರು ಮಸೀದಿಯಲ್ಲಿ ಹಗುರವಾಗಿ ವುದೂ ಮಾಡಿದರು."** (53)

3. ಮಸೀದಿಯ ಹಿಂಭಾಗದಲ್ಲಿ ಸಣ್ಣ ಡೇರೆಯನ್ನು ಹಾಕಿ ಅಲ್ಲಿ ಇಅ್‌ತಿಕಾಫ್

---

**52** ಇದನ್ನು ಅಲ್‌ಬುಖಾರಿ, ಮುಸ್ಲಿಮ್, ಇಬ್ನ್ ಅಬೀ ಶೈಬಾ ಮತ್ತು ಅಹ್ಮದ್ ವರದಿ ಮಾಡಿದ್ದಾರೆ. ಹೆಚ್ಚುವರಿಯು ಇಬ್ನ್ ಅಬೀ ಶೈಬಾ ಮತ್ತು ಅಹ್ಮದ್‌ನಲ್ಲಿರುವುದಾಗಿದೆ. 'ಸಹೀಹ್ ಅಬೀ ದಾವೂದ್'ನಲ್ಲಿ (2131–2132) ಇದನ್ನು ಕಾಣಬಹುದು.

**53** ಇದನ್ನು ಅಲ್‌ಬೈಹಕೀ ಉತ್ತಮವಾದ ಸನದ್‌ನೊಂದಿಗೆ ಮತ್ತು ಅಹ್ಮದ್ (5/364) ಸಂಕ್ಷಿಪ್ತ ರೂಪದಲ್ಲಿ ಸಹೀಹಾದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ.

ನಿರ್ವಹಿಸುವುದಕ್ಕೆ ಅನುಮತಿಯಿದೆ. ಯಾಕೆಂದರೆ ಪ್ರವಾದಿ(ﷺ)ರವರು ಇಅ್ತಿಕಾಫ್ ನಿರ್ವಹಿಸುವುದಕ್ಕಾಗಿ ಆಇಶಾ(ರ)ರವರು ಅವರಿಗೆ ಒಂದು 'ಖಿಬಾಅ್'[54] ನಿರ್ಮಿಸಿಕೊಡುತ್ತಿದ್ದರು. ಇದು ಪ್ರವಾದಿ(ﷺ)ರವರ ಆದೇಶದ ಮೇರೆಗಾಗಿತ್ತು.[55]

ಒಮ್ಮೆ ಪ್ರವಾದಿ(ﷺ)ರವರು ತುರ್ಕೀ ಕುಬ್ಬವೊಂದರಲ್ಲಿ[56] ಇಅ್ತಿಕಾಫ್ ನಿರ್ವಹಿಸಿದರು. ಅದರ ಸುದ್ದಃದಲ್ಲಿ ಒಂದು ಚಾಪೆಯಿತ್ತು.[57]

## ಮಹಿಳೆಗೆ ಇಅ್ತಿಕಾಫ್ ನಿರ್ವಹಿಸಲು ಮತ್ತು ಮಸೀದಿಯಲ್ಲಿ ಇಅ್ತಿಕಾಫ್‌ನಲ್ಲಿರುವ ತನ್ನ ಪತಿಯನ್ನು ಸಂದರ್ಶಿಸಲು ಅನುಮತಿಯಿದೆ:

4. ಮಹಿಳೆಗೆ ಮಸೀದಿಯಲ್ಲಿ ಇಅ್ತಿಕಾಫ್ ನಿರ್ವಹಿಸುತ್ತಿರುವ ತನ್ನ ಪತಿಯನ್ನು ಸಂದರ್ಶಿಸಲು ಅನುಮತಿಯಿದೆ. ಹಾಗೆಯೇ ಮಸೀದಿಯ ದ್ವಾರದ ತನಕ ಬಂದು ಆಕೆಯನ್ನು ಬೀಳ್ಕೊಡಲು ಪತಿಗೂ ಅನುಮತಿಯಿದೆ. ಯಾಕೆಂದರೆ ಸಫಿಯ್ಯಃ(ರ) ರವರು ಹೇಳಿದರು:

---

**54** ಅರಬರು ತುಪ್ಪಳ ಅಥವಾ ಉಣ್ಣೆಯಿಂದ –ಪ್ರಾಣಿಯ ಕೂದಲಿನಿಂದಲ್ಲ– ನಿರ್ಮಿಸುವ ಮನೆಗೆ 'ಖಿಬಾಅ್' ಎನ್ನುತ್ತಾರೆ. ಅದು ಎರಡು ಅಥವಾ ಮೂರು ಕಂಬಗಳ ಆಧಾರದ ಮೇಲಿರುತ್ತದೆ. –ಅನ್ನಿಹಾಯಃ.

**55** ಇದನ್ನು ಅಲ್‌ಬುಖಾರಿ ಮತ್ತು ಮುಸ್ಲಿಮ್ ಆಇಶಾರಿಂದ ವರದಿ ಮಾಡಿದ್ದಾರೆ. ಇಲ್ಲಿ ಆಇಶಾರವರು ಮಾಡಿದ ಕೃತ್ಯವು ಅಲ್‌ಬುಖಾರಿಯಲ್ಲಿ ವರದಿಯಾಗಿದ್ದರೆ ಅದಕ್ಕಿರುವ ಪ್ರವಾದಿ(ﷺ) ರವರ ಆದೇಶವು ಮುಸ್ಲಿಮ್‌ನಲ್ಲಿ ವರದಿಯಾಗಿದೆ. ಇದರ ತಖ್ರೀಜನ್ನು ಈಗಾಗಲೇ ನೀಡಲಾಗಿದೆ. ನೋಡಿ: ಪುಟ 47 ಟಿಪ್ಪಣಿ ಸಂಖ್ಯೆ: 42.

**56** ಅಂದರೆ ಸಣ್ಣ ಗುಡಾರ. ಸುದ್ದಃ ಎಂದರೆ ಬಾಗಿಲನ್ನು ಮಳೆಯಿಂದ ರಕ್ಷಿಸುವುದಕ್ಕಾಗಿ ಅದರ ಮೇಲೆ ಹಾಕಲಾಗುವ ಒಂದು ಬಟ್ಟೆಯ ಮೇಲ್ಛಾವಣಿ. ಇಲ್ಲಿ ಅದರ ಅರ್ಥವು ಅಸ್ಸಿಂದೀ ಹೇಳಿದಂತೆ ಅದರೊಳಗೆ (ಗುಡಾರದೊಳಗೆ) ಯಾರೂ ದೃಷ್ಟಿ ಬೀರದಂತೆ ಪ್ರವಾದಿ(ﷺ)ರವರು ಅದರ ಸುದ್ದಃದ ಮೇಲೆ ಒಂದು ಚಾಪೆಯನ್ನು ಹಾಕಿದ್ದರು ಎಂದಾಗಿದೆ. ಆದರೆ ಹೆಚ್ಚು ಯೋಗ್ಯವಾದ ಅರ್ಥವು: ಜನರು ಅದರ (ಗುಡಾರದ) ಮುಂಭಾಗದಿಂದ ಹಾದುಹೋಗುವುದರಿಂದಾಗಿ ಇಅ್ತಿಕಾಫ್ ನಿರ್ವಹಿಸುವವನ ಗಮನವು ಅವರೆಡೆಗೆ ಹರಿಯದೆ ಇಅ್ತಿಕಾಫ್‌ನ ಉದ್ದೇಶ ಮತ್ತು ಸ್ಫೂರ್ತಿಯು ಪೂರ್ಣವಾಗಿ ಲಭ್ಯವಾಗುವುದಕ್ಕಾಗಿ ಹೀಗೆ ಮಾಡಲಾಗಿದೆ. ಇಮಾಮ್ ಇಬ್ನುಲ್ ಕಯ್ಯಿಮ್ ಹೇಳಿದಂತೆ: **"ಇದು ಅಜ್ಞಾನಿಗಳು ಮಾಡುತ್ತಿರುವುದಕ್ಕೆ ತದ್ವಿರುದ್ಧವಾಗಿದೆ. ಅವರು ಇಅ್ತಿಕಾಫ್ ಮಾಡುವ ಸ್ಥಳವನ್ನು ಮೋಜಿನ, ಸಂದರ್ಶಕರನ್ನು ಸ್ವೀಕರಿಸುವ ಮತ್ತು ಅವರೊಂದಿಗೆ ಹರಟೆಹೊಡೆಯುವ ಸ್ಥಳವನ್ನಾಗಿ ಮಾಡಿಕೊಳ್ಳುತ್ತಾರೆ. ಆದ್ದರಿಂದ ಇವರ ಇಅ್ತಿಕಾಫ್ ಒಂದು ವಿಧವಾದರೆ ಪ್ರವಾದಿ(ﷺ)ರವರ ಇಅ್ತಿಕಾಫ್ ಬೇರೆಯೇ ವಿಧವಾಗಿದೆ. ಯಶಸ್ಸನ್ನು ದಯಪಾಲಿಸುವವನು ಅಲ್ಲಾಹನಾಗಿದ್ದಾನೆ."**

**57** ಇದು ಅಬೂ ಸಈದ್ ಅಲ್‌ಖುದ್ರೀಯವರ ಹದೀಸಿನ ಒಂದು ಭಾಗವಾಗಿದೆ. ಇದನ್ನು ಮುಸ್ಲಿಮ್ ಮತ್ತು ಇಬ್ನ್ ಖುಝೈಮಃ ತಮ್ಮ 'ಸಹೀಹ್'ಗಳಲ್ಲಿ ವರದಿ ಮಾಡಿದ್ದಾರೆ. 'ಸಹೀಹ್ ಅಬೀ ದಾವೂದ್'ನಲ್ಲಿ (1251) ಇದನ್ನು ಕಾಣಬಹುದು.

كَانَ النَّبِيُّ صَلَّى اللَّهُ عَلَيْهِ وَسَلَّمَ مُعْتَكِفًا [فِي الْمَسْجِدِ فِي الْعَشْرِ الْأَوَاخِرِ مِنْ رَمَضَانَ] فَأَتَيْتُهُ أَزُورُهُ لَيْلًا، [وَعِنْدَهُ أَزْوَاجُهُ، فَرُحْنَ]، فَحَدَّثْتُهُ [سَاعَةً]، ثُمَّ قُمْتُ لِأَنْقَلِبَ، [فَقَالَ: «لَا تَعْجَلِي حَتَّى أَنْصَرِفَ مَعَكِ»]، فَقَامَ مَعِي لِيَقْلِبَنِي، وَكَانَ مَسْكَنُهَا فِي دَارِ أُسَامَةَ بْنِ زَيْدٍ [حَتَّى إِذَا كَانَ عِنْدَ بَابِ الْمَسْجِدِ الَّذِي عِنْدَ بَابِ أُمِّ سَلَمَةَ]، فَمَرَّ رَجُلَانِ مِنَ الْأَنْصَارِ، فَلَمَّا رَأَيَا النَّبِيَّ صَلَّى اللَّهُ عَلَيْهِ وَسَلَّمَ أَسْرَعَا، فَقَالَ النَّبِيُّ صَلَّى اللَّهُ عَلَيْهِ وَسَلَّمَ: «عَلَى رِسْلِكُمَا، إِنَّهَا صَفِيَّةُ بِنْتُ حُيَيٍّ»، فَقَالَا: سُبْحَانَ اللَّهِ، يَا رَسُولَ اللَّهِ، قَالَ: «إِنَّ الشَّيْطَانَ يَجْرِي مِنَ الْإِنْسَانِ مَجْرَى الدَّمِ، وَإِنِّي خَشِيتُ أَنْ يَقْذِفَ فِي قُلُوبِكُمَا شَرًّا»، أَوْ قَالَ: «شَيْئًا».

“ಪ್ರವಾದಿ(ﷺ)ರವರು [ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ಮಸೀದಿಯಲ್ಲಿ] ಇಅ್ತಿಕಾಫ್‌ನಲ್ಲಿದ್ದಾಗ ಒಂದು ರಾತ್ರಿ ನಾನು ಅವರನ್ನು ಸಂದರ್ಶಿಸಲು ತೆರಳಿದೆ. [ಅವರ ಪಕ್ಕದಲ್ಲಿ ಅವರ ಪತ್ನಿಯರಿದ್ದರು. ಆಗ ಅವರು (ಪತ್ನಿಯರು) ಹೊರಟು ಹೋದರು]. ನಾನು [ಒಂದು ಘಂಟೆಯ ಕಾಲ] ಅವರೊಂದಿಗೆ ಮಾತನಾಡಿದೆ. ತರುವಾಯ ನಾನು ಹೊರಡಲು ಎದ್ದು ನಿಂತೆ. [ಆಗ ಅವರು ಹೇಳಿದರು: ಆತುರ ಪಡಬೇಡ. ನಾನೂ ಬರುತ್ತೇನೆ.] ತರುವಾಯ ನನ್ನನ್ನು ಬೀಳ್ಕೊಡುವುದಕ್ಕಾಗಿ ಪ್ರವಾದಿ(ﷺ)ರವರು ಎದ್ದರು. ಸಫಿಯ್ಯಃ(رضي الله عنها)ರವರ ವಾಸಸ್ಥಳ ಉಸಾಮ ಇಬ್ನ್ ಝೈದ್(رضي الله عنه)ರವರ ಮನೆಯಲ್ಲಾಗಿತ್ತು. [ಹಾಗೆ ಮಸೀದಿಯ ದ್ವಾರದ ಬಳಿಗೆ ಅಂದರೆ ‘ಬಾಬು ಉಮ್ಮಿ ಸಲಮಾ’ದ ಬಳಿಗೆ ಅವರು ನನ್ನೊಂದಿಗೆ ಬಂದಾಗ] ಅನ್ಸಾರ್‌ಗಳಲ್ಲಿ ಸೇರಿದ ಇಬ್ಬರು ವ್ಯಕ್ತಿಗಳು ಅಲ್ಲಿಂದ ಹಾದುಹೋದರು. ಪ್ರವಾದಿ(ﷺ)ರವರನ್ನು ಕಂಡೊಡನೆ ಅವರು ವೇಗವಾಗಿ ನಡೆಯತೊಡಗಿದರು. ಆಗ ಪ್ರವಾದಿ(ﷺ)ರವರು ಹೇಳಿದರು: ನಿಧಾನವಾಗಿ! ಈಕೆ ಹುಯಯ್ಯ್‌ನ ಮಗಳು ಸಫಿಯ್ಯಃ. ಆಗ ಅವರಿಬ್ಬರು ಹೇಳಿದರು: ಸುಬ್‌ಹಾನಲ್ಲಾಹ್! ಓ ಅಲ್ಲಾಹನ ಸಂದೇಶವಾಹಕರೇ! ಆಗ ಪ್ರವಾದಿ(ﷺ)ರವರು ಹೇಳಿದರು: ಖಂಡಿತವಾಗಿಯೂ ಶೈತಾನನು ಮನುಷ್ಯ ಶರೀರದಲ್ಲಿ ರಕ್ತವು ಚಲಿಸುವಲ್ಲೆಲ್ಲ ಚಲಿಸುತ್ತಾನೆ. ಅವನು ನಿಮ್ಮಿಬ್ಬರ ಹೃದಯದಲ್ಲಿ ಕೆಡುಕನ್ನು (ಅಥವಾ ಏನನ್ನಾದರೂ) ಹಾಕುವನೋ

**ಎಂದು ನಾನು ಭಯಪಟ್ಟಿದ್ದೆ.” (58)**

ಆಕೆಗೆ ತನ್ನ ಪತಿಯೊಂದಿಗೆ ಅಥವಾ ಒಂಟಿಯಾಗಿ ಇಅ್ತಿಕಾಫ್ ನಿರ್ವಹಿಸಲು ಅನುಮತಿಯಿದೆ. ಯಾಕೆಂದರೆ ಆಇಶಾ(﵂)ರವರು ಹೇಳಿದರು:

**اعْتَكَفَتْ مَعَ رَسُولِ اللَّهِ صَلَّى اللَّهُ عَلَيْهِ وَسَلَّمَ امْرَأَةٌ مُسْتَحَاضَةٌ [وَفِي رِوَايَةٍ: أَنَّهَا أُمُّ سَلَمَةَ] مِنْ أَزْوَاجِهِ، فَكَانَتْ تَرَى الْحُمْرَةَ وَالصُّفْرَةَ فَرُبَّمَا وَضَعْنَا الطَّسْتَ تَحْتَهَا وَهِيَ تُصَلِّي.**

**“ಪ್ರವಾದಿಪತ್ನಿಯರ ಪೈಕಿ ರಕ್ತಸ್ರಾವವಿರುವ ಒಬ್ಬರು (ಇನ್ನೊಂದು ವರದಿಯಲ್ಲಿ ಅದು ಉಮ್ಮು ಸಲಮಾ ಎಂದಿದೆ) ಪ್ರವಾದಿ(ﷺ)ರವರ ಜೊತೆಗೆ ಇಅ್ತಿಕಾಫ್ ನಿರ್ವಹಿಸಿದರು. ಆಕೆ ಕೆಂಪು ಮತ್ತು ಹಳದಿ ರಕ್ತವು ತನ್ನಿಂದ ಸ್ರವಿಸುತ್ತಿರುವುದಾಗಿ ಕಾಣುತ್ತಿದ್ದರು. ಆದ್ದರಿಂದ ಆಕೆ ನಮಾಝ್ ಮಾಡುವಾಗ ಕೆಲವೊಮ್ಮೆ ನಾವು ಆಕೆಯ ಕೆಳಗಡೆ ತಸ್ತ್ (ತಾಮ್ರದ ದೊಡ್ಡ ತಟ್ಟೆ) ಇಡುತ್ತಿದ್ದೆವು.” (59)**

ಆಇಶಾ(﵂)ರವರು ಹೇಳಿದರು:

**كَانَ النَّبِيُّ صَلَّى اللَّهُ عَلَيْهِ وَسَلَّمَ يَعْتَكِفُ الْعَشْرَ الْأَوَاخِرَ مِنْ رَمَضَانَ حَتَّى تَوَفَّاهُ اللَّهُ، ثُمَّ اعْتَكَفَ أَزْوَاجُهُ مِنْ بَعْدِهِ.**

**“ಪ್ರವಾದಿ(ﷺ)ರವರು ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ, ಅಲ್ಲಾಹು ಅವರನ್ನು ಮೃತಪಡಿಸುವ ತನಕ ಇಅ್ತಿಕಾಫ್ ನಿರ್ವಹಿಸುತ್ತಿದ್ದರು. ಅವರ ಮರಣಾನಂತರ ಅವರ ಪತ್ನಿಯರು ಇಅ್ತಿಕಾಫ್ ನಿರ್ವಹಿಸುತ್ತಿದ್ದರು.” (60)**

---

**58** ಇದನ್ನು ಅಲ್‌ಬುಖಾರಿ, ಮುಸ್ಲಿಮ್ ಮತ್ತು ಅಬೂ ದಾವೂದ್ ವರದಿ ಮಾಡಿದ್ದಾರೆ. ಹೆಚ್ಚುವರಿಯು ಅಬೂ ದಾವೂದ್‌ರದ್ದಾಗಿದೆ. ‘ಸಹೀಹ್ ಅಬೀ ದಾವೂದ್’ನಲ್ಲಿ (2133–2134) ಇದನ್ನು ಕಾಣಬಹುದು.

**59** ಇದನ್ನು ಅಲ್‌ಬುಖಾರಿ ವರದಿ ಮಾಡಿದ್ದಾರೆ. ‘ಸಹೀಹ್ ಅಬೀ ದಾವೂದ್’ನಲ್ಲಿ (2138) ಇದನ್ನು ಕಾಣಬಹುದು. ‘ಫತ್‌ಹುಲ್ ಬಾರಿ’ಯಲ್ಲಿರುವಂತೆ (4/281) ಇನ್ನೊಂದು ವರದಿಯನ್ನು ಸಈದ್ ಇಬ್ನ್ ಮನ್ಸೂರ್ ವರದಿ ಮಾಡಿದ್ದಾರೆ. ಆದರೆ ಅದ್ದಾರಿಮೀ (1/22) ಈಕೆಯನ್ನು ಝೈನಬ್ ಎಂದಿದ್ದಾರೆ. ಹೆಚ್ಚು ಬಲ್ಲವನು ಅಲ್ಲಾಹನಾಗಿದ್ದಾನೆ.

**60** ಇದನ್ನು ಅಲ್‌ಬುಖಾರಿ, ಮುಸ್ಲಿಮ್ ಮತ್ತಿತರರು ವರದಿ ಮಾಡಿದ್ದಾರೆ. ಇದರ ತಖ್ರೀಜನ್ನು

ನಾನು ಹೇಳುತ್ತೇನೆ: ಮಹಿಳೆಯರಿಗೂ ಕೂಡ ಇಅ್‌ತಿಕಾಫ್ ನಿರ್ವಹಿಸುವುದಕ್ಕೆ ಅನುಮತಿಯಿದೆ ಎಂಬುದಕ್ಕೆ ಇದರಲ್ಲಿ ಪುರಾವೆಯಿದೆ. ಆದರೆ ಅನೇಕ ಪುರಾವೆಗಳ ತಳಹದಿಯಲ್ಲಿ ಅವರ ಇಅ್‌ತಿಕಾಫ್ ಅವರ ಪೋಷಕರ ಅನುಮತಿ, ಫಿತ್ನದಿಂದ ನಿರ್ಭೀತಿ ಮತ್ತು ಅನ್ಯಪುರುಷರಿಂದ ದೂರವಿರುವುದು ಮೊದಲಾದ ನಿಬಂಧನೆಗಳೊಂದಿಗೆ ಬಂಧಿತವಾಗಿದೆ ಎಂಬ ವಿಷಯದಲ್ಲಿ ಸಂದೇಹವಿಲ್ಲ. ಫಿಕ್‌ಹಿನ ನಿಯಮವು ಹೀಗಿದೆ:

دَرْءُ الْمَفَاسِدِ مُقَدَّمٌ عَلَى جَلْبِ الْمَصَالِحِ.

**“ಒಳಿತುಗಳನ್ನು ತರುವುದಕ್ಕಿಂತಲೂ ಕೆಡುಕುಗಳನ್ನು ನಿವಾರಿಸುವುದಕ್ಕೆ ಹೆಚ್ಚು ಆದ್ಯತೆ ನೀಡಬೇಕಾಗಿದೆ.”**

5. ಲೈಂಗಿಕ ಸಂಪರ್ಕವು ಇಅ್‌ತಿಕಾಫನ್ನು ಅಸಿಂಧುಗೊಳಿಸುತ್ತದೆ. ಯಾಕೆಂದರೆ ಅಲ್ಲಾಹು ತಆಲಾ ಹೇಳಿದ್ದಾನೆ:

﴿وَلَا تُبَٰشِرُوهُنَّ وَأَنتُمْ عَٰكِفُونَ فِى ٱلْمَسَٰجِدِ﴾

**“ಆದರೆ ನೀವು ಮಸೀದಿಗಳಲ್ಲಿ ಇಅ್‌ತಿಕಾಫ್ ನಿರ್ವಹಿಸುತ್ತಿರುವಾಗ ಅವರೊಂದಿಗೆ (ಪತ್ನಿಯರೊಂದಿಗೆ) ಲೈಂಗಿಕ ಸಂಪರ್ಕ ಮಾಡದಿರಿ.” (2/187)**

ಇಬ್ನ್ ಅಬ್ಬಾಸ್ ಹೇಳುತ್ತಾರೆ:

إِذَا جَامَعَ الْمُعْتَكِفُ بَطَلَ اعْتِكَافُهُ، وَاسْتَأْنَفَ.

**“ಇಅ್‌ತಿಕಾಫ್ ಮಾಡುವವನು ಲೈಂಗಿಕ ಸಂಪರ್ಕ ಮಾಡಿದರೆ ಅವನ ಇಅ್‌ತಿಕಾಫ್ ಅಸಿಂಧುವಾಗುತ್ತದೆ. ಅವನು ಇಸ್ತಿಅ್‌ನಾಫ್ ಮಾಡಬೇಕಾಗಿದೆ.”** [61]

ಓ ಅಲ್ಲಾಹ್! ನಿನ್ನ ಪರಿಪಾವನತೆಯನ್ನು ನಿನ್ನ ಸ್ತುತಿಯೊಂದಿಗೆ ನಾನು

---

ಈಗಾಗಲೇ ನೀಡಲಾಗಿದೆ (ಪುಟ 49 ಟಿಪ್ಪಣಿ ಸಂಖ್ಯೆ 45)

**61** ಇದನ್ನು ಇಬ್ನ್ ಅಬೀ ಶೈಬಾ (3/92) ಮತ್ತು ಅಬ್ದುರ್ರಝ್ಝಾಕ್ (4/363) ಸಹೀಹಾದ ಸನದ್‌ನೊಂದಿಗೆ ವರದಿ ಮಾಡಿದ್ದಾರೆ. ಇಸ್ತಿಅ್‌ನಾಫ್ ಮಾಡುವುದು ಎಂದರೆ ಇಅ್‌ತಿಕಾಫನ್ನು ಪುನಃ ನಿರ್ವಹಿಸುವುದು ಎಂದರ್ಥ.

ಕೊಂಡಾಡುತ್ತೇನೆ. ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ನಾನು ನಿನ್ನೊಂದಿಗೆ ಪಾಪಮುಕ್ತಿಯನ್ನು ಬೇಡುತ್ತೇನೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುತ್ತೇನೆ.

ಹಿಜರಿ ವರ್ಷ ರಜಬ್ 26, 1406 ಆದಿತ್ಯವಾರದಂದು ಇದರ ಲೇಖಕರಿಂದ ಈ ಪ್ರಬಂಧದ ಪುನರಾವಲೋಕನ, ತಿದ್ದುಪಡಿ ಮತ್ತು ಹೊಸ ಪ್ರಯೋಜನಗಳ ಸೇರ್ಪಡೆಯು ಮುಗಿದಿದೆ. ಅನಕ್ಷರಸ್ಥರಾದ ಪ್ರವಾದಿ ಮುಹಮ್ಮದ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಅಲ್ಲಾಹನ ಸಲಾತ್ ಮತ್ತು ಸಲಾಮ್‌ಗಳು ಇರಲಿ.

**ಅಮ್ಮಾನ್ – ಜೋರ್ಡಾನ್.**

**ಇದನ್ನು ಬರೆದವರು**

**ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ**

# ನಮ್ಮ ಇತರ ಪ್ರಕಟಣೆಗಳು

1. ಪ್ರವಾದಿ(ﷺ)ರವರ ಸುನ್ನತ್ ಪ್ರಕಾರ ಅಮಲ್ ಮಾಡಬೇಕಾದ ಅನಿವಾರ್ಯತೆ ಮತ್ತು ಅದನ್ನು ತಿರಸ್ಕರಿಸುವವನ ಕುಫ್ರ್
2. ಮಾನವಕುಲದಲ್ಲಿ ಶಿರ್ಕ್ ಸಾಗಿ ಬಂದ ದಾರಿ
3. ತವಸ್ಸುಲ್ –ಅದರ ವಿಧಗಳು ಮತ್ತು ವಿಧಿಗಳು
4. ದಿಕ್ರ್‌ಗಳು ಪ್ರವಾದಿ(ﷺ)ರವರ ವಚನಗಳಿಂದ
5. ತೌಹೀದ್‌ನ ನೈಜ ವಿಶ್ವಾಸ
6. ಅಹ್ಲು ಸುನ್ನಃ ವಲ್ ಜಮಾಅತಿನ ವಿಶ್ವಾಸ
7. ಹಜ್ ಮತ್ತು ಉಮ್ರಾ
8. ಪ್ರವಾದಿ(ﷺ)ರವರ ನಮಾಝ್ ಕ್ರಮ (ಸಂಕ್ಷಿಪ್ತವಾಗಿ)
9. ಪ್ರವಾದಿ(ﷺ)ರವರ ಮರಣ –ದುರಂತ ಮತ್ತು ಪರಿಣಾಮ
10. ದುಲ್‌ಹಜ್ ಹತ್ತರ ಶ್ರೇಷ್ಠತೆಗಳು
11. ಇಸ್ಲಾಮನ್ನು ಅರಿಯಲು ಒಂದು ಸಂಕ್ಷಿಪ್ತ, ಸಚಿತ್ರ ಮಾರ್ಗದರ್ಶಿ
12. ಆಧುನಿಕವಾದಿಗಳು ಮತ್ತು ಹದೀಸ್ ನಿಷೇಧಿಗಳು
13. ಅಲ್ಲಾಹನೆಡೆಗೆ ದಅ್‌ವಾ ಮಾಡುವವನ ಪೂರ್ವಸಿದ್ಧತೆ
14. ದಿ ಲೈಟ್ ಎಕ್ಸಿಬಿಷನ್ ಆನ್ ಇಸ್ಲಾಮ್


ಪ್ರತಿಗಳಿಗಾಗಿ ಸಂಪರ್ಕಿಸಿರಿ:

# Manhaj-Al-Ambiya

## CD/DVD & Book Store

**Hotel Intercity Building, Opp. Ibrahim Khaleel Masjid,**
**Nellikai Road, Mangalore - 575 001**

**Telephone: (91) 824 244 3484**

**Mobile : 961 107 1403, 961 107 1429**

*Email : iicmanglore@gmail.com*

# Manhaj-Al-Ambiya

Call & Guidance Centre ®

Mangalore

*Email : al.ambiya@gmail.com*

**ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಸುನ್ನತ್ ಆಧಾರಿತ ಪುಸ್ತಕಗಳಿಗೆ**

**ಮತ್ತು**

**ಇಸ್ಲಾಮಿಕ್ ಸಿಡಿ/ಡಿವಿಡಿಗಳಿಗೆ**

**ನಮ್ಮ ಈ ಕೆಳಗಿನ ಶಾಖೆಗೆ ಭೇಟಿ ನೀಡಿರಿ**

# CD/DVD & Book Store

**Hotel Intercity Building, Opp. Ibrahim Khaleel Masjid,**
**Nellikai Road, Mangalore - 575 001**

**Telephone: (91) 824 244 3484**

**Mobile : 961 107 1403, 961 107 1429**

*Email : iicmanglore@gmail.com*

ಇಸ್ಲಾಮಿನ ಕುರಿತು ಮುಸ್ಲಿಮ್ ಮತ್ತು ಮುಸ್ಲಿಮೇತರರಲ್ಲಿರುವ
ತಪ್ಪುಕಲ್ಪನೆಗಳ ನಿವಾರಣೆಗಾಗಿ

# ಸತ್ಯ ಸಾರಥಿ

ಮಾಸಿಕ




**ಓದಿರಿ... ಪ್ರೋತ್ಸಾಹಿಸಿರಿ... ಚಂದಾದಾರರಾಗಿರಿ...**

**ಚಂದಾದರ ವಾರ್ಷಿಕ : ₹ 120.00**
**ಅರ್ಧವಾರ್ಷಿಕ : ₹ 60.00**

ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿರಿ:

**ಸತ್ಯಸಾರಥಿ ಕನ್ನಡ ಮಾಸಿಕ,**
**14–37 ಜಿ(1), ವಿನಾಯಕ ಕಾಂಪ್ಲೆಕ್ಸ್,**
**ಕೈಕಂಬ, ಬಿ. ಸಿ. ರೋಡ್, ಬಂಟ್ವಾಳ ದ.ಕ.**
**ಮೊಬೈಲ್: 9632897299**
*email: satyasarathi2011@gmail.com*